ಶ್ರೀ ಸಿ.ಬೈರೇಗೌಡ :– ಈಗಿರತಕ್ಕ ಪರಿಸ್ಥಿತಿ ಎಂದರೆ ಸಮಿತಿ ರದ್ದಾಗಿ ಕೆಲಸ ಸ್ಥಗಿತವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ 100–150 ಜನ ಮಕ್ಕಳಿಗೆ ಒಬ್ಬ ಉಪಾಧ್ಯಾಯನಿದ್ದಾನೆ..... ಅಲ್ಲಿ ಮಕ್ಕಳ ವಿದ್ಯಾಭ್ಯಾಸ ಹೋಯಿತು.......

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ :– ನಿಮಗೆ ಸರ್ಕಾರದ ಉತ್ತರದ ಅಪೇಕ್ಷೆ ಇದ್ದರೆ ನಾವು ಹೇಳುವುದನ್ನು ಕೇಳಿ. ಇಲ್ಲದಿದ್ದರೆ ನೀವು ಭಾಷಣ ಮಾಡಿ ನಾನು ಕೇಳುತ್ತೇನೆ. ಸರ್ಕಾರದವರು ಏನೋ ತಪ್ಪನ್ನು ಸಮಿತಿಯವರಿಂದ ಕಂಡುಹಿಡಿದು ಅದನ್ನು ರದ್ದುಮಾಡಿದ್ದಾರೆ. ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮತ್ತೆ ಮಾಡಬೇಕು. ಅದನ್ನು ಮಾಡಿದನಂತರ ತೀವ್ರವಾಗಿ ಕೆಲಸ ಮಾಡುವುದಕ್ಕೆ ಆದೇಶ ಕೊಡುತ್ತದೆ. ನಿಮಗೆ ಬೇಕಾಗಿರತಕ್ಕದ್ದು ಶಿಕ್ಷಕರನ್ನು ತೀವ್ರವಾಗಿ ನೇಮಕ ಮಾಡತಕ್ಕದ್ದು. ಈ ದಿಸೆಯಲ್ಲಿ ಸರ್ಕಾರ ನಿಮಗಿಂತ ಕಡಿಮೆ ಕುತೂಹಲದಲ್ಲಿಲ್ಲ ಎಂಬುದನ್ನು ತಮಗೆ ಹೇಳಬಯಸುತ್ತೇನೆ. ತಾವು ಸಮಾಧಾನದಿಂದಿರಿ. ಈಗತಾನೆ ಹೊಸದಾಗಿ ಶಿಕ್ಷಣ ಮಂತ್ರಿಗಳು ಬಂದಿದ್ದಾರೆ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಸಿ.ಬೈರೇಗೌಡ :– ಹಾಗಾದರೆ ನಾಳೆ ಏತಕ್ಕೆ ಮಾಡುತ್ತೀರಿ, ಇವತ್ತೇ ಮಾಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಇಂಟರ್‌ವ್ಯೂ ಕರೆಯಬೇಕಾದರೆ 1 : 5 ಕರೆಯುತ್ತಿದ್ದೀರಿ. ಇದರ ಬದಲು 1 : 10 ಕರೆದರೆ ಬಹಳ ಜನರಿಗೆ ಅನುಕೂಲವಾಗುತ್ತದೆ.

(ಗೊಂದಲ)

ಛೇರ್ಮನ್ :– ಶಿಕ್ಷಣ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅವರು ಬಂದಕೂಡಲೇ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಮಗೆ ಸ್ಪಷ್ಟವಾದ ಉತ್ತರ ಸರ್ಕಾರದಿಂದ ಬೇಕು.

ಸಭಾಪತಿಯವರು :– ಕೊಡಿಸುತ್ತೇನೆ, ಕೂತುಕೊಳ್ಳಿ. ಈಗ ಬರಗಾಲದ ಬಗ್ಗೆ ಚರ್ಚೆ.

ನಿಗಮ 68ರ ಮೇರೆಗೆ ಬರಗಾಲ ಪ್ರಸ್ಥಿತಿ ಬಗ್ಗೆ ಚರ್ಚೆ

† ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಅಧ್ಯಕ್ಷರೆ, ತಾವು ಅಧ್ಯಕ್ಷ ಪೀಠದಲ್ಲಿರುವಾಗ ಈ ರಾಜ್ಯದ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ತಾವು ಕೂಡ ಬರಗಾಲ ಪ್ರದೇಶದಿಂದ ಬರುತ್ತಿದ್ದೀರಿ ನಿನ್ನೆಯ ದಿವಸ ತಾವು ಈ ಚರ್ಚೆಯ ಬಗ್ಗೆ ಮಾತನಾಡುವಾಗ ಬಹಳಷ್ಟು ಸಲಹೆ ಸೂಚನೆಗಳನ್ನು ಸದನಕ್ಕೆ ಕೊಟ್ಟಿದ್ದೀರಿ. ಈ ಬರಗಾಲ ಸಮಸ್ಯೆಯ ಬಗ್ಗೆ ಸುಮಾರು ವರ್ಷಗಳಿಂದ ಪ್ರತಿಯೊಂದು ಅಧಿವೇಶನ ಸೇರಿದಾಗಲೂ ಹಲವಾರು ಸಾರಿ ಚರ್ಚೆ ಮಾಡಿದ್ದೇವೆ. ಬರಗಾಲವನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ, ಬರಗಾಲದಿಂದ ಜನರನ್ನು ಸಂಪೂರ್ಣವಾಗಿ ವಿಮುಕ್ತರನ್ನಾಗಿ ಮಾಡಲಿಕ್ಕೆ ಸರ್ಕಾರದಲ್ಲಿ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮ ಕೂಡ ನಡೆದಿದೆ ಎನ್ನತಕ್ಕ ಭಾವನೆ ಯಾವ ಸದಸ್ಯರಲ್ಲೂ ಇಲ್ಲ, ಅಷ್ಟೇ ಅಲ್ಲ ತಮಗೂ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಬರಗಾಲ ಪರಿಸ್ಥಿತಿಯ ಬಗ್ಗೆ ನಾನು ಸದನದಲ್ಲಿ ಪ್ರಶ್ನೆಯನ್ನು ಹಾಕಿರುವಾಗ ಸುಮಾರು 15 ಜಿಲ್ಲೆಗಳು ಬರಗಾಲದಲ್ಲಿವೆ. ಅಲ್ಲಿರತಕ್ಕಂಥ ಜನರು ತೊಂದರೆಗೊಳಪಟ್ಟಿದ್ದಾರೆ ಎನ್ನತಕ್ಕ ಒಂದು ಉತ್ತರವನ್ನು ಸರ್ಕಾರ ಈಗಾಗಲೇ ನೀಡಿದೆ. ಆದರೆ ಬರಗಾಲದ ಹಿನ್ನೆಲೆಯನ್ನು ನೋಡಿದಾಗ ಬರಗಾಲ ಸಮಸ್ಯೆಯನ್ನು ನೋಡಿದಾಗ ಸಮಗ್ರವಾದಂಥ ಕಾರ್ಯಕ್ರಮ ಇಲ್ಲಿಯವರೆಗೆ ಯೋಜನಾ ಇಲಾಖೆಯಿಂದ ನಡೆದಿಲ್ಲ ಎನ್ನುವ ಪ್ರಶ್ನೆಯನ್ನು ಸಹ ನಾನು ಈ ದಿನ ಸದನದ ಗಮನಕ್ಕೆ ತಂದಿದ್ದೇನೆ. ಕರ್ನಾಟಕದಲ್ಲಿ ಬರಗಾಲ ನಿರ್ಮೂಲನ ಮಾಡಲಿಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಯಾವ ದೃಷ್ಟಿಯಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ಒಂದು ಮಟ್ಟದಲ್ಲಿ ತೆಗೆದುಕೊಳ್ಳಬೇಕೋ

ಅದನ್ನು ಸಂಪೂರ್ಣವಾಗಿ ಜನಸಾಮಾನ್ಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿ ಇವೊತ್ತಿನ ಸರ್ಕಾರದ ಮೇಲೆ ಇದೆ. ಅದು ಜಿಲ್ಲಾಪರಿಷತ್‌ಗೆ ಬರುತ್ತದೆ ಎನ್ನತಕ್ಕಂಥ ಉತ್ತರವನ್ನು ಸರ್ಕಾರ ಕೊಡ ಕೊಡುತ್ತದೆ. ಆದರೆ ಬರಗಾಲ ಕಾಮಗಾರಿಯಲ್ಲಿ ನಿರ್ದಿಷ್ಟವಾದಂಥ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ, ಈ ಎಲ್ಲಾ ಸಮಸ್ಯೆಗಳಿಗೂ ಪೂರ್ಣ ವಿರಾಮ ನೀಡಲಿಕ್ಕೆ ನಮಗೂ ಕೂಡ ಸಾಧ್ಯವಿಲ್ಲ. ಶಾಸಕರು ಈ ಒಂದು ವಿಶೇಷವಾದಂಥ ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭ ಕೂಡ ಬರುವುದಿಲ್ಲ. ಒಂದು ಕಡೆ ಜಿಲ್ಲಾಪರಿಷತ್ತು, ಒಂದುಕಡೆ ಶಾಸಕರು, ಒಂದುಕಡೆ ಸರ್ಕಾರ ಥ್ರೀ ಟೆಯರ್ಸ್‌ಸಿಸ್ಟಮ್ ಕರ್ನಾಟಕದಲ್ಲಿ ಆಗಿದೆ. ನಾವು ಶಾಸಕರು ಏನಾದರೂ ಕೇಳಿದರೆ ಜಿಲ್ಲಾಪರಿಷತ್‌ನವರು ನಮ್ಮ ಮಾತಿಗೆ ಬೆಲೆ ಕೊಡುತ್ತಾರೆಂಬ ಭಾವನೆ ನನಗಂತೂ ಇಲ್ಲ. ಸರ್ಕಾರದ ಮಾತು ಅಲ್ಲಿ ನಡೆಯುವುದಿಲ್ಲ. ಎಲ್ಲ ಸಮಸ್ಯೆಗಳನ್ನು ಎದುರಿಸತಕ್ಕ ಪ್ರಸಂಗ ನಮ್ಮೆಲ್ಲರ ಒಂದು ಸವಾಲಾಗಿ ನಿಂತಿದೆ ಎಂದು ನನ್ನ ಭಾವನೆಯಾಗಿದೆ. ಆದರೆ ಸರ್ಕಾರದ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇವೊತ್ತಿನ ದಿವಸ ಇದೆ ಎಂದು ಹೇಳಬೇಕಾಗಿದೆ. ಮಾನ್ಯ ಕಂದಾಯ ಮಂತ್ರಿಗಳು ಈಗಾಗಲೇ ಇಲ್ಲಿ ಬಂದಿದ್ದಾರೆ. ಅವರಲ್ಲಿ ನಾನು ಬಹಳ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮುಖ್ಯವಾಗಿ ಬರಗಾಲ ಬಂದಾಗ ತೊಂದರೆಗಳು ದಿನನಿತ್ಯ ಕೂಲಿ ಮಾಡತಕ್ಕ ಸಮಾಜದಲ್ಲಿ ಬರುತ್ತವೆ. ಬರಗಾಲದ ಬವಣೆಯಲ್ಲಿ ತನ್ನ ಆಸ್ತಿಪಾಸ್ತಿಯನ್ನು ಬದಿಗಿಟ್ಟು ಅದನ್ನು ತನ್ನ ಊರಿನಲ್ಲಿ ಬಿಟ್ಟು ಬೇರೆ ಕಡೆ ಹೋಗಿ ದುಡಿಯತಕ್ಕಂಥ ಒಂದು ಸಂದರ್ಭ ಸಾಮಾನ್ಯ ಜನರಿಗೆ ಬರುತ್ತದೆ. ಸಾಮಾನ್ಯ ಕುಟುಂಬ ಅಂದರೆ ಮೂಲತಃ ಹಿಂದುಳಿದ ಸಮಾಜದಲ್ಲಿ ಜಾಸ್ತಿ ಇರುತ್ತದೆ. ಆ ಒಂದು ಜನಾಂಗ ತನ್ನ ಊರನ್ನು ಬಿಟ್ಟು ಬೇರೆ ಕಡೆ ಹೋಗತಕ್ಕ ಸಂದರ್ಭ ಬಂದಾಗ ಮತ್ತಷ್ಟು ಆರ್ಥಿಕ ಮುಗ್ಗಟ್ಟನ್ನು ಎದುರಿಸತಕ್ಕಂಥ ಹಿನ್ನೆಲೆ ಬರುತ್ತದೆ. ಆದ್ದರಿಂದ, ಹಳ್ಳಿಗಾಡು ಪ್ರದೇಶದ ಜನಾಂಗವನ್ನು ಕಾಪಾಡತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಹಳ್ಳಿಗಾಡು ಪ್ರದೇಶದಲ್ಲಿ ಸಣ್ಣ ಸಣ್ಣ ಕೆರೆಗಳ ನಿರ್ಮಾಣ, ಕೆರೆಗಳ ಹೂಳು ತೆಗೆಯತಕ್ಕದ್ದು, ಇನ್ನುಳಿದ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವಂಥಾದ್ದು ಮಾಡಬೇಕಾಗುತ್ತದೆ. ಈ ಬಗ್ಗೆ ಹಳೆಯ ಕಾಲದಿಂದ ಬಂದಂಥ ಪರಂಪರೆಯನ್ನು ನೋಡಿದಾಗ ಆಗಿನ ಕಾಲದಲ್ಲಿ ಭಯಂಕರ ಬರಗಾಲವನ್ನು ಎದುರಿಸಲಿಕ್ಕಾಗಿ ರಾಜಮಹಾರಾಜರು, ಆಡಳಿತಗಾರರು ಸಂಪೂರ್ಣವಾದಂಥ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇವೊತ್ತು ನಾವು ದೊಡ್ಡ ಮಟ್ಟದಲ್ಲಿ ದೊಡ್ಡಗಾತ್ರದಲ್ಲಿರತಕ್ಕಂಥ ದೇವಸ್ಥಾನಗಳನ್ನು ನೋಡುತ್ತೇವೆ. ಕೆರೆಗಳನ್ನು ನೋಡುತ್ತೇವೆ. ಇವುಗಳನ್ನೆಲ್ಲಾ ನಿರ್ಮಾಣ ಮಾಡಲಿಕ್ಕೆ ಕಾರಣ, ಕಾರಣ ಏನೆಂದರೆ ಆಗಿನ ಕಾಲದಲ್ಲಿ ಬರಗಾಲ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಆಗಿನ ರಾಜಮಹಾರಾಜರು, ಸುಮಾರು ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿರುವುದನ್ನು ನಾವು ಕಾಣಬಹುದು. ಇವೊತ್ತಿನ ದಿವಸ ಏನಾಗಿದೆ ಯಾವುದೇ ಸರ್ಕಾರ ಇರಲಿ, ಕರ್ನಾಟಕದಲ್ಲಿ ಆಗಲಿ, ರಾಷ್ಟ್ರದಲ್ಲಿಯಾಗಲಿ, ಬರಗಾಲ ಬಂದಾಗ ಕೆಲಸ ಮಾಡಿಸಬೇಕಾಗುತ್ತದೆ. ಆದರೆ ಇವೊತ್ತು ಕೆಲವೊಂದು ಇಲಾಖೆಗಳಲ್ಲಿ ಲೂಟಿ ನಡೆಯುತ್ತಿದೆ. ಅದನ್ನು ನಿಲ್ಲಿಸಲಿಕ್ಕೆ ಸರ್ಕಾರದಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ಅಂತಹ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಏನು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರದಲ್ಲಿ ಒಂದು ನಿಶ್ಚಿತವಾದಂಥ ಕಾರ್ಯರೂಪರೇಷೆ ಇಲ್ಲ. ಅದರ ಬಗ್ಗೆ ತಮ್ಮ ಮೂಲಕ ಸರ್ಕಾರವನ್ನು ಕೇಳಬೇಕಾಗುತ್ತಿದೆ. ಕರ್ನಾಟಕದಲ್ಲಿ ಬೃಹತ್ ನೀರಾವರಿ ಯೋಜನೆಗಳು ನಡೆಯುತ್ತಿವೆ. ಹಿಡ್ಕಲ್ ನೀರಿನ ಜಲಾಶಯ ಇರಬಹುದು, ಮಲಪ್ರಭಾ ಯೋಜನೆ ಇರಬಹುದು, ಹಾರಂಗಿ, ಕಾವೇರಿ, ಇನ್ನು ಕೆಲವೊಂದು ನಾಲೆಗಳ ನಿರ್ಮಾಣದ ಯೋಜನೆ ಇರಬಹುದು. ಎಲ್ಲಾ ಯೋಜನೆಗಳಿಗೂ ವಿಶೇಷವಾದಂಥ ಕಾರ್ಯಕ್ರಮ ಸರ್ಕಾರ ಹಾಕಿಕೊಳ್ಳದೇ ಹೋದರೆ, ಬರಗಾಲದ ಬವಣೆಯಲ್ಲಿರತಕ್ಕಂಥ ಕರ್ನಾಟಕವನ್ನು ಸಂಪೂರ್ಣವಾಗಿ ಹಸಿರುಕ್ರಾಂತಿಯಲ್ಲಿ ತರಲಿಕ್ಕೆ ಸಾಧ್ಯವಿಲ್ಲ. ಇವೊತ್ತಿನದಿವಸ ಬರಗಾಲದ ವ್ಯಾಪ್ತಿಯಲ್ಲಿ ಬರತಕ್ಕಂಥ ಸಮಾಜ ಏನಿದೆ, ಆ ಕೂಲಿಗಾರರ ಹೆಸರು ಸರ್ಕಾರದ ಒಂದು ಪಟ್ಟಿಯಲ್ಲಿ ಇವೊತ್ತಿನ ದಿವಸ ನೋಡುತ್ತಿಲ್ಲ. ಆ ಒಂದು ರೂಪುರೇಷೆಯನ್ನು ಸರ್ಕಾರ ಹಾಕಿಕೊಂಡು ನೀರಾವರಿ ಕ್ಷೇತ್ರವನ್ನು ಬೆಳೆಸಲಿಕ್ಕೆ ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಸಣ್ಣ ನೀರಾವರಿ ಕೆಲಸಗಳಿಗೆ ನಿರ್ದಿಷ್ಟವಾದ ರೂಪುರೇಷೆ ಮಾಡಿ ಬರಗಾಲ ಬವಣೆಯಲ್ಲಿರತಕ್ಕಂಥ ಕ್ಷೇತ್ರದಲ್ಲಿ ನಿರ್ದಿಷ್ಟ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀರಾವರಿ ಮಾಡಲಿಕ್ಕೆ ತಾವು ಏನು ಕಾರ್ಯಕ್ರಮ ಮಾಡಿದಿರಿ, ಭೂ ಸಂರಕ್ಷಣೆ ಮಾಡಲಿಕ್ಕೆ ತಾವು ಏನು ಕಾರ್ಯಕ್ರಮವನ್ನು ಮಾಡಿದಿರಿ, ಅರಣ್ಯ ಅಭಿವೃದ್ಧಿ ಮಾಡಲಿಕ್ಕೆ ತಾವು ಏನು ಕಾರ್ಯಕ್ರಮ ಮಾಡಿದಿರಿ, ರಸ್ತೆಗಳ

ನಿರ್ಮಾಣಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿರಿ, ಬಾವಿ ತೋಡಲಿಕ್ಕೆ ಯಾವ ಕಾರ್ಯಕ್ರಮ ಮಾಡಿದಿರಿ, ಡ್ರಿಪ್ ಇರಿಗೇಷನ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿರಿ, ನಮ್ಮಲ್ಲಿ ಸ್ಪ್ರಿಂಕ್ಲರ್ ಇರಿಗೇಷನ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡ್ಡಿರಿ, ಕೊಳವೆ ಬಾವಿಗಳನ್ನು ತೋಡಲಿಕ್ಕೆ ಏನು ಕಾರ್ಯಕ್ರಮ ಮಾಡಿದಿರಿ ಎಂದು ಕೇಳಿದಾಗ ಸರ್ಕಾರದಿಂದ ಯಾವುದೇ ನಿರ್ದಿಷ್ಟವಾದ ಉತ್ತರ ನಮಗೆ ಬರಲಿಲ್ಲ. ಹೀಗೆ ತಾವು ಏನಾದರೂ ಒಂದು ಕಾರ್ಯಕ್ರಮವನ್ನು ತಮ್ಮ ಇಲಾಖೆಯ ಮೂಲಕ P.W.D ಇಲಾಖೆಯಿಂದ ಜಿಲ್ಲಾಪರಿಷತ್ತಿನಿಂದ ನಡೆಸಬಹುದಾಗಿತ್ತು. ಮಾನ್ಯ ಅಧ್ಯಕ್ಷರೇ ತಾವು ಬರಗಾಲ ಪ್ರದೇಶದಿಂದ ಬಂದಿದ್ದೀರಿ. ತಾವು ತಮ್ಮ ಭಾಷಣದಲ್ಲಿ ಹೇಳಿದ್ದೀರಿ, ತಮ್ಮ ಏರಿಯಾದಲ್ಲೂ ಕೂಡ ಎಷ್ಟೋ ಕ್ಷೇತ್ರಗಳು ಬರಗಾಲಕ್ಕೆ ಒಳಪಟ್ಟಿದೆ ಎಂದು. ಈ ಒಂದು ಸಮೀಕ್ಷೆಯನ್ನು ಸರ್ಕಾರದವರು ವಿಚಾರಣೆ ಮಾಡದೆ ಹೋದರೆ ಏನೋ ಒಂದು ಇಲ್ಲಿ ಅಸೆಂಬ್ಲಿಯಲ್ಲಿ ನಾವು ಪ್ರಶ್ನೆ ಹಾಕುತ್ತೇವೆ, ಕಾಲ್‌ಅಟೆಂಕ್ಷನ್ ಹಾಕುತ್ತೇವೆ, ಆವಾಗ ಇಲ್ಲಿಂದ ಸರ್ಕಾರಕ್ಕೆ ಹೋಗುತ್ತದೆ, ಆವಾಗ ಮಾತ್ರ ಸರ್ಕಾರದಿಂದ ಏನಾದರು ಒಂದು ರಿಪೋರ್ಟ್ ಬರುತ್ತದೆ. ಆದರೆ ಸ್ಥೂಲವಾಗಿರತಕ್ಕಂಥ ಒಂದು ಜನಾಭಿಪ್ರಾಯ ಇರಬಹುದು, ಮಂಡಲ್‌ಗಳ ಇರಬಹುದು, ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಿರಬಹುದು, ತಾಲ್ಲೂಕಿನ ತಹಶೀಲ್ದಾರಿರಬಹುದು, ಅವರು ಯಾರೇ ಆಗಲಿ ಯಾವ ಹಳ್ಳಿಗಳಲ್ಲಿ ಏನು ಇವತ್ತಿನ ದಿವಸ ತೊಂದರೆ ಇರತಕ್ಕಂಥದ್ದು ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ಸರ್ಕಾರದವರು ಇಲ್ಲಿಯವರೆಗೂ ಮಾಡಿಲ್ಲವೆಂಬುದು ನನ್ನ ಅಭಿಪ್ರಾಯ. ಮಾನ್ಯ ಕಂದಾಯ ಮಂತ್ರಿಗಳನ್ನು ನಾನು ಕೇಳುತ್ತೇನೆ ಅವರ ಕ್ಷೇತ್ರ ಬಹಳ ಬರಗಾಲಪೀಡಿತ ಕ್ಷೇತ್ರ. ಆದರೆ ಏನೋ ಒಂದು ನೈಸರ್ಗಿಕ ನಿಯಮದ ಪ್ರಕಾರ ಇವತ್ತು ಅವರ ಕ್ಷೇತ್ರದಲ್ಲಿ ಮಳೆಯಾಗಿ ಕೆಲವು ತೊಂದರೆಗಳೂ ಕೂಡ ಆಗಿದೆ. ಆದರೆ ಬರಗಾಲದ ಹಿನ್ನೆಲೆಯಲ್ಲಿ ಅತಿವೃಷ್ಟಿ ಆಗಿರುವ ಹಿನ್ನೆಲೆಯಲ್ಲಿ ಅಥವಾ ಅನಾವೃಷ್ಟಿಯಾಗಿರತಕ್ಕಂಥ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಸರ್ಕಾರ ತನ್ನ ಬಜೆಟ್‌ನಲ್ಲಿ ಏನಾದರು ಹಣಕಾಸಿನ ವ್ಯವಸ್ಥೆಯನ್ನು ಮಾಡಿದೆಯೇ ಎಂದು ನೋಡಿದರೆ ಏನು ಕಂಡುಬರಲಿಲ್ಲ. ಇದು ಪ್ರತಿವರ್ಷ ಇಂಥ ಒಂದು ತೊಂದರೆಗಳನ್ನು ಎದುರಿಸಲಿಕ್ಕೆ ಸರ್ಕಾರದಲ್ಲಿ ಹಣವಿಲ್ಲದೆ ಹೋದರೆ ಬಹಳಷ್ಟು ತೊಂದರೆ ಸಾಮಾನ್ಯವರ್ಗದವರಿಗೆ, ಹಿಂದುಳಿದ ಸಮಾಜದ ವರ್ಗದವರಿಗೆ ಮಾತ್ರವಾಗುತ್ತದೆ. ದೊಡ್ಡವರಿಗೆ, ದುಡ್ಡಿರುವವರಿಗೆ ಏನೂ ತೊಂದರೆಯಾಗುವುದಿಲ್ಲ. ಅವರು ಬೆಂಗಳೂರಿನಲ್ಲೋ, ಬೆಳಗಾಮ್‌ನಲ್ಲೋ ಅಥವಾ ಯಾವುದಾದರು ಪಟ್ಟಣ ಮುಂಬೈನಲ್ಲೋ, ದೆಹಲಿಯಲ್ಲೋ ಹೋಗಿ ನೆಲೆಸಬಹುದು. ಆದರೆ ಸಾಮಾನ್ಯ ಕುಟುಂಬದವರು ಬಡವರು ಹಿಂದುಳಿದ ಸಮಾಜದವರು ಏನಿರುತ್ತಾರೆ. ಕೂಲಿಕಾರ ಜನರೇ ಇರುತ್ತಾರೆ ಅವರಿಗೆ ಮಾತ್ರ ಬರಗಾಲದ ಬವಣೆಗೆ, ಬರಗಾಲದ ಕೋಪಕ್ಕೆ ತಾಪಕ್ಕೆ ಒಳಪಡುತ್ತಾರೆ. ಅಂಥ ಒಂದು ಸಂದರ್ಭದಲ್ಲಿ ಯಾರು ಕೂಲಿಗಾರ ಜನರಿರುತ್ತಾರೆ ಅವರಿಗೆ ಯಾವ ರೀತಿ ಕೂಲಿಕೆಲಸಗಳನ್ನು ಕೊಡುತ್ತೀರಿ? ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತೀರಿ. ಉದಾಹರಣೆಗೆ ಅವರ ದಿನನಿತ್ಯದ ಏನು ಒಂದು ಬೇಡಿಕೆ ಇರುತ್ತದೆ, ಅದು ಅನುದಾನದ ಬೇಡಿಕೆ ಇರಬಹುದು, ಅಥವಾ ಅವರಿಗೆ ಬೇಕಾಗಿರತಕ್ಕಂಥ ಸಾಮಗ್ರಿಗಳ ಬೇಡಿಕೆ ಇರಬಹುದು, ಅದಕ್ಕೆ ತಕ್ಕಂಥ ಒಂದು ನಿರ್ದಿಷ್ಟವಾದ ರೂಪರೇಷೆಯನ್ನು ಹಾಕದೇಹೋದರೆ ಬರಗಾಲದ ಜನರು ತೊಂದರೆಗೆ ಒಳಗಾಗುತ್ತಾರೆ. ಇವತ್ತು ಬರಗಾಲದ ಬಗ್ಗೆ ಹಲವಾರು ಮಹಾನುಭಾವರು ಮಾತನಾಡಿದ್ದಾರೆ. ಶ್ರೀಮಾನ್ ನಂಜುಂಡಸ್ವಾಮಿಯವರು ಮಾತನಾಡಿದ್ದಾರೆ, ಯಾವ ಕ್ಷೇತ್ರದಲ್ಲಿ ನೀರಾವರಿ ಮಾಡಬೇಕೆಂದು ಒಂದು ಸರ್ವೆಯನ್ನು ಆಗಿನ ಕಾಲದಲ್ಲಿ ಬ್ರಿಟಿಷ್ ಸರ್ಕಾರದವರೇ ಮಾಡಿದ್ದರು, ಅದೇ ಇರುತ್ತದೆ. ಮುಂದೆ ಸರ್ವೆ ಕೂಡ ಮಾಡಲಿಕ್ಕೆ ಆಗಲಿಲ್ಲ. ಆದರೆ ಇವತ್ತಿನ ದಿವಸ ಕೆರೆಗಳು ರಾಜಮಹಾರಾಜರು ಕಟ್ಟಿಸಿದಂಥ ಕೆರೆಗಳು, ಮತ್ತೆ ಸರ್ಕಾರದವರು ಮಾಡಿದಂಥ ಕೆರೆಗಳು ಇವತ್ತಿನ ದಿವಸ ಸಂಪೂರ್ಣವಾಗಿ ಹೂಳುತುಂಬಿಕೊಂಡು ಅಲ್ಲಿ ನೀರು ನಿಲ್ಲಲೂ ಕೂಡ ಅವಕಾಶವಿಲ್ಲದಿರತಕ್ಕಂಥದ್ದನ್ನು ನಾವು ನೋಡಬೇಕಾಗಿದೆ. ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲಿಕ್ಕೆ ಸರ್ಕಾರದಲ್ಲಿ ಏನು ಕಾರ್ಯಕ್ರಮವಿದೆ? ಕೂಲಿಕಾರರಿಗೆ ಕಾಳು ಎಂಬ ಯೋಜನೆ ಇದೆ. ಆ ಕೂಲಿಗಾಗಿ ಕೊಟ್ಟಂಥ ಕಾಳು ಮಾರಾಟವಾಗುತ್ತಿದೆ. ಸ್ವಾಮಿ ನಾನು ನಿಜವಾಗಿಯೂ ಹೇಳುತ್ತಿದ್ದೇನೆ, ಯಾರ ಮೇಲೂ ದ್ವೇಶದ ಹೊರೆಯನ್ನು ಹೊರಿಸುತ್ತಿಲ್ಲ ಕಾಳುಗಳನ್ನು ಮಾರಾಟ ಮಾಡುತ್ತಿದ್ದುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಬರಗಾಲ ಒಂದು ಕಡೆಗಾದರೆ ಆ ಕಾಳನ್ನು ಮಾರತಕ್ಕಂಥ ಖದೀಮರು ಒಂದು ಕಡೆ. ಇಂಥ ಒಂದು ಪರಿಸ್ಥಿತಿಯಲ್ಲಿ ಕರ್ನಾಟಕ ಇದ್ದಾಗ ಅದನ್ನು ತನಿಖೆ ಮಾಡತಕ್ಕಂಥ ದಳವನ್ನು ನೇಮಿಸಬೇಕಾಗಿತ್ತು. ಬರಗಾಲ

ಪರಿಸ್ಥಿತಿಯನ್ನು ಎದುರಿಸಲು ಸಾಮಗ್ರಿಗಳನ್ನು ಏನು ಕೊಡುತ್ತಿದ್ದೀರಿ, ಹಣಕಾಸನ್ನು ಏನು ಕೊಡುತ್ತಿದ್ದೀರಿ, ಅದನ್ನೇನಾದರೂ ಈ ಖದೀಮರು ಅವರು ಸುಳ್ಳು ಲೆಕ್ಕವನ್ನು ಕೊಟ್ಟು ಸರ್ಕಾರಕ್ಕೆ ಮೋಸ ಮಾಡಿ, ಸರ್ಕಾರದ ಹಣವನ್ನು ಲೂಟಿ ಮಾಡತಕ್ಕಂಥ ಕ್ರಮ ನಡೆದಿದ್ದರೆ ಅದನ್ನು ತನಿಖೆ ಮಾಡತಕ್ಕಂಥ ಒಂದು ದಳವನ್ನು ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಹಾಗೂ ಡಿವಿಜನ್ ಮಟ್ಟದಲ್ಲಿ ತಾವು ನೇಮಕ ಮಾಡಬೇಕೆಂದು ಮಾನ್ಯ ಕಂದಾಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳನ್ನು ಪ್ರಶ್ನೆಕೇಳಿದಾಗ ಸುಮಾರು 15 ಜಿಲ್ಲೆಗಳಲ್ಲಿ ಬರಗಾಲದ ತೊಂದರೆ ಇದೆ ಎಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇವತ್ತು ಈ ಪ್ರಶ್ನೆಯನ್ನು ಹಾಕಿದಮೇಲಾದರೂ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಕಳುಹಿಸುವ ಮೂಲಕವಾಗಲಿ, ಟೆಲೆಕ್ಸ್‌ಮೆಸೇಜ್ ಕಳುಹಿಸುವ ಮೂಲಕವಾಗಲಿ, ಇವತ್ತು ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತೆ ಸೂಚಿಸಿ, ನಿಜವಾಗಿಯೂ ಯಾವ ಹಳ್ಳಿಯಲ್ಲಿ ಬರಗಾಲವಿದೆ, ಎಷ್ಟು ಜನರಿಗೆ ಕೆಲಸ ಕೊಡಬೇಕಾಗಿದೆ, ಯಾವ ಯಾವ ಹಳ್ಳಿಗಳಲ್ಲಿ ಇವತ್ತನ ದಿವಸ ಕೊಳವೆ ಬಾವಿಗಳಿಲ್ಲ. ಯಾವ ಕೆರೆಯಲ್ಲಿ ನೀರಿಲ್ಲದೆ ಹೂಳುತುಂಬಿಕೊಂಡಿದೆ, ಎಷ್ಟು ಕೆರೆಗಳನ್ನು ಕಟ್ಟಬೇಕಾಗಿದೆ, ಎಷ್ಟು ಕೆರೆಗಳು ಅರ್ಧಕ್ಕೆ ನಿಂತುಹೋಗಿದೆ ಎನ್ನುವ ಬಗ್ಗೆ ವರದಿಯನ್ನು ಸಲ್ಲಿಸಿದ್ದಾರೆನ್ನುವ ಉತ್ತರವನ್ನು ಮಾನ್ಯ ಸಚಿವರು ಉತ್ತರ ಕೊಡುವ ಕಾಲಕ್ಕೆ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬರಗಾಲ ಇದ್ದರೆ ಮತ್ತೆ ಕೆಲವು ಜಿಲ್ಲೆಗಳಲ್ಲಿ ಭಾಗಶಃ ಇದೆ. ಇವತ್ತಿನ ದಿವಸ ತಮ್ಮ ಪಕ್ಷದ ಸರ್ಕಾರ ಇರಬಹುದು, ಹಿಂದೆ ಬೇರೆ ಪಕ್ಷದ ಸರ್ಕಾರ ಇರಬಹುದು. ನಾವು ಪ್ರತಿ ವರ್ಷ ಈ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುತ್ತಾ ಬಂದಿದ್ದೇವೆ. ಪ್ರತಿ ವರ್ಷ ಬರಗಾಲವನ್ನು ನೋಡುತ್ತಿದ್ದೇವೆ. ಈ ಬಗ್ಗೆ ನಿರ್ದಿಷ್ಟವಾಗಿ 5–10 ವರ್ಷದ ಯಾವುದಾದರೂ ಕಾರ್ಯಕ್ರಮವನ್ನು ರೂಪಿಸಿ ಪರಿಹಾರ ಮಾರ್ಗವನ್ನು ಕಂಡುಹಿಡಿಯದಿದ್ದರೆ ಕರ್ನಾಟಕದಲ್ಲಿ ದೊಡ್ಡ ಅನಾಹುತವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರ ಕೂಡ ಈ ಬಗ್ಗೆ ತಾನೇ ಮುಂದಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಸರ್ಕಾರದಿಂದ ರಿಪೋರ್ಟ್ ಹೋದಮೇಲೆ ತೆಗೆದುಕೊಳ್ಳಬೇಕೆಂದು ಅಲ್ಲ. ಅದು ತನ್ನದೇ ಆದ ಯೋಜನೆಯನ್ನು ಅದು ಕರ್ನಾಟಕ ಸರ್ಕಾರ ಇರಬಹುದು ಅಥವಾ ಬೇರೆ ರಾಜ್ಯದ ಸರ್ಕಾರ ಇರಬಹುದು, ಬೇರೆ ಪಕ್ಷದ ಸರ್ಕಾರ ಇರಬಹುದು ಅಲ್ಲಿ ರೂಪಿಸಬೇಕಾಗುತ್ತದೆ. ಇವತ್ತಿನ ದಿವಸ ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಪಾತ್ರ ಏನು ಎಂದು ಕೇಳಬಯಸುತ್ತೇನೆ. ಕರ್ನಾಟಕ ಸರ್ಕಾರ ವರದಿಯನ್ನು ಕಳುಹಿಸುವವರೆಗೆ ಕಾಯುವುದಲ್ಲ. ಇವತ್ತಿನ ದಿವಸ ಸಾಕಷ್ಟು ಯಂತ್ರ ಸಾಮಗ್ರಿಗಳು ಬಂದಿವೆ. ಅವನ್ನು ಉಪಯೋಗಿಸಿಕೊಂಡು ಯಾವ ರಾಜ್ಯದಲ್ಲಿ ಬರಗಾಲ ಇದೆ, ಅಲ್ಲಿಗೆ ಯಾವ ರೀತಿ ಹಣಕಾಸಿನ ಸಹಾಯ ನೀಡಬೇಕೆಂದು ಯೋಚಿಸಬೇಕಾಗುತ್ತಿದೆ. ಇವತ್ತಿನ ದಿವಸ ಏನಾಗಿದೆ ಎಂದರೆ ಆಯಾಯಾ ರಾಜ್ಯ ಸರ್ಕಾರದವರು ಒಂದು ವರದಿಯನ್ನು ಕಳುಹಿಸಿಕೊಡಬೇಕು. ಒಂದೆರಡು ತಿಂಗಳಾದ ಮೇಲೆ, ಬರಗಾಲ ಮುಗಿದ ಮೇಲೆ, ಮಳೆಬೆಳೆ ಆದಮೇಲೆ ಕೇಂದ್ರ ಸರ್ಕಾರದ ಒಂದು ವರದಿ ಕೊಡುವುದಾದರೆ ಈ ವ್ಯವಸ್ಥೆ ಏತಕ್ಕೆ ಇರಬೇಕೆಂಬ ಪ್ರಶ್ನೆ ಉದ್ಭವವಾಗುತ್ತದೆ. ಇಂಥ ಪ್ರಸಂಗಗಳು ಕಳೆದ ಆರೂವರೆ ವರ್ಷಗಳಿಂದ ನಡೆಯುತ್ತಿವೆ. ಕರ್ನಾಟಕದಿಂದ ರಿಪೋರ್ಟ್ ಕಳುಹಿಸುವುದು, ಮಳೆ ಬಂದಮೇಲೆ ಕೇಂದ್ರದ ತಂಡ ಬಂದು ಎಲ್ಲಾ ಸರಿಯಾಗಿದೆ ಎಂದು ಹೇಳುವುದು. ಕಾಣಿಕೆ ಕೊಟ್ಟು ದೇವರ ದರ್ಶನ ಪಡೆದ ಹಾಗೆ ಆಗಿದೆ. ಈ ರೀತಿ ಮಾಡುವುದು ಸರಿಯಲ್ಲ. ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಈ ಅಧಿವೇಶನ ಮುಗಿದ ಕೂಡಲೇ ಪ್ರತಿಯೊಂದು ಜಿಲ್ಲೆಗೆ ಪ್ರವಾಸ ಕಾರ್ಯಕ್ರಮವನ್ನು ಹಾಕಿಕೊಂಡು ಯಾವ ಯಾವ ಕ್ಷೇತ್ರಗಳಲ್ಲಿ ಬರಗಾಲ ಇದೆ. ಯಾವ ಯಾವ ಕ್ಷೇತ್ರಗಳಲ್ಲಿ ಏನೇನು ಕೆಲಸ ಮಾಡಬೇಕೆಂದು ಅಧ್ಯಯನ ಮಾಡಿ ವಿಶೇಷ ವರದಿಯನ್ನು ತರಿಸಿಕೊಳ್ಳದಿದ್ದರೆ ಬಹಳ ಅನಾಹುತವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಪಕ್ಕದ ರಾಜ್ಯದಲ್ಲಿ ಸ್ಪ್ರಿಂಕ್ಲರ್ ಮತ್ತು ಡ್ರಿಪ್ ಇರಿಗೇಷನ್ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. 50 ಪರ್ಸೆಂಟ್ ಸಬ್ಸಿಡಿ ಕೊಟ್ಟು ಡ್ರಿಪ್ ಇರಿಗೇಷನ್ ಕಾರ್ಯಕ್ರಮ ಹಾಕಿದ್ದಾರೆ. ಎಲ್ಲಿ ನೀರಾವರಿ ಕ್ಷೇತ್ರ ಮಾಡುವುದಕ್ಕೆ ಸಾಧ್ಯವಿಲ್ಲ ಅಂಥ ಕಡೆ ಕಡಿಮೆ ನೀರಾವರಿಯಲ್ಲಿ ಹೆಚ್ಚಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಉನ್ನತ ಮಟ್ಟದ ಅಧಿಕಾರಿಗಳ ಜೊತೆ, ಕೇಂದ್ರದಲ್ಲಿರತಕ್ಕ ಹಣಕಾಸಿನ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಸಬ್ಸಿಡೈಸ್ಡ್ ಯೋಜನೆಯನ್ನು ಕರ್ನಾಟಕದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ರೈತರ ಮತ್ತು ಸಾರ್ವಜನಿಕರ ಪರವಾಗಿ

ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಜಿಲ್ಲಾ ಪರಿಷತ್ತಿನ ಹೊಸ ಅಧ್ಯಾಯ ಕರ್ನಾಟಕದಲ್ಲಿ ಪ್ರಾರಂಭವಾಗಿದೆ. ಆಗಿನ ಮಂತ್ರಿಮಂಡಲದಲ್ಲಿದ್ದ ಸಿಂಧ್ಯರವರು ಮತ್ತು ಏಕಾಂತಯ್ಯನವರು ಇದನ್ನು ಗಮನಿಸಬೇಕು. ಇವತ್ತು ನಾವು ಜಿಲ್ಲಾ ಪರಿಷತ್ತಿನ ಪಾತ್ರವನ್ನು ಅಧ್ಯಯನ ಮಾಡಿದರೆ, ಸರ್ಕಾರ ಒಂದು ಕಡೆ, ಶಾಸಕರು ಒಂದು ಕಡೆ ಮತ್ತು ಜಿಲ್ಲಾ ಪರಿಷತ್ ಒಂದು ಕಡೆ ಆಗಿದೆ. ಅಧ್ಯಕ್ಷ ಪೀಠದಲ್ಲಿರತಕ್ಕ ಕೌಜಲಗಿಯವರು ಇದನ್ನು ಗಮನಿಸಿದ್ದಾರೆಂದು ಭಾವಿಸಿರುತ್ತೇನೆ. ತಾವೇನಾದರೂ ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರಿಗೆ ಅಥವಾ ಅಧ್ಯಕ್ಷರಿಗೆ ಇಂಥ ಸ್ಥಳದಲ್ಲಿ ಕುಡಿಯಲು ನೀರಿನ ತೊಂದರೆ ಇದೆ, ಬೋರ್ ಹಾಕಿಸಬೇಕೆಂದು ಕೇಳಿಕೊಂಡರೆ ಶಾಸಕರು ಏನೋ ಬರೆದಿದ್ದಾರೆ ನಾವು ಏತಕ್ಕೆ ಹಾಕಬೇಕೆಂಬ ಅಭಿಪ್ರಾಯ ಕೇಳಿಬರುತ್ತಿದೆ. ಇದು ಸರಿಯಾದ ವ್ಯವಸ್ಥೆ ಅಲ್ಲ. ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳುತ್ತೇನೆ, ಯಾವುದೇ ಶಾಸಕರ ಕ್ಷೇತ್ರದಲ್ಲಿ ನಿಜವಾಗಿ ನೀರಿನ ತೊಂದರೆ ಇದೆ ಎಂಬುದು ತಮ್ಮ ಗಮನಕ್ಕೆ ಬಂದಾಗ ಬರಗಾಲ ಕಾಮಗಾರಿಗಳಲ್ಲಿ ಬೋರ್‌ಗಳನ್ನು 5–10 ಹಾಕತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಈಗಾಗಲೇ ಆ ಬಗ್ಗೆ ಸರ್ಕಾರ ನಿರ್ಣಯ ಮಾಡಿದೆ ಎಂದು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಭೂ ಸಂರಕ್ಷಣಾ ಕಾರ್ಯಕ್ರಮದಲ್ಲಿ ಬಂಡಿಂಗ್ ಕಾರ್ಯಕ್ರಮ ಎಂದು ಹಲವಾರು ಕಡೆಗೆ ನಡೆದಿದೆ. ಅದು ಸುಮಾರು ವರ್ಷಗಳಿಂದ ನಡೆದಿದೆ. ನಿರ್ದಿಷ್ಟವಾದ ಬಂಡಿಂಗ್ ಕಾರ್ಯಕ್ರಮದಲ್ಲಿ ಕೂಲಿ ಮಾಡತಕ್ಕ ಜನರು ಸಾಮಾನ್ಯ ಕುಟುಂಬಕ್ಕೆ ಸೇರಿದವರು. ಆರ್ಥಿಕವಾಗಿ ಹಿಂದುಳಿದವರು ಅಂಥವರಿಗೆ ದಿನನಿತ್ಯ ಕೂಲಿ ಏನು ಕೊಡುತ್ತಿದ್ದೀರಿ 11 ರೂಪಾಯಿ, 15 ರೂಪಾಯಿ ಏನು ಕೊಡುತ್ತಿದ್ದೀರಿ ಆ ಜನರಿಗೆ ಹೆಚ್ಚಿನ ಮೊತ್ತವನ್ನು ಕೊಟ್ಟು ಆರ್ಥಿಕ ಸಹಾಯ ನೀಡಿ ಕೆಲಸ ಕೊಡದೇಹೋದರೆ ಅವರು ಬೇರೆ ಕಡೆ ವಲಸೆ ಹೋಗತಕ್ಕ ಸಂದರ್ಭ ಇರುತ್ತದೆ. ನಮ್ಮ ಭಾಗದಲ್ಲಿ ಅದನ್ನು ನಾವು ನೋಡುತ್ತಿದ್ದೇವೆ. ನಮ್ಮದು ಷುಗರ್ ಫ್ಯಾಕ್ಟರಿ ಪ್ರದೇಶ ಇರುವುದರಿಂದ ಕಬ್ಬು ಕಡಿಯುವುದಕ್ಕೆ 1 ಟನ್ನಿಗೆ 32 ರಿಂದ 35 ರೂಪಾಯಿ ನಾವು ಕೊಡುತ್ತಿದ್ದೇವೆ. ಆದರೆ ಬಂಡಿಂಗ್ ಹಾಕುವುದಕ್ಕೆ ನೀವು 11 ರಿಂದ 15 ರೂಪಾಯಿ ಕೊಟ್ಟರೆ ಯಾರು ಬರುತ್ತಾರೆ? ಮೂಟೆ ಕಟ್ಟಿಕೊಂಡು ಬೇರೆ ಕಡೆ ಕೆಲಸ ಮಾಡುವುದಕ್ಕೆ ಹೋಗುತ್ತಾರೆ. ಅಲ್ಲೇನಾದರೂ ಅನಾಹುತವಾದರೆ ಅಥವಾ ಜಾಸ್ತಿ ಮಳೆ ಬಂದರೆ ಮತ್ತೆ ಆರ್ಥಿಕ ಮುಗ್ಗಟ್ಟಿನಲ್ಲಿ ಕೂಲಿಕಾರರು ಬದುಕಬೇಕಾಗುತ್ತದೆ. ಆದ್ದರಿಂದ ಸ್ಥಾನಿಕವಾಗಿ ಒಳ್ಳೆಯ ಕೂಲಿ ಕೊಟ್ಟರೆ ಅವರ ಪಾಲನೆ ಪೋಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಕಂದಾಯಮಂತ್ರಿಗಳು ಕೂಲಿ ಮಾಡುವ ಜನರ ಪಟ್ಟಿ ಮಾಡಿ ತಾಲ್ಲೂಕು ಕಚೇರಿಯಲ್ಲಿ ಅವರಿಗೆ ವಿಶೇಷವಾದ ಕಾರ್ಡ್ ನೀಡಿ ಸರ್ಕಾರದಿಂದ ನಡೆಯತಕ್ಕ ಕಾರ್ಯಕ್ರಮಗಳಿಗೆ ಅವರನ್ನು ಅಳವಡಿಸಬೇಕು ಎಂಬ ಭಾವನೆಯನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಶಾಶ್ವತವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಾವು ನಿರ್ದಿಷ್ಟವಾಗಿ ತೆಗೆದುಕೊಳ್ಳದೇಹೋದರೆ ಬಹಳ ದೊಡ್ಡ ಅನಾಹುತವಾಗುತ್ತದೆ. ನೀರಾವರಿ ಕ್ಷೇತ್ರ ಇರಬಹುದು, ಕೆರೆ ಕಟ್ಟುವ ಕಾರ್ಯಕ್ರಮ ಇರಬಹುದು, ನಾಲೆ ತೆಗೆಯುವ ಕಾರ್ಯಕ್ರಮ ಇರಬಹುದು, ಅಣೆಕಟ್ಟು ಕಟ್ಟುವ ಕಾರ್ಯಕ್ರಮ ಇರಬಹುದು ಹೆಚ್ಚಿನ ಹಣಕಾಸು ನೆರವು ನೀಡಿ ಕರ್ನಾಟಕದಲ್ಲಿ ಬರಗಾಲದ ಬವಣೆ ಮೇಲೆ ಪ್ರತಿಯೊಂದು ಅಧಿವೇಶನದಲ್ಲಿ ಏನು ಚರ್ಚೆ ಮಾಡುತ್ತೇವೆ ಇದು ನಿಲ್ಲಬೇಕಾಗುತ್ತದೆ. ಅರಣ್ಯ ಅಭಿವೃದ್ಧಿ ಮಾಡುವುದಕ್ಕೆ ಏನು ಕಾರ್ಯಕ್ರಮ ಮಾಡಿದ್ದಾರೆ? ಒಂದು ಕಡೆ ಅರಣ್ಯವನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ನಾವು ಹೇಳುವುದು, ಮತ್ತೊಂದು ಕಡೆ ಯಾರು ಅರಣ್ಯ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರೆ ಅವರು ಅರಣ್ಯವನ್ನು ನಾಶ ಮಾಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಕೊಡುವುದು ನಡೆಯುತ್ತಿದೆ. ಇದನ್ನು ತಡೆಗಟ್ಟಬೇಕು. ಈ ಸಂದರ್ಭದಲ್ಲಿ ಕಂದಾಯ ಮಂತ್ರಿಗಳು ಪ್ರತಿಯೊಂದು ಡಿವಿಷನ್‌ಗೆ ಹೋಗಬೇಕು. ಎಲ್ಲ ಜಿಲ್ಲೆಯಲ್ಲಿ ಭೇಟಿ ಕೊಡುವುದಕ್ಕಾಗುವುದಿಲ್ಲ. ಡಿವಿಷನ್‌ನಲ್ಲಿ ಎಲ್ಲಾ ಶಾಸಕರನ್ನು ಪಾರ್ಲಿಮೆಂಟ್ ಸದಸ್ಯರನ್ನು ಮತ್ತು ಸಾಮಾನ್ಯ ಜನರನ್ನು ಕರೆದು ಒಂದು ಸಾರಿ ಸಮೀಕ್ಷೆ ಮಾಡಬೇಕಾಗುತ್ತದೆ. 15 ಜಿಲ್ಲೆಗಳಲ್ಲಿ ಬರಗಾಲ ಇದೆ ಎಂದು ಹೇಳಿದಾಗ ನಾವು ಭಯಂಕರವಾದ ಪರಿಸ್ಥಿತಿಯಲ್ಲಿದ್ದೇವೆ.

(ಛೇರ್ಮನ್ ಅವರು ಘಂಟೆ ಬಾರಿಸಿದರು)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ನೀವು ಘಂಟೆ ಬಾರಿಸಿದರೆ ನಾನು ಕೂತ್ಕೊಂಡು ಬಿಡುತ್ತೇನೆ. ಅವಕಾಶ ಇದ್ದರೆ ಮಾಡನಾಡುತ್ತೇನೆ.

ಛೇರ್ಮನ್ : ತಾವು ಮಾತನಾಡಿ. ಆದರೆ ಬೇಗ ಮುಗಿಸಿ. ಇನ್ನೂ ಮಾತನಾಡುವವರು ಇದ್ದಾರೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ :– ನಾನು ಮಾತನಾಡುವುದೇ ಅಪರೂಪ. ಇದೇ ಮೊದಲನೇ ಸಲ ಮಾಡನಾಡುತ್ತಾ ಇರುವುದು ಆರೂವರೆ ವರ್ಷದಲ್ಲಿ. ತಾವು ಘಂಟೆ ಹೊಡೆದರೆ ಕಂದಾಯ ಮಂತ್ರಿಗಳಿಗೆ ಹೇಳುವುದು ಕಷ್ಟವಾಗುತ್ತದೆ. ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು "ನನಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ, ನೀವೇ ಮಾತನಾಡಿರಿ'' ಎಂದು ಹೇಳುತ್ತಿದ್ದಾರೆ. ಬಿಜಾಪುರ ಜಿಲ್ಲೆ ಸಂಪೂರ್ಣವಾಗಿ ಬರಗಾಲ ಇರತಕ್ಕ ಜಿಲ್ಲೆ. ಅಸೆಂಬ್ಲಿಯಲ್ಲಿ ವಿರೋಧಪಕ್ಷದಲ್ಲಿದ್ದಾಗ ನೀವು ಹಠ ಹಿಡಿಯಿರಿ ಎಂದು ಹೇಳಿದ್ದೆ. ತಾವು ಕಂದಾಯ ಮಂತ್ರಿಗಳು ಸಹಾಯ ಮಾಡಬೇಕಾಗಿದೆ. ಏಕೆಂದರೆ ತಾವು ಕ್ಯಾಬಿನೆಟ್ ಮಂತ್ರಿಗಳು. ಅವರು ಚಿಕ್ಕವರು. ಅವರ ಸಹಾಯಕ್ಕೆ ನೀವು ಬರಬೇಕಾಗುತ್ತದೆ. ಏನಾದರೂ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಏನು ಒಂದು ಬರಗಾಲದ ಚರ್ಚೆ ಇಲ್ಲಿ ನಡೆದಿದೆ ಇದು ಪ್ರತಿಯೊಬ್ಬರೂ ಮಾತನಾಡತಕ್ಕ ವಿಚಾರವಾಗಿದೆ. ಸೂಕ್ಷ್ಮವಾದ ವಿಚಾರ ಇದ್ದರೂ ಕೂಡ ಯಾವ ದೃಷ್ಟಿಯಿಂದ ಬರಗಾಲವನ್ನು ಸಂಪೂರ್ಣವಾಗಿ ಸರಿಪಡಿಸಬೇಕು ಅಥವಾ ಯಾವುದಾದರೂ ದೃಷ್ಟಿಯಿಂದ ಅಧ್ಯಯನ ಮಾಡಬೇಕು ಎಂಬ ಮನೋಭಾವ ನಮ್ಮಲ್ಲಿಲ್ಲ. ನಾವು ಮಾತನಾಡುವುದು, ಮಂತ್ರಿಗಳು ಕೇಳುವುದು, ಅಧಿಕಾರಿಗಳು ಗ್ಯಾಲರಿಯಲ್ಲಿ ಬರೆದುಕೊಳ್ಳುವುದು ಆಮೇಲೆ ಪುಸ್ತಕದಲ್ಲಿ ಇಟ್ಟುಕೊಳ್ಳುವುದು ಅಷ್ಟೇ ಆಗುತ್ತದೆ. ಇದು ಸರಿಯಾದ ಕಾರ್ಯಕ್ರಮ ಅಲ್ಲ. ಕರ್ನಾಟಕದಲ್ಲಿ ಅರಣ್ಯ ಅಭಿವೃದ್ಧಿ ಮಾಡುವ ಕಾರ್ಯಕ್ರಮ ಏನಿದೆ ಅದರಲ್ಲಿ ನಿಶ್ಚಿತವಾಗಿ ಅರಣ್ಯಾಭಿವೃದ್ಧಿ ಕಾರ್ಯಕ್ರಮ ನಡೆಯಬೇಕಾಗುತ್ತದೆ. ಸರ್ಕಾರ ಬದಲಾವಣೆಯಾಗುವುದು ಸಹಜ. ಆದರೆ ಅರಣ್ಯ ಮಂತ್ರಿಗಳು ಎಂಟು ದಿವಸಕ್ಕೆ 10 ದಿವಸಕ್ಕೆ ಬದಲಾವಣೆಯಾದರೆ ಅರಣ್ಯ ಕೂಡ ಬದಲಾವಣೆಯಾಗುತ್ತದೆ. ಕಾರ್ಯಕ್ರಮಗಳು ಕೂಡ ಬದಲಾವಣೆಯಾಗುತ್ತದೆ. ಆ ದೃಷ್ಟಿಯಿಂದ ಇಂಥ ಬದಲಾವಣೆಯಾದಾಗ ಈ ಕಾರ್ಯಕ್ಷೇತ್ರದಲ್ಲಿ ಕಾರ್ಯದರ್ಶಿಗಳಾಗಿ ಯಾರು ಕೆಲಸ ಮಾಡುತ್ತಿರುತ್ತಾರೋ ಅವರ ಜವಾಬ್ದಾರಿ ಹೆಚ್ಚಿರುತ್ತದೆ. ಆ ದೃಷ್ಟಿಯಿಂದ ಯಾರೇ ಅರಣ್ಯ ಮಂತ್ರಿಗಳು ಬದಲಾವಣೆ ಆದರೂ ಕೂಡಾ ವಿಶೇಷವಾಗಿ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು 5 ವರ್ಷ 10 ವರ್ಷಕ್ಕೆ ನಿಗಧಿ ಮಾಡಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ವಿಷಯವನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ. ಈ ರಾಷ್ಟ್ರದಲ್ಲಿ ಮತ್ತು ಈ ರಾಜ್ಯದಲ್ಲಿ 1961 ರಲ್ಲಿ ಬರಗಾಲ ಬಂದಾಗ ಪರರಾಷ್ಟ್ರಗಳಲ್ಲಿ ಏನು ತಮ್ಮ ಪ್ರಾಣಿಗಳಿಗೆ ಹಾಕುತ್ತಾ ಇದ್ದರೋ ಅಂತಹ ಕೆಂಪು ಜೋಳವನ್ನು ಇಲ್ಲಿಗೆ ತಂದು ತಿಂದು ಬದುಕುವ ಪರಿಸ್ಥಿತಿ ಆಗ ಬಂದಿತ್ತು. ಆದರೆ ಇವತ್ತು ಅದನ್ನು ಮನಗಂಡು ದೇಶದ ಜನತೆಗೆ ರೈತ ಉತ್ಪಾದನೆ ಮಾಡಿ ಜನಕ್ಕೆ ಅನ್ನದಾತನಾಗಿದ್ದಾನೆ. ನಿಜವಾದ ಅನ್ನದಾತ ಆತನು. ಅಂತಹ ರೈತ ಬಾವಿ ತೆಗೆಯುವುದಕ್ಕೆ, ತುಂತುರು ನೀರಾವರಿ ಮಾಡುವುದಕ್ಕೆ, ಆ ಭಾಗದಲ್ಲಿ ಸಣ್ಣ ಕೆರೆ ಕಟ್ಟುವುದಕ್ಕೆ ಹೆಚ್ಚಿನ ಯೋಜನೆಗಳನ್ನು ಮಾಡುವುದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ನೀರಾವರಿ ಕ್ಷೇತ್ರದಲ್ಲಿ ನಾಲೆಗಳ ಮೂಲಕ ಕೊನೇ ಜಮೀನಿಗೂ ನೀರು ತಲುಪುವ ವ್ಯವಸ್ಥೆ ಮಾಡಬೇಕು. ಮತ್ತು ಎಲ್ಲಿ ರೈತ ನೀರನ್ನು ಉಪಯೋಗ ಮಾಡುತ್ತಿದ್ದಾನೆ. ಅಲ್ಲಿ ನೀರನ್ನು ವೇಸ್ಟ್ ಮಾಡದಂತೆ ಯಾವ ರೀತಿ ಅದರ ಸದುಪಯೋಗಪಡಿಸಿಕೊಳ್ಳಬೇಕು ಎನ್ನುವ ಬಗ್ಗೆ ಆತನಿಗೆ ವಿಶೇಷ ರೀತಿಯ ಶಿಕ್ಷಣ ಕೊಡುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಬರಗಾಲದ ಪ್ರದೇಶಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ನೀಡಲು ಹಣವನ್ನು ಬಿಡುಗಡೆ ಮಾಡಬೇಕು. ಇದನ್ನು ಜಿಲ್ಲಾಪರಿಷತ್‌ಗೆ ಕೊಡುತ್ತೀರೋ, ಪಿ.ಡಬ್ಲ್ಯು.ಡಿ.ಗೆ ಕೊಡುತ್ತೀರೋ ಅದು ಸರ್ಕಾರಕ್ಕೆ ಬಿಟ್ಟಿದ್ದು. ಇವತ್ತು ಕುಡಿಯುವ ನೀರಿನ ಸಮಸ್ಯೆ

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಇರಬಹುದು, ರಸ್ತೆ ನಿರ್ಮಾಣ, ಕೆರೆ ನಿರ್ಮಾಣ ಹೂಳು ತೆಗೆಯುವುದು ಇವೆಲ್ಲವನ್ನೂ ಕೂಡಾ ವಿಶೇಷ ಕಾರ್ಯಕ್ರಮ ಎಂದು ತಿಳಿದು ಈ ಕ್ಷೇತ್ರಕ್ಕೆ ಹೆಚ್ಚಿನ ಸಹಾಯವನ್ನು ತಾವು ಕರ್ನಾಟಕದ ಜನರಿಗೆ ಮಾಡಬೇಕು. ಮಾನ್ಯ ಅಧ್ಯಕ್ಷರೇ, ತಾವೂ ಕೂಡಾ ರೈತ ಸಮಾಜದಿಂದ ಬಂದಿದ್ದೀರಿ. ಇವತ್ತು ಬರಗಾಲದ ಸಮೀಕ್ಷೆಗೆ ಬರೀ ಮಂತ್ರಿಗಳು ಹೋದರೆ ಸಾಲದು, ಈ ಬಗ್ಗೆ ಅಧ್ಯಯನ ಮಾಡಲು ವಿಧಾನಮಂಡಲದ ಒಂದು ಪರ್ಮನೆಂಟ್ ಕಮಿಟಿಯನ್ನು ನೇಮಕ ಮಾಡಿ ಅದು ಈ ಬಗ್ಗೆ ಅಧ್ಯಯನ ಮಾಡಬೇಕೆಂದು ನನ್ನ ವೈಯುಕ್ತಿಕ ವಿನಂತಿಯನ್ನು ಇಡುತ್ತಿದ್ದೇನೆ. ಈ ಬಗ್ಗೆ ತಾವು ನಮ್ಮ ಸಹಾಯಕ್ಕೆ ಬರಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆ ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ.ಎಸ್. ಪಾಟೀಲ್ (ರೋಣ) :— ಸನ್ಮಾನ್ಯ ಅಧ್ಯಕ್ಷರೇ, ಈ ಬರಗಾಲದ ಬಗ್ಗೆ ಮಾತನಾಡುವಾಗ ಮೊದಲನೆಯಾದಾಗಿ ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾವು ಧಾರವಾಡ ಜಿಲ್ಲೆಯ ಶಾಸಕರು, ಧಾರವಾಡ ಜಿಲ್ಲೆಯ ಬರಗಾಲದ ಪರಿಸ್ಥಿತಿಯನ್ನು ಹೇಳಿದಾಗ ಹಿಂದೆ ಸನ್ಮಾನ್ಯ ಕಂದಾಯ ಮಂತ್ರಿಗಳಾಗಿದ್ದ ಕೆ.ಹೆಚ್. ಪಾಟೀಲರು ನಮ್ಮ ವಿಭಾಗದ ಯಾವತ್ತೂ ಶಾಸಕರ ಸಭೆಯನ್ನು ಕರೆದು ನಮ್ಮ ಜಿಲ್ಲೆಯಲ್ಲಿ ತಾಲ್ಲೂಕುವಾರು ಇದ್ದ ಬರಗಾಲದ ಒಂದು ಬವಣೆಯನ್ನು ವಿಚಾರ ಮಾಡಿ ಮುಂದೆ ಜಿಲ್ಲೆಯಿಂದ ಬಂದ ವರದಿ ಬಗ್ಗೆ ನಾವು ಅಲ್ಲಿ ಇದ್ದ ಶಾಸಕರು ಅದು ಯಾವ ಒಂದು ನಿಜವಾದ ಚಿತ್ರವನ್ನು ಬಿಂಬಿಸಿಲ್ಲ ಎಂದು ನಾವುಗಳು ಹೇಳಿದಾಗ ಸನ್ಮಾನ್ಯ ಮಂತ್ರಿಗಳು ಆವತ್ತಿನ ಶಾಸಕರ ಮುಂದೆ ತಮ್ಮ ಕಂದಾಯ ಇಲಾಖೆಯ ಕಾರ್ಯದರ್ಶಿಗಳನ್ನು ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳನ್ನು ನಮ್ಮ ಧಾರವಾಡ ಜಿಲ್ಲೆಯಾದ್ಯಂತ ಬರಗಾಲ ಪರಿಸ್ಥಿತಿ ಬಗ್ಗೆ ವೀಕ್ಷಣೆ ಮಾಡುವುದಕ್ಕೆ ಕಳುಹಿಸಿಕೊಟ್ಟರು. ನಾನು ಈ ಸರ್ಕಾರಕ್ಕೆ ಒಂದು ಅಭಿನಂದನೆ ಸಲ್ಲಿಸಿ ಅಂತಹ ಪರಿಸ್ಥಿತಿಯಲ್ಲಿ ಈ ಅಧಿಕಾರಿಗಳು ನಮ್ಮ ಧಾರವಾಡ ಜಿಲ್ಲೆಯಾದ್ಯಂತ ಕುಂದಗೋಳ್, ಮುಂಡರಗಿ, ಶಿರಹಟ್ಟಿ, ಗದಗ, ನರಗುಂದ, ನವಲಗುಂದ ಇತ್ಯಾದಿ ತಾಲ್ಲೂಕುಗಳಲ್ಲಿ ಸಂಚರಿಸಿ ಅಲ್ಲಿ ಇದ್ದ ಪರಿಸ್ಥಿತಿ ಬಗ್ಗೆ ವಿಚಾರಿಸಿಕೊಂಡು ಬಂದಾಗ ನಾವು ಅಧಿಕಾರಿಗಳು ಜೊತೆಯಲ್ಲಿ ಚರ್ಚೆಮಾಡಿ ನಮ್ಮ ಜಿಲ್ಲೆಯೊಳಗೆ ಪರಿಸ್ಥಿತಿ ಏನಿದೆ ಯಾವ ರೀತಿಯಾಗಿ ಧಾರವಾಡ ಜಿಲ್ಲೆಯೊಳಗೆ ಬರಗಾಲ ಕಾಮಗಾರಿಗಳನ್ನು ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡುವಾಗ ಜಿಲ್ಲಾಧಿಕಾರಿಗಳು ಕೂಡ ಅಲ್ಲಿದ್ದರು. ನಮ್ಮ ಜಿಲ್ಲೆಯೊಳಗೆ ಎಂತಹ ಬರಗಾಲವಿದೆ ಎನ್ನುವ ನಿಜ ಸಂಗತಿಯನ್ನು ಆವೊತ್ತಿನ ದಿವಸ ಅಧಿಕಾರಿಗಳು ಹೇಳಿದರು. ಆವೊತ್ತಿನ ಪರಿಸ್ಥಿತಿಯಲ್ಲಿ ಸರ್ಕಾರದವರು ಬರಗಾಲ ಕಾಮಗಾರಿಗಳನ್ನು ರೈತ ಮತ್ತು ರೈತ ಕಾರ್ಮಿಕರಿಗೆ ಉದ್ಯೋಗವಕಾಶ ಕೊಡುವ ಸಲುವಾಗಿ ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸಿದರು. ಆದರೆ ಕಳೆದ ಎರಡು ಮೂರು ದಿವಸಗಳಿಂದ ಬಂದಂತಹ ಸುದ್ದಿ ಏನೆಂದರೆ ನನ್ನ ಮತದಾರಕ್ಷೇತ್ರದಿಂದ ಅಲ್ಲಿನ ಕಾರ್ಯಕರ್ತರು ಮತ್ತು ಅಲ್ಲಿಯ ಜನತೆ ನನಗೆ ತಂತಿ ಸಂದೇಶವನ್ನು ಕಳುಹಿಸಿ ಅಲ್ಲಿ ನಡೆಯುತ್ತಿದ್ದಂತಹ ಕಾಮಗಾರಿ ಕೆಲಸಗಳು ಸ್ಥಗಿತವಾಗಿವೆ ಎನ್ನುವ ಸುದ್ದಿ ಬಂದಿದೆ. ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಅಧಿವೇಶನ ಮುಗಿದ ಮೇಲೆ ನಾವು ನಮ್ಮ ಗ್ರಾಮಗಳಿಗೆ ಹೋದರೆ ಬರಗಾಲಕ್ಕೆ ತುತ್ತಾದ ಪ್ರದೇಶಗಳ ಜನರು ಗುಳ್ಳೆ ಹೋಗುವ ಪರಿಸ್ಥಿತಿಯನ್ನು ನಾವು ಕಾಣುತ್ತೇವೆ. ತಕ್ಷಣ ಮಾನ್ಯ ಕಂದಾಯ ಸಚಿವರು ಬರಗಾಲ ಕಾಮಗಾರಿಗಳನ್ನು ಮುಂದುವರಿಸಬೇಕೆಂದು ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನನ್ನ ರೋಣ ತಾಲ್ಲೂಕಿನ ಪರಿಸ್ಥಿತಿಯ ಬಗ್ಗೆ ಹೇಳಬೇಕಾದರೆ, ಇನ್ನು ಮುಂದೆ ರೋಣ ತಾಲ್ಲೂಕಿನ ಜನರು ತಮ್ಮ ದನಕರುಗಳಿಗೆ ಮೇವು ಮತ್ತು ಹೊಟ್ಟು ಏರ್ಪಾಡು ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಆದರ ಬಗ್ಗೆ ಕೂಡ ಸರ್ಕಾರದವರು ಒಂದು ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ಉಪವಿಭಾಗವನ್ನು ಪಾಯಿಂಟ್ ಮಾಡಿ ಹೊಟ್ಟು ಮೇವು ಸಂಗ್ರಹ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ರೋಣ ತಾಲ್ಲೂಕಿನಲ್ಲಿ ಮಲಪ್ರಭ ಬಲದಂಡೆ ಕಾಲುವೆ ಕೆಲಸ ಕಾರ್ಯಗಳು ನಡೆದಿವೆ. ಈವೊಂದು ಬರ ಪರಿಸ್ಥಿತಿಯಲ್ಲಿ ಅಂತಹ ಕೆಲಸ ಕಾರ್ಯಗಳು ನಡೆದರೆ ಶಾಶ್ವತವಾದ ಕಾರ್ಯಗಳು ಆಗುತ್ತವೆ. ಅಂತಹ ಕೆಲಸಗಳನ್ನು ಪುನಃ ಪ್ರಾರಂಭಿಸಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಈ ಸಂದರ್ಭದಲ್ಲಿ ಬರ ಪರಿಸ್ಥಿತಿಯ ಬಗ್ಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) :— ಮಾನ್ಯ ಅಧ್ಯಕ್ಷರೇ, ಮಳೆ ಬೆಳೆಯಾಗದೆ ರಾಜ್ಯದಲ್ಲಿ ಬರಗಾಲ ಬಂದಿದೆ. ಮೈಸೂರು ಜಿಲ್ಲೆಯಲ್ಲಿ ಯಾವಾಗಲೂ ಬರಗಾಲವಿರಲಿಲ್ಲ. ಈ ವರ್ಷ ಬರಗಾಲ ಇದೆ. ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರು ಮೈಸೂರು ಜಿಲ್ಲೆಗೆ ಬಂದು ಎಲ್ಲ ಶಾಸಕರನ್ನು ಕರೆದು ಬರಗಾಲದ ಬಗ್ಗೆ ವಿಚಾರ ಮಾಡಿದಾಗ, ಅವರವರ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಕೆಲಸ ಕಾರ್ಯಗಳ ಮನವಿಯುನ್ನು ಸಲ್ಲಿಸಲಾಗಿದೆ. ಜಿಲ್ಲಾ ಪರಿಷತ್‌ನವರು ಬೋರ್‌ವೆಲ್ ಹಾಕಬೇಕಾದರೆ 250 ಜನಸಂಖ್ಯೆ ಇರಬೇಕೆನ್ನುವ ಒಂದು ನಾರ್ಮ್ಸ್ ಇಟ್ಟುಕೊಂಡಿದ್ದಾರೆ. ಆ ನಾರ್ಮ್ಸ್‌ಗಳನ್ನು ಬಿಟ್ಟು ಅವರು ಬೋರ್‌ವೆಲ್ ಹಾಕುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ಮುನ್ನೂರು ಗ್ರಾಮಗಳಿವೆ. ಇನ್ನೂರು ಹಳ್ಳಿಗಳಲ್ಲಿ

ಬೋರ್‌ವೆಲ್‌ಗಳು ಇರುವುದಿಲ್ಲ. ಬರಗಾಲ ಕಾಮಗಾರಿ ಕೆಲಸಗಳಲ್ಲಿ ಎಷ್ಟು ಬೇಕಾದರೂ ಬೋರ್‌ವೆಲ್‌ಗಳನ್ನು ಮಾಡಬಹುದೆಂದು ಹೇಳಿದರು. ಆವೊತ್ತಿನ ದಿವಸ ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದರು. ನಾವು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕೇಳಿದರೆ ಒಂದು ತಾಲ್ಲೂಕಿಗೆ ಏಳು ಬೋರ್‌ವೆಲ್‌ಗಳನ್ನು ಕೊಟ್ಟಿದ್ದೇವೆ, ನಮಗೆ ಹೆಚ್ಚಾಗಿ ಹಣ ಬಂದಿಲ್ಲ. ಹಣ ಬಂದಮೇಲೆ ಬೋರ್‌ವೆಲ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಬರಗಾಲ ಕಾಮಗಾರಿ ಕೆಲಸಗಳಲ್ಲಿ ಒಂದು ಮಂಡಲಕ್ಕೆ 10 ಸಾವಿರ ರೂಪಾಯಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಆ ಕೆಲಸ ಮಾಡದಿದ್ದರೆ ಪರವಾಗಿಲ್ಲ. ಗ್ರಾಮಗಳಿಗೆ ಕುಡಿಯುವ ನೀರಿನ ಸಲುವಾಗಿ, ನೀರಿಗೆ ತೊಂದರೆ ಇರತಕ್ಕ ಗ್ರಾಮಗಳಿಗೆ ಬರಗಾಲ ಸ್ಕೀಮ್‌ಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಜಿಲ್ಲಾ ಪರಿಷತ್‌ನವರು ನಾರ್ಮ್ಸ್ ಬಿಟ್ಟು ಹೋಗುವುದಿಲ್ಲ. ಒಂದು ತಾಲ್ಲೂಕಿಗೆ 2 ಲಕ್ಷ ರೂಪಾಯಿ ಕೊಟ್ಟರೆ ಒಂದು ಮಂಡಲಕ್ಕೆ 10 ಸಾವಿರ ರೂಪಾಯಿಗಳ ಕೆಲಸ ಮಾಡುತ್ತಾರೆ. ಹಾಗೆ ಮಾಡುವುದರಿಂದ ಏನು ಕೆಲಸ ಆಗುವುದಿಲ್ಲ. ಕೆರೆಗಳ ಹೂಳು ತೆಗೆಯಬೇಕಾದರೆ 50 ಸಾವಿರ ರೂಪಾಯಿಗಳು ಬೇಕಾಗುತ್ತವೆ. ಕನಿಷ್ಠ ಪಕ್ಷ 20 ಲಕ್ಷ ರೂಪಾಯಿಗಳು ಒಂದು ತಾಲ್ಲೂಕಿಗೆ ಬೇಕಾಗುತ್ತದೆ. ಅಲ್ಲಿ ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕೆ ಯಾವ ನಿರ್ಬಂಧವೂ ಇಲ್ಲದೆ ಹಣ ಕೊಡಬೇಕಾಗಿದೆ. ಎಷ್ಟು ಬೇಕಾದರೂ ಹಣ ಕೊಡುತ್ತೇವೆ ಎಂದು ಹಿಂದಿನ ಸಚಿವರು ಹೇಳಿದ್ದರು. ಆದರೆ ಜಿಲ್ಲಾಪರಿಷತ್ತಿನವರು ಹಣ ಬಂದಿಲ್ಲವೆಂದು ಹೇಳುತ್ತಾರೆ. ಮೈಸೂರು ಡಿವಿಜನ್ನಿಗೆ 3 ಕೋಟಿ ಕೊಟ್ಟಿದ್ದೇವೆ ಎಂದು ಸಚಿವರು ಹೇಳಿದ್ದಾರೆ. ಮಂಡ್ಯ, ಮೈಸೂರು, ಕೊಡಗು ಮತ್ತು ಹಾಸನಗಳಿಂದ ಕೂಡಿದ ಈ ದೊಡ್ಡ ವಿಭಾಗಕ್ಕೆ 3 ಕೋಟಿ ಬಹಳ ಕಡಿಮೆಯಾಗುತ್ತದೆ, ಎಂದು ನಾನು ಹೇಳುತ್ತೇನೆ: ಈ ರೀತಿ ಬಹಳ ತೊಂದರೆ ಇದೆ. ಮಾನ್ಯ ಕಂದಾಯ ಸಚಿವರು ವಿಶೇಷ ರೀತಿಯಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಯಾವ ತಾಲ್ಲೂಕಿನಲ್ಲಿ ಅವಶ್ಯಕತೆ ಇದೆ ಮತ್ತು ಕೆಲಸ ಮಾಡುವುದಕ್ಕೆ ತೊಂದರೆಯಾಗಿದೆ, ಅಂತಹ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಯಾವ ತೊಂದರೆಯೂ ಇಲ್ಲದ ಹಾಗೆ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಹಲವಾರು ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಸುಮಾರು 75 ಸಾವಿರ ರೂಪಾಯಿ ಎಸ್ಟಿಮೇಟ್ ಮಾಡುವ ಕಡೆ ಕೆ.ಇ.ಬಿ.ಯವರು 40 ಸಾವಿರ ಎಸ್ಟಿಮೇಟ್ ಮಾಡಿದ್ದಾರೆ ಅಷ್ಟು ಸ್ಯಾಂಕ್ಷನ್ ಮಾಡುವುದಕ್ಕೆ ಕೆ.ಇ.ಬಿ.ಯವರಿಗೆ ಪವರ್ಸ್ ಇದೆ. ಸುಮಾರು ನಲ್ವತ್ತು – ಐವತ್ತು ವರ್ಷಗಳಿಂದ ಎಷ್ಟೋ ಕಡೆ ವಿದ್ಯುಚ್ಛಕ್ತಿ ಇಲ್ಲ. ಇಂತಹ ಪರಿಸ್ಥಿತಿ ಇದೆ. ಸರ್ಕಾರದವರು ಈ ಕಡೆಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ, ಮೈಸೂರು ಜಿಲ್ಲೆಯಲ್ಲಿ ಹೆಚ್ಚಾಗಿ ಹತ್ತಿ ಬೆಳೆಯನ್ನು ಬೆಳೆಯುತ್ತಾರೆ. ಈ ಬರಗಾಲದ ಕಾರಣದಿಂದ ಎಲ್ಲ ಕಡೆ ಹತ್ತಿ ಬೆಳೆ ಸಂಪೂರ್ಣವಾಗಿ ಹೊರಟುಹೋಗಿದೆ. ಮುಂದಿನ ವರ್ಷಕ್ಕೆ ರಾಜ್ಯಸರ್ಕಾರದಿಂದ ಹತ್ತಿ ಬೆಳೆಯನ್ನು ಸ್ಟಾಕ್ ಮಾಡಬೇಕಾಗುತ್ತದೆ. ನಮ್ಮ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ 1 ಸಾವಿರ ಟನ್ ಹತ್ತಿಬೀಜ ವಿತರಣೆಯಾಗಿದೆ. ಹತ್ತಿ ಬೀಜವನ್ನು ಮುಂದಿನವರ್ಷದಿಂದ ಏಪ್ರಿಲ್ ಹೊತ್ತಿಗೆ ಸ್ಟಾಕ್ ಮಾಡಿ ಉಪಯೋಗ ಮಾಡಬೇಕಾಗುತ್ತದೆ. ಇನ್ನು ಬಗರ್‌ಹುಕುಂ ಸಾಗುವಳಿ ಬಗ್ಗೆ ಗ್ರಾಮಗಳಲ್ಲಿ ಘರ್ಷಣೆಯಾಗುತ್ತದೆ. ಅದು ಆಗದ ಹಾಗೆ ನೋಡಿಕೊಳ್ಳಬೇಕು. ಹೆಚ್ಚಾಗಿ ಮೈಸೂರು ಜಿಲ್ಲೆಯಲ್ಲಿ ಈ ತೊಂದರೆಯಾಗುತ್ತಿದೆ. ಇದನ್ನು ಕೂಡಲೇ ಮಾಡಬೇಕೆಂದು ಹೇಳಿ ನಮ್ಮ ಮೈಸೂರು ಈ ಜಿಲ್ಲೆಗೆ ಬೋರ್‌ವೆಲ್‌ಗೆ ಸರ್ಕಾರ ಯಾವ ತೊಂದರೆಯನ್ನೂ ಕೊಡದೆ ಹಣ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ್) :– ಮಾನ್ಯ ಅಧ್ಯಕ್ಷರೇ, ಇವತ್ತು ಕಳೆದವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಬರಗಾಲದ ಬವಣೆಯನ್ನು ನಾವು ಅನುಭವಿಸುತ್ತಿರತಕ್ಕಂಥ ಕಾಲದಲ್ಲಿ ಸರ್ಕಾರ ಕೃಷಿ ಕಾರ್ಮಿಕರಿಗೆ ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗದಲ್ಲಿರತಕ್ಕಂಥ ಬಡವರಿಗೆ ಕೂಡಲೇ ಕೆಲಸಗಳನ್ನು ಅವರಿಗೆ ಒದಗಿಸಿಕೊಡಬೇಕು. ಧಾರವಾಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಬರಗಾಲದ ಸಮೀಕ್ಷೆಯನ್ನು ಮಾಡಿದ ಮೇಲೂ ಕೂಡ ಧಾರವಾಡ ಜಿಲ್ಲೆಯಲ್ಲಿ ವಿಶೇಷವಾಗಿ ಕುಂದಗೋಳ ತಾಲ್ಲೂಕು ಶಿರಹಟ್ಟಿ, ರೋಣ, ಮುಂಡರ್ಗಿ, ನರಗುಂದ, ನವಲಗುಂದಗಳಲ್ಲಿ ಬರಗಾಲದ ಛಾಯೆಯನ್ನು, ಬಹಳ ಭೀಕರವಾದ ಚಿತ್ರಣವನ್ನು ನಾವು ನೋಡಬೇಕಾದ ಸಂದರ್ಭ ಬಂದೊದಗಿದೆ. ಕೂಲಿಗಾರರಿಗೆ ಕೆಲಸ ಇಲ್ಲದೆ ನೆರೆ ರಾಜ್ಯಗಳಿಗೆ ವಲಸೆ ಹೋಗತಕ್ಕಂಥ ಸಂದರ್ಭದಲ್ಲಿ ನೆರೆರಾಜ್ಯಗಳಲ್ಲೂ ಕೂಡ ಕೆಲಸ ಇಲ್ಲದಂಥ ಸಂದರ್ಭದಲ್ಲಿ ಅವರು ಮರಳಿ ಗ್ರಾಮಗಳಿಗೆ ಬರತಕ್ಕಂಥ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹಳೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮಗಳನ್ನು, ಕಡಿದು ಹೋಗಿರತಕ್ಕಂಥ ಸಂಪರ್ಕವ್ಯವಸ್ಥೆಯನ್ನು ಪುನಃ

ಕಲ್ಪಿಸುವಂತೆ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ನಿರ್ಮಾಣವನ್ನು ಮಾಡಬೇಕಾಗಿದೆ. ಅದರಲ್ಲೂ ಕೂಡ ಮಂಡಲ ಪಂಚಾಯಿತಿಗಳಲ್ಲಿರತಕ್ಕಂಥ ನೆಹರೂ ರೋಜಗಾರ್ ಯೋಜನೆಯಲ್ಲಿ ಯಾವ ಮಂಡಲ ಪಂಚಾಯಿತಿ ಕೂಡ ಈ ಬರಗಾಲ ಕಾಮಗಾರಿಯಲ್ಲಿ ಪೂರ್ಣವಾಗಿ ಹಣ ಖರ್ಚುಮಾಡಿಲ್ಲ. ಸರ್ಕಾರ ಈ ಕಾಮಗಾರಿಗಳಿಗೆ ಏನು ಹಣವನ್ನು ಕೊಟ್ಟಿದೆ ಅದು ಸಾಲುವುದಿಲ್ಲ. ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು, ಮತ್ತು ಹಣಕಾಸಿನ ನೆರವನ್ನು ಲೋಕೋಪಯೋಗಿ ಇಲಾಖೆಗೆ ನೀಡಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೂಡಲೇ ಪ್ರಾರಂಭಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹಿಂದುಳಿದ ವರ್ಗದ ಅತಿ ಸಣ್ಣ ರೈತರ ಬವಣೆಯನ್ನು ನೋಡಿದರೆ, ಬಹಳ ಕಷ್ಟಕರವಾದ ಪರಿಸ್ಥಿತಿಯಲ್ಲಿ ಇದ್ದಾರೆ. ಇವರ ದನಕರುಗಳಿಗೆ ಮೇವನ್ನು ಕೊಡತಕ್ಕ ವ್ಯವಸ್ಥೆಯನ್ನೂ ಕೂಡ ಸರ್ಕಾರ ಮಾಡಬೇಕಾಗುತ್ತದೆ. ರೈತ ಕೊಂಡಿರತಕ್ಕ ಸಹಸ್ರಾರು ರೂಪಾಯಿಗಳ ಕಿಮ್ಮತ್ತಿನ ದನಕರುಗಳನ್ನು ಮಾರುಕಟ್ಟೆಗೆ ಮಾರುವುದಕ್ಕೆ ಹೋಗುವಂತಹ ಸನ್ನಿವೇಶವನ್ನು ನೋಡಿದರೆ, ಬಹಳ ದು:ಖವಾಗುತ್ತದೆ. ಕುಂದಗೋಳ್ ತಾಲ್ಲೂಕಿನ ಬಗ್ಗೆ ಹೇಳಬೇಕಾದರೆ, ಕುಂದಗೋಳ್ ತಾಲ್ಲೂಕಿನ ಆರು ಮಂಡಲಗಳಲ್ಲಿ ಬಹಳ ಬರಗಾಲದ ಬವಣೆಯನ್ನು ಅನುಭವಿಸಿದ್ದಾರೆ. ಕೃಷಿ ಕಾರ್ಮಿಕರಿಗೆ ಕೆಲಸ ಇಲ್ಲದಂತಹ ಸಮಯದಲ್ಲಿ, ಕೆಲಸವನ್ನು ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಕೂಡಲೇ ಮಾಡಬೇಕು. ನನ್ನ ಮತಕ್ಷೇತ್ರದಲ್ಲಿ 22 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬವಣೆಯನ್ನು ಅನುಭವಿಸುತ್ತಿದ್ದಾರೆ. ಯರಗುಪ್ಪೆ, ಯಲಿಬೂದಾಳ್ ಮಂಡಲಗಳಲ್ಲಿ 5–6 ಕಿಲೋಮೀಟರ್ ಅಲ್ಲ, 10 ಕಿಲೋಮೀಟರ್ ಹೋಗಿ ಕುಡಿಯುವ ನೀರನ್ನು ತರತಕ್ಕ ಪರಿಸ್ಥಿತಿಯನ್ನು ಕಣ್ಣಾರೆ ನೋಡುತ್ತಿದ್ದೇವೆ. ಸರ್ಕಾರ ಕೂಡಲೇ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದೂ, ಬರಗಾಲದಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಅಧ್ಯಕ್ಷರ ಮುಖೇನ, ನಾನು ಸರ್ಕಾರವನ್ನು, ಕಂದಾಯ ಮಂತ್ರಿಗಳಲ್ಲಿ ಮನವಿ ಮಾಡಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ) :– ಮಾನ್ಯ ಅಧ್ಯಕ್ಷರೇ, ಈವರೆಗೆ ಮಾತನಾಡಿದ ಕೆಲವು ಸದಸ್ಯರು, ಬರಗಾಲದ ಪರಿಸ್ಥಿತಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಂಡು ರೈತರಿಗೆ ಸಹಾಯ ಮಾಡಬೇಕೆಂಬ ವಿಚಾರವನ್ನು ಬಹಳಮಟ್ಟಿಗೆ ಒತ್ತಿ ಹೇಳಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರ ಮತ್ತು ಮಾಡಬೇಕಾದ ಕೆಲಸವೂ ಹೌದು. ಆದರೆ, ಬರಗಾಲದ ಪರಿಸ್ಥಿತಿ ಬಂದಾಗ, ರಾಜ್ಯದಲ್ಲಿರತಕ್ಕ ಯಾವ ಯಾವ ವರ್ಗದ ಜನಗಳ ಮೇಲೆ ಬರಗಾಲ ಹೆಚ್ಚಿಗೆ ಬೀಳುತ್ತದೆ, ಅವರ ತೊಂದರೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನೋಡುವುದು ಸರ್ಕಾರದ ಆದ್ಯಕರ್ತವ್ಯ. ಏತಕ್ಕೆಂದರೆ, ನಮ್ಮ ರಾಜ್ಯದಲ್ಲಿರತಕ್ಕ ಕೆಲವು ವರ್ಗಗಳು ಬರಗಾಲದ ಪರಿಸ್ಥಿತಿಯಲ್ಲಿ ತಮ್ಮ ನಿತ್ಯ ಜೀವನಕ್ಕೆ ತೊಂದರೆ ಪಡಬೇಕಾದ ಸನ್ನಿವೇಶ ನಮ್ಮೆಲ್ಲರಿಗೂ ಗೊತ್ತಿದೆ. ಅದರಲ್ಲಿಯೂ ರೈತ ಕಾರ್ಮಿಕರಿಗೆ, ರೈತರು ಒದಗಿಸತಕ್ಕ ಕೆಲಸ ಒಂದು ವರ್ಷದಲ್ಲಿ 2–3 ತಿಂಗಳು ಇರಬಹುದು. ಉಳಿದ ಕಾಲದಲ್ಲಿ ರೈತ ಕಾರ್ಮಿಕರು ಬವಣೆಗೆ ತುತ್ತಾಗುತ್ತಾರೆ. ರೈತರಿಗೋಸ್ಕರವಾಗಿ ಸರ್ಕಾರ, ಬರಗಾಲದ ಪರಿಸ್ಥಿತಿಯನ್ನು ಪರಿಹಾರ ಮಾಡುವುದಕ್ಕೆ ಶಾಶ್ವತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆಯೋ, ಅದೇ ರೀತಿ ಈ ರೈತ ಕಾರ್ಮಿಕರ ಬಗ್ಗೆಯೂ, ಅಷ್ಟೇ ಆದ್ಯ ಗಮನ ಕೊಟ್ಟು ಕಾರ್ಯಕ್ರಮ ಹಾಕಿಕೊಳ್ಳಬೇಕಾದುದು ಬಹಳ ಪ್ರಾಮುಖ್ಯವಾದುದು. ಸರ್ಕಾರ ಇವರ ಬಗ್ಗೆ ತೀವ್ರ ಗಮನಹರಿಸುವುದು ಬಹಳ ಒಳ್ಳೆಯದು. ರೈತ ಕಾರ್ಮಿಕರು ದುರಾದೃಷ್ಟವಶಾತ್ ನಮ್ಮ ದೇಶದಲ್ಲಿ ಕೆಲವು ವರ್ಗಗಳಿಗೆ ಮಾತ್ರ ಸೀಮಿತವಾಗಿದೆ. ಇವತ್ತಿನ ದಿವಸ ತಾವು, ಬರಗಾಲದಲ್ಲಿ ಕೆಲಸ ಮಾಡತಕ್ಕ ಜನ ಯಾವ ವರ್ಗದವರು ಅಲ್ಲಿ ಹೆಚ್ಚಾಗಿರುತ್ತಾರೆ ಎಂಬುದನ್ನು ನೋಡಿದರೆ, ನಾನು ಹೇಳತಕ್ಕಂಥ ವಿಚಾರ ಸತ್ಯವೇ ಅಲ್ಲವೇ ಎಂಬುದು ತಮಗೆ ಗೊತ್ತಾಗುತ್ತದೆ. ತಾವು ಒದಗಿಸತಕ್ಕ ಕೆಲಸಗಳ ಹಣವು ಕಂಟ್ರಾಕ್ಟರುಗಳಿಗೆ ಮತ್ತು ಮಧ್ಯವರ್ತಿಗಳಿಗೆ ಹೆಚ್ಚಾಗಿ ಹೋಗುತ್ತದೆ. ಈ ಕಷ್ಟದಿಂದ ಅವರಿಗೆ ಪರಿಹಾರ ಮಾಡಬೇಕಾಗಿದ್ದರೆ, ಹಿಂದೆ ಅನೇಕ ಕಡೆ ಲೇಬರ್ ಕಂಟ್ರಾಕ್ಟರ್ ಸೊಸೈಟಿ ಎಂದು ಇದ್ದವು, ಅವು ಈಗ ಕೆಲಸ ಮಾಡುತ್ತಾ ಇಲ್ಲ. ಇವುಗಳನ್ನು ಮತ್ತೆ ಈಗ ಏಕೆ ರೀವೈವ್ ಮಾಡಬಾರದು? ಒಂದುವೇಳೆ ಆ ರೀತಿ ಇವುಗಳನ್ನು ರೀವೈವ್ ಮಾಡಿದ್ದೆ. ಆದರೆ, ಸರ್ಕಾರ ಒದಗಿಸತಕ್ಕ ಹಣದಲ್ಲಿ ಹೆಚ್ಚಿಗೆ ಕೆಲಸದ ಸಹಾಯವನ್ನು ಇವರು ತೆಗೆದುಕೊಳ್ಳಬಹುದು. ಮಧ್ಯವರ್ತಿಗಳು ಸುಳ್ಳು ಲೆಕ್ಕಗಳನ್ನು ಕೊಟ್ಟು, ಸುಳ್ಳು ಎಸ್ಟಿಮೇಟುಗಳನ್ನು ಮಾಡಿ, ಅಧಿಕಾರಿವರ್ಗದವರ ಜೊತೆ ಸೇರಿ, ವ್ಯವಹಾರ ಮಾಡುವ ದೆಸೆಯಿಂದ ಅನೇಕ ರೀತಿಯಲ್ಲಿ ಮಾಡತಕ್ಕ ಕೆಲಸದ ಪ್ರಮಾಣ ಕಡಿಮೆಯಾಗುತ್ತದೆ.

ಈ ದಿಸೆಯಿಂದ ಅನೇಕ ರೀತಿಯಲ್ಲಿ ಮಾಡತಕ್ಕಂಥ ಕೆಲಸಗಳ ಪ್ರಮಾಣ ಕಡಿಮೆ ಆಗುತ್ತದೆ. ಆದ್ದರಿಂದ ಲೇಬರ್ ಸೊಸೈಟಿಗಳು ಇದನ್ನು ಮಾಡಿದರೆ ಆಗ ಸರ್ಕಾರದವರು ಕೆಲವು ಗೌರ್ನಮೆಂಟ್ ಕಂಟ್ರಾಕ್ಟ್‌ದಾರರಿಗೆ ಈ ಕೆಲಸಗಳನ್ನು ಕೊಟ್ಟರೆ ಸರ್ಕಾರದ ಕೆಲಸ ಆಗ ಜಾಸ್ತಿಯಾಗುತ್ತದೆ. ಮತ್ತು ಈ ಕೆಲಸ ಮಾಡಿದ ಜನಗಳಿಗೆ ಬರಬೇಕಾದ ಹಣ ಪೂರ್ತಿಯಾಗಿ ಸಿಗುವುದಕ್ಕೆ ಸಾಧ್ಯತೆಯುಂಟು. ಆದ್ದರಿಂದ ಮಧ್ಯವರ್ತಿ ಕಂಟ್ರಾಕ್ಟ್‌ದಾರರ ಹಾವಳಿ ತಪ್ಪಿಸಬಹುದು. ಈಗ ಸರ್ಕಾರದವರು ತಾತ್ಕಾಲಿಕವಾಗಿ ನಡೆಸತಕ್ಕಂಥ ಕೆಲಸಗಳಲ್ಲಿ ಕೆಲಸ ಮಾಡತಕ್ಕಂಥ ಜನಗಳಿಗೆ ಪರಿಹಾರ ಕಾಮಗಾರಿಗಳನ್ನು ಅಲ್ಲಿ ಕೆಲಸ ಮಾಡುವಂತಹ ಕೂಲಿಕಾರರಲ್ಲಿಯೇ ಯಾರಾದರೂ ಒಬ್ಬರನ್ನು ಸೂಪರ್‌ವೈಸರ್ ಆಗಿ ಮಾಡಿದರೆ ಅವರು ಒಂದು ಪಟ್ಟಿ ತೆಗೆದುಕೊಂಡು ಅವರಿಗೆ ಎಷ್ಟು ಹಣ ಬರಬೇಕೋ ಅಷ್ಟು ಹಣ ಆಗಲಿ ಅಥವಾ ಧಾನ್ಯವಾಗಲಿ ಕೊಡತಕ್ಕಂಥ ಕೆಲಸಗಳನ್ನು ಸರ್ಕಾರದವರು ಏತಕ್ಕೆ ಮಾಡಬಾರದು. ಇದು ಸಾಧ್ಯತೆಯುಂಟು ಅಲ್ಲವೆ? ಇದು ಸಾಧ್ಯವಿರುವಾಗ ಸರ್ಕಾರದವರು ಇದನ್ನು ಮಾಡದಿದ್ದರೆ ನಿಜವಾಗಿಯೂ ಅವರಿಗೆ ಇದರ ಬಗ್ಗೆ ಕಳಕಳಿ ಇದೆಯೋ ಇಲ್ಲವೋ ಎನ್ನುವ ಸಂಶಯ ಬರುವುದಿಲ್ಲವೇ? ಇವತ್ತಿನ ದಿವಸ ತಾವು ಈ ಬರಗಾಲ ಪರಿಸ್ಥಿತಿಯಲ್ಲಿ ಒದಗಿಸತಕ್ಕಂಥ ಕೂಲಿ ಎಷ್ಟು? ರೋಜ್‌ಗಾರ್ ಸಿಸ್ಟಂನಲ್ಲಿ ಅವರಿಗೆ 12 ರೂಪಾಯಿ ಕೂಲಿ ಕೊಡುತ್ತೀರಿ. ಈ 12 ರೂಪಾಯಿಗಳಿಗೆ ಅನೇಕ ಕಡೆ ಕೂಲಿಕಾರರೇ ಬರುವುದಿಲ್ಲ. ಆಗ ಅವರೇನು ಮಾಡುತ್ತಾರೆ ಎಂದರೆ ನಿಮಗೆ 15 ರೂಪಾಯಿ ಕೊಡುತ್ತೇವೆ 20 ರೂಪಾಯಿ ಕೊಡುತ್ತೇವೆ ಎಂದು ಹೇಳತಕ್ಕಂಥ ಸಂದರ್ಭಗಳು ಜಾಸ್ತಿ ಉಂಟು. ಆಗ ಅಲ್ಲಿ ಕೆಲಸ ಮಾಡಿಸತಕ್ಕಂಥ ಕಂಟ್ರಾಕ್ಟ್‌ದಾರರು ಏನು ಮಾಡುತ್ತಾರೆ ಎಂದರೆ ಅವರು ಅಲ್ಲಿ ಇರದಿದ್ದರೂ ಸಹ ಅವರು ಕೆಲಸ ಮಾಡಿಸಿದಂತೆ ಮಾಡುತ್ತಾರೆ. ಒಂದೇ ಸಾರಿ ಹತ್ತಾರು ಕಡೆ ಕೆಲಸ ಮಾಡಿಸುತ್ತಿರುತ್ತಾರೆ. ಎರಡು ಮೂರು ಮಂಡಲಗಳಿಗೆ ಒಬ್ಬರೇ ಇಂಜನೀಯರ್ಸ್ ಇರುತ್ತಾರೆ. ಆ ಎರಡು ಮೂರು ಮಂಡಲಗಳಲ್ಲಿ ನಡೆಯುವಂತಹ ಕೆಲಸಗಳನ್ನು ಸೈಮಲ್ಟೇನಿಯಸ್ ಆಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಕೆಲವೊಂದು ಮಂಡಲಗಳಲ್ಲಿ 5–10 ಕೆಲಸಗಳು ಬೇರೆ ಬೇರೆ ಕಡೆಗಳಲ್ಲಿ ನಡೆಯತಕ್ಕಂಥ ಸಾಧ್ಯತೆಗಳು ಇದೆ. ಈ ಕೆಲಸಗಳನ್ನು ಸೂಪರ್ ವೈಜ್ ಮಾಡತಕ್ಕಂಥವರು ಯಾರು? ಆಗ ಕಂಟ್ರಾಕ್ಟ್‌ದಾರರು ಹೇಳಿದಷ್ಟು ಕೆಲಸಗಾರರು ಎಂದು ನಂಬಬೇಕಾಗುತ್ತದೆ. ಆದ್ದರಿಂದ ನಿಮಗೆ ಏನೇ ನಿರ್ದೇಶನವಿದ್ದರೂ ಸಹ ಇದನ್ನು ಕಾರ್ಯರೂಪಕ್ಕೆ ತರುವಾಗ ಕಂಟ್ರಾಕ್ಟ್‌ದಾರರು ಅಲ್ಲಿ ಇರತಕ್ಕಂಥಾದ್ದು ಆಗಬೇಕು. ಈಗ ಮಂಡಲ ಪಂಚಾಯಿತಿಗಳಲ್ಲಿ ಅನೇಕ ಸದಸ್ಯರು ಮತ್ತು ಪ್ರಧಾನರೇ ಈ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಇದು ನಮ್ಮ ಮೈಸೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆದು ವಿಫಲವಾದ ಚರ್ಚೆ ಸಹ ಆಗಿದೆ. ಅಲ್ಲಿ ನೂರಕ್ಕೆ ಎಂಬತ್ತರಷ್ಟು ಕೆಲಸಕಾರ್ಯಗಳನ್ನು ಅಲ್ಲಿನ ಸದಸ್ಯರೇ ಮಾಡಿಸುತ್ತಿದ್ದಾರೆ. ಇಲ್ಲಿ ಅನೇಕ ಜನ ಅಲ್ಲಿಂದ ಬಂದವರು ಇದ್ದಾರೆ ಅವರಿಂದ ಬೇಕಾದರೆ ತಾವು ವಿಚಾರ ತಿಳಿದುಕೊಳ್ಳಬಹುದು ಈ ಕೆಲಸಕಾರ್ಯಗಳನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವಾಗ ಕಂಟ್ರಾಕ್ಟ್‌ದಾರರು ಮತ್ತು ಇಂಜನೀಯರ್ಸ್ ಕಡೆಯಿಂದ ಪರಿಶೀಲನೆ ನಡೆದು ಆಗಬೇಕೆಂದು ಇದೆ. ಅದು ಬರೀ ರೆಕಾರ್ಡ್‌ನಲ್ಲಿ ಮಾತ್ರ ತೋರಿಸುತ್ತಿದ್ದಾರೆ. ಆದರೆ ಕೆಲಸ ಮಾಡಿಸುವವರೇ ಬೇರೆ, ಇದರಿಂದ ಏನಾಗಿದೆ ಎಂದರೆ ಕಂಟ್ರಾಕ್ಟ್‌ದಾರರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅವಾಗ ಏನು ಮಾಡುತ್ತಾರೆ ಎಂದರೆ ನಾವು ನಮ್ಮ ಲೆಕ್ಕದ ಪ್ರಕಾರ 12 ರೂಪಾಯಿ ಕೂಲಿ ಕೊಟ್ಟರೆ ಅವರು 15 ರೂಪಾಯಿ 20 ರೂಪಾಯಿ ಕೂಲಿ ಕೊಟ್ಟು ಅವರು ಅಲ್ಲಿ 10 ಜನ ಕೆಲಸ ಮಾಡಿದ್ದಾರೆ 50 ಜನ ಕೆಲಸ ಮಾಡಿದ್ದಾರೆ ಎಂದು ಪಟ್ಟಿ ಬರೆದು ಕೊಳ್ಳುತ್ತಾನೆ. ಈಗ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಅನೇಕ ಜನ ದೂರುಗಳು ಕೊಟ್ಟಿರತಕ್ಕಂಥಾದ್ದು ಇದೆ. ಈ ದೂರುಗಳನ್ನು ತಾವು ಏತಕ್ಕೆ ಪರಿಶೀಲನೆ ಮಾಡಿಲ್ಲ ಎಂದು ಸಂಬಂಧಪಟ್ಟ ಬಿ.ಡಿ.ಒ.ಗಳಿಗೆ ಹೇಳಿದಾಗ ಏನು ಸಾರ್ ಮಾಡುವುದು ನಾವು ಆ ರೀತಿ ಏನಾದರೂ ಮಾಡಿದರೆ ಫ್ಲಡ್ ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ ಆದ್ದರಿಂದ ಇದನ್ನು ನಾವು ಮಾಡುವುದಕ್ಕೆ ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ನಿಜವಾಗಿಯೂ ಸತ್ಯಾಂಶವನ್ನು ಮರೆ ಮಾಡತಕ್ಕಂಥ ಕೆಲಸ ಮಾಡಿರುವುದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಇದರಲ್ಲಿ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಲೇಬರ್ ಸಿಸ್ಟಂನಲ್ಲಿ ಎಷ್ಟೇ ಹಣ ಕೊಟ್ಟರೂ ಅದು ಅವರ ಕೈ ತಲುಪುವುದಿಲ್ಲ ಬಾಯಿಗೆ ಮುಟ್ಟುವುದಿಲ್ಲ ಆದ್ದರಿಂದ ಈ ಲೇಬರ್ ಸಿಸ್ಟಂನ್ನು ಬದಲಾವಣೆ ಮಾಡಿದರೆ ನಿಜವಾಗಿ ಅವರಿಗೆ ಸ್ವಲ್ಪ ಅನುಕೂಲವಾಗಿತ್ತದೆಂದು ಭಾವಿಸುತ್ತೇನೆ. ಖಂಡಿತವಾಗಿ ಇದು

ಸಾಧ್ಯತೆಯುಂಟು. ಜೊತೆಗೆ ಸರ್ಕಾರದವರು ಕುಡಿಯುವ ನೀರಿನ ತೊಂದರೆ ಬಗ್ಗೆ ಹೆಚ್ಚಿನ ನಿಗಾವಹಿಸಿ ಹಣ ಕೊಟ್ಟಿದ್ದಾರೆ. ಅನೇಕ ಕಡೆ ನೀರಿನ ಪೈಪ್‌ಗಳು ಇಲ್ಲದೆ ನೀರಿನ ಸಪ್ಲೈ ಸರಿಯಾಗಿ ಆಗುತ್ತಿಲ್ಲ ಅನೇಕ ಕಡೆ ಕುಡಿಯುವ ನೀರಿನ ಅಭಾವ ನೀಗಿಸಲು ಮೊದಲು ಸಾರ್ವಜನಿಕ ನಲ್ಲಿಗಳಿಗೆ ನೀರು ಬಿಟ್ಟು ಆ ಮೇಲೆ ಬೇಕಾದರೆ ಪ್ರವೇಟ್ ಜನಗಳು ನೀರನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಈ ರೀತಿಯಲ್ಲಿ ಕಾರ್ಯರೂಪಕ್ಕೆ ತರುತ್ತಿಲ್ಲ. ಎಲ್ಲಲ್ಲಿ ಓವರ್‌ಹೆಡ್ ಟ್ಯಾಂಕ್‌ಗಳು ಇವೆಯೋ ಅಂಥಾ ಕಡೆ ಈ ರೀತಿ ಯಾರೂ ಮಾಡುತ್ತಿಲ್ಲ. ಹತ್ತು ಪಬ್ಲಿಕ್ ನಲ್ಲಿ ಇದ್ದರೆ ನೂರು ಪ್ರೈವೇಟ್ ನಲ್ಲಿಗಳು ಇವೆ. ಆ ದಿಸೆಯಿಂದಾಗಿ ನೀರಿನ ಭವಣೆ ಇನ್ನೂ ಹೆಚ್ಚಾಗುವ ಸ್ಥಿತಿ ಆಗಿಬಿಟ್ಟಿದೆ. ಇದನ್ನು ತಪ್ಪಿಸಬೇಕು. ಇದರ ಬಗ್ಗೆ ನಮ್ಮ ಡಿಸ್ಟ್ರಿಕ್ಟ್‌ಗೆ ಬಂದಂಥ ಸಚಿವರುಗಳಿಗೆ ಎಲ್ಲರಿಗೂ ಹೇಳಿದ್ದೇನೆ. ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟಂಥ ಅಧಿಕಾರಿಗಳಿಗೆಲ್ಲಾ ಹೇಳಿದ್ದೇನೆ. ಆದರೂ ಸಹಾ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಜೊತೆಗೆ ಇನ್ನೂ ಒಂದು ಏನಾಗಿದೆ ಎಂದರೆ ಅದೇ ತರಹ ಪ್ರೈವೇಟ್ ನಲ್ಲಿಗಳು ಹಾಕಿಕೊಂಡಿರುವ ಕಡೆ ಏನೆಂದರೆ ಕರೆಂಟಿನ ಮೇನ್‌ಟೆನೆನ್ಸ್ ಚಾರ್ಜಸ್‌ಗೆ ಬೇಕಾದಷ್ಟು ಖರ್ಚಾಗುವುದಿದ್ದರೂ ಸಹಾ ನಾಮಿನಲ್ ರೇಟ್ ಹಾಕ್ತಾರೆ. ಇದರ ವಿಚಾರದಲ್ಲಿ ಸತ್ಯಾಂಶ ಹೊರಗಡೆ ಬರಬೇಕು.

(ಅಧ್ಯಕ್ಷರು ಬೆಲ್‌ನ್ನು ಬಾರಿಸಿದರು)

ಇನ್ನೊಂದು ನಾಲ್ಕು ನಿಮಿಷ ಕೊಡಿ. ನಾನು ಹೇಳುತ್ತಿದ್ದೇನೆ. ಬೇರೆಯವರಿಗೆಲ್ಲಾ ಬೇಕಾದಷ್ಟು ಟೈಮ್ ಕೊಟ್ಟಿದ್ದೀರಿ. ನಾನು ಹಿಂದುಳಿದ ವರ್ಗಕ್ಕೆ ಸೇರಿದವನು. ಈವರೆಗೆ ಮಾತನಾಡಿರಲಿಲ್ಲ. ದಯವಿಟ್ಟು ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ. ಪ್ರೈವೇಟ್ ನಲ್ಲಿಗಳು ಹಾಕಿಕೊಂಡಿದ್ದಾರಲ್ಲ, ಅವರುಗಳಲ್ಲಿ ಅನೇಕರು ದುಡ್ಡನ್ನೆ ಕೊಡುವುದಿಲ್ಲ. ಅದನ್ನೂ ಸಹಾ ಬಿ.ಡಿ.ಓ. ಅವರ ನೋಟೀಸ್‌ಗೆ ತಂದಿದ್ದೇನೆ. ಅವರೂ ಜೊತೆಯಲ್ಲಿ ಬಂದು ನೋಡಿದ್ದಾರೆ. ಇಂಥವರುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಾಗಾದರೆ ಮಾತ್ರ ಊರಿನಲ್ಲಿರತಕ್ಕ ಬಡವರಿಗೆ ಪಬ್ಲಿಕ್ ನಲ್ಲಿಗಳಿಂದ ನೀರು ಸಿಗುವ ಸಾಧ್ಯತೆ ಉಂಟು. ಇದರ ಜೊತೆಗೆ ಏನು ಮಾಡಿಕೊಂಡಿದ್ದಾರೆಂದರೆ, ಅರ್ಧ ಇಂಚು ಪೈಪುಗಳನ್ನು ಹಾಕುವ ಬದಲಿಗೆ 1 ಇಂಚು ಪೈಪುಗಳನ್ನು ಹಾಕಿಕೊಂಡಿದ್ದಾರೆ. ಇದನ್ನೆಲ್ಲಾ ಅಧಿಕಾರಿಗಳಿಗೆ ತೋರಿಸಿದ್ದೇನೆ. ನೀವು ಇದರ ಬಗ್ಗೆ ಗಮನ ಹರಿಸಿ ಎಂದರೆ ಯಾರೂ ಗಮನ ಹರಿಸುತ್ತಿಲ್ಲ. ಜೊತೆಗೆ ಆಹಾರ ಧಾನ್ಯ ವಿತರಣೆ, ಬಗ್ಗೆ ಹೆಚ್ಚು ಗಮನ ಹರಿಸುತ್ತಿಲ್ಲ. ಇದರಲ್ಲಿ ನಿರಂತರವಾಗಿ ಶೋಷಣೆ ನಡೆಯುತ್ತಿದೆ. ಅದರಲ್ಲೂ ಬಡವರಿಗಂತೂ ಏನೂ ಸಿಗುವುದಿಲ್ಲ. ಬಡವರಿಗೆ ಮೊದಲೇ ತೆಗೆದುಕೊಳ್ಳುವುದಕ್ಕೆ ದುಡ್ಡು ಇರುವುದಿಲ್ಲ. ದುಡ್ಡು ಇಲ್ಲದೆ ಇರುವಾಗ ಏನು ಮಾಡುತ್ತಾರೇ? ಎಷ್ಟೋ ಜನ ಬಿಟ್ಟುಬಿಡುತ್ತಾರೆ. ಅದರಿಂದ ಅವರ ಧಾನ್ಯ ಅವರಿಗೆ ಲ್ಯಾಪ್ಸ್ ಆಗುತ್ತದೆ. ಮುಂದಿನ ಸಾರಿ ಮತ್ತೆ ಅವರಿಗೆ ಸಿಗುವುದಿಲ್ಲ. ಇನ್ನೂ ಕೆಲವು ಕಡೆ ಬಡವರು ತಮ್ಮ ಕಾರ್ಡ್‌ಗಳು ಪ್ಲೆಡ್ಜ್ ಮಾಡಿ ಬಿಟ್ಟಿದ್ದಾರೆ. ಅದೆಲ್ಲಾ ನನ್ನ ಗಮನಕ್ಕೆ ಬಂದಿದೆ. ಯಾರು 10–25 ರೂಪಾಯಿ ಕೊಡುತ್ತಾರೋ ಅವನಿಗೆ ಕಾರ್ಡ್ ಕೊಡುತ್ತಾರೆ. ಈ ರೀತಿ ಯಾರಾದರೂ 10 ಕಾರ್ಡ್‌ಗಳನ್ನು ಇಟ್ಟುಕೊಂಡರೆ ಅವರಿಗೆ ಜಾಸ್ತಿ ಧಾನ್ಯ, ಸಕ್ಕರೆ, ಎಣ್ಣೆ ಸಿಗುತ್ತದೆ. ಅದನ್ನು ಅವರು ಸುಖವಾಗಿ ಉಪಯೋಗಿಸಬಹುದು. ಅವರಿಗೆ ಸಾಕಾಗುವಷ್ಟಾಗಿ ಮಿಕ್ಕಿದರೆ ಬೇರೆಯವರಿಗೆ ಮಾರಲೂಬಹುದು. ಈ ಸ್ಥಿತಿಯು ಉಂಟು. ಇದರ ಬಗ್ಗೆ ನಾನು ಏನು ಮಾಡಿದೆ ಎಂದರೆ, ಒಂದು ಸಾರಿ ಮೀಟಿಂಗ್‌ನಲ್ಲಿ ಬಂದಿದ್ದ ಫೇರ್ ಪ್ರೈಸ್ ಶಾಪ್‌ನವರುಗಳಿಗೆ ಈ ರೀತಿ ಕೇಳಿದೆ. ಬಿ.ಡಿ.ಓ.ರವರು ನಾನೂ ಮತ್ತು ಫುಡ್ ಇನ್ಸ್‌ಪೆಕ್ಟರ್‌ರವರು ಜೊತೆಯಲ್ಲಿ ಬರುತ್ತೇವೆ. ನಮ್ಮ ಎದುರಿಗೇ ಜನರುಗಳಿಗೆ ಆಹಾರ ಧಾನ್ಯಗಳನ್ನು ಹಂಚುತ್ತೀರಾ ಎಂದು ಕೇಳಿದೆ. ಅದಕ್ಕೆ ಯಾರೂ ಮಾತನಾಡಲೇ ಇಲ್ಲ. ನನ್ನ ಸ್ನೇಹಿತರಾದ ವಾಟಾಳ್ ನಾಗರಾಜ್‌ರವರೂ ಕೂಡಾ ಅವತ್ತು ಜೊತೆಯಲ್ಲೇ ಇದ್ದರು. ಅವರ ಎದುರಿಗೇ ಫೇರ್‌ಪ್ರೈಸ್ ಶಾಪ್‌ನವರನ್ನು ಕೇಳಿದೆವು, ಯಾರೂ ಮಾತನಾಡಲಿಲ್ಲ. ನಾವು ಎದುರಿಗೆ ಬರುತ್ತೇವೆ. ನೀವು ಧಾನ್ಯಗಳನ್ನು ಹಂಚಿ, ಏನಾದರೂ ಸಾಕಾಗುವುದಿಲ್ಲವೆಂದರೆ ಹೇಳಿ ಇನ್ನೂ ಹೆಚ್ಚಿಗೆ ಕೊಡಿಸುತ್ತೇವೆಂದು ಹೇಳಿದರೂ ಅವರು ಮಾತನಾಡಲಿಲ್ಲ. ಇದರೊಳಗೆ ಆ.ಪಿ.ಎ.ಪಿ.ಸಿ.ಎಂ.ಎಸ್. ನವರೂ ಜೊತೆಯಾಗಿರುತ್ತಾರೆ. ಅವರು ವೇಯಿಂಗ್ ಮೆಷಿನ್‌ಗೆ ಒಂದು ಗುಂಡು ಸೂಜಿಯನ್ನು ಸಿಕ್ಕಿಸಿರುತ್ತಾರಂತೆ. ಇದರಿಂದ ಒಂದೊಂದು ಚೀಲಕ್ಕೆ ಎರಡು ಕೇಜಿ ಕಡಿಮೆ ಬರುತ್ತದೆ.

ಅಧ್ಯಕ್ಷರು :— ಒಂದೊಂದು ಗುಂಡು ಸೂಜಿಗೆ ಎರಡೆರಡು ಕೇಜಿ.ನಾ?

ಶ್ರೀ ಕೆ. ಸಿದ್ದಯ್ಯ :— ಹೌದು ಸ್ವಾಮಿ, ಇದು ನಾನು ಹೇಳುವ ಮಾತಲ್ಲ ಇದನ್ನು ಪರೀಕ್ಷೆ ಮಾಡಬಹುದು. ನನ್ನ ಜೊತೆಗೆ ಬನ್ನಿ ಅದನ್ನು ತೋರಿಸುತ್ತೇನೆ. ನಮ್ಮ ವಾಟಾಳ್ ನಾಗರಾಜ್‌ರವರೂ ಇಲ್ಲಿಯೇ ಇದ್ದಾರೆ. ನಾನು ಇದರ ಬಗ್ಗೆ ಕೇಳಿದಾಗ ಒಬ್ಬರೂ ಮಾತನಾಡಲಿಲ್ಲ. ಒಬ್ಬರು ಹಿಂದುಳಿದ ವರ್ಗದವನಿಗೆ ಸಕ್ಕರೆಯನ್ನು ಕೊಡದೆ ಸೊಸೈಟಿಗೆ ಬಂದವರೆಲ್ಲರಿಗೂ ಕೊಟ್ಟು ಉಳಿದದ್ದು ಹೇಗೆ ಇಟ್ಟಿದ್ದೇನೆ ಎಂದರು ಶೆಟ್ಟರು. ಬೇರೆಯವರಿಗೆ ನೀವು ಏನು ಮಾಡಿದ್ದೀರಿ? ನಿಮ್ಮ ಕಾರ್ಡ್‌ಗಳನ್ನು ಸ್ವಲ್ಪ ಚೆಕ್ ಮಾಡೋಣವೆಂದರೆ ಒಬ್ಬರೂ ಮಾತನಾಡರು. ಇದು ಎಲ್ಲಾ ಕಡೆ ನಡೆಯುತ್ತದೆ. ಗೊತ್ತಿಲ್ಲದೇ ಇರುವ ರೀತಿಯಲ್ಲಿ ಮಾಡುತ್ತಾರೆ. ಏಕೆಂದರೆ, ಅಲ್ಲಿ ನಡೆಸತಕ್ಕಂಥ ಜನಗಳಿಗೆ ಲಾಭ ಬರಬೇಕು. ವ್ಯಾಪಾರ ಮಾಡುತ್ತಾರಲ್ಲ ಸೊಸೈಟಿಯವರು ಮತ್ತು ಅವರ ಜೊತೆ ಸೇರಿಕೊಂಡಿರತಕ್ಕ ಕೆಲವರು. ಇನ್ನೂ ಕೆಲವು ಕಡೆ ದೂರುಗಳು ಬಂದವು ಶಾಸಕರುಗಳೂ ಸೇರಿದ್ದಾರೆಂದು. ಅವರಿಗೆ ಒಂದು ಸ್ವಲ್ಪ ಕೊಟ್ಟರೆ ಅವರು ಈ ವಿಚಾರ ಎತ್ತುವುದಿಲ್ಲ ಅನ್ನುವುದೂ ಉಂಟು. ಇದ ೦ ಇದ್ದರೆ ನಾವು ಯಾಕೆ ಇದನ್ನು ಮಾಡಬಾರದು. ಆದ್ದರಿಂದ ನೀರಿನ ವಿಚಾರ ಆಹಾರ ಧಾನ್ಯಗಳ ವಿಚಾರ ಮತ್ತು ಅವರಿಗೆ ಒದಗಿಸತಕ್ಕ ಕೂಲಿ ವಿಚಾರ, ಕೊನೆಯ ಪಕ್ಷ ಇಷ್ಟಾದರೂ ಕೊಡಬೇಕು. ಸರ್ಕಾರ ಎಷ್ಟು ಕೊಡುತ್ತದೆ ಪರಿಣಾಮಕಾರಿಯಾಗಿ ಅದು ಅವರ ಕೈಗೆ ಸೇರಬೇಕು. ಅವರ ಬಾಯಿಗೆ ಹೋಗಬೇಕು. ಇಷ್ಟಾದರೂ ಮಾಡಿಕೊಟ್ಟರೆ ಆಗುತ್ತದೆ. ಇದರ ಜೊತೆಗೆ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ, ನಮ್ಮ ಕ್ಷೇತ್ರದಲ್ಲಿ ಕೆಲವು ಕಡೆ ಹರಿಜನರು ನಾಗರೀಕ ಹಕ್ಕುಗಳನ್ನು ಚಲಾಯಿಸಿದ್ದಾರೆ ಎಂದು ಹೇಳಿ ಅವರಿಗೆ ಸೋಷಿಯಲ್ ಬಾಯ್ಕಾಟ್ ಆಗಿದೆ. ಬಾಯ್ಕಾಟ್ ಮಾಡತಕ್ಕದ್ದು ಕಾನೂನಿಗೆ ವಿರುದ್ಧವಾದುದು, ಇಂಡಿಯನ್ ಪೋಲೀಸ್ ಆಕ್ಟ್‌ನಲ್ಲಿ ಬ್ರಿಟಿಷರು ಇದ್ದ ಕಾಲದಲ್ಲಿ ಅವರು ಇಲ್ಲಿದ್ದಾಗ ಇದಕ್ಕೆ ಒಂದು ಕಮ್ಯುನಿಟಿ ಫೈನ್ ಹಾಕತಕ್ಕಂಥಹ ಪ್ರಾವಿಷನ್ ಇತ್ತು. ಫೈನ್ ಹಾಕುವ ವ್ಯವಸ್ಥೆ ಇದ್ದರೂ ಎಷ್ಟು ಜನರ ಮೇಲೆ ಹಾಕಿದ್ದಾರೆ. ಇಂತಹ ಒಂದು ಫೈನ್ ಹಾಕಬೇಕು. ನೀವು ಹೀಗೆ ಮಾಡುವುದು ಬಿಟ್ಟು ಬಿಟ್ಟರೆ ಪ್ರತಿ ನಿತ್ಯ ಒಂದೊಂದು ಊರಿನಲ್ಲಿ ತೊಂದರೆ ಕೊಡುತ್ತಾರೆ. ಕೂಲಿ ಮಾಡತಕ್ಕ ಹರಿಜನರು ಇನ್ನೊಬ್ಬರ ಮನೆಯಲ್ಲಿ ಕೂಲಿ ಮಾಡಿ ಜೀವನ ಮಾಡತಕ್ಕದ್ದನ್ನು ಕಟ್ ಮಾಡಿದರೆ, ಆ ಜನಕ್ಕೆ ಬಹಿಷ್ಕಾರ ಹಾಕಿ ಬಿಟ್ಟರೆ ಅವರು ಜೀವನ ಮಾಡುವುದು ಹೇಗೆ? ಸರ್ಕಾರ ಪೋಲೀಸರನ್ನು ಇಟ್ಟು ರಕ್ಷಣೆ ಏನೋ ಕೊಡಬಹುದು. ಅವರ ಊಟಕ್ಕೆ ಏನು? ಅವರಿಗೆ ಜಮೀನು ಇದೆ, ಸರ್ವೇ ಮಾಡಿ. ಸೋಷಿಯೋ—ಎಕನಾಮಿಕ್ ಸರ್ವೆ ಮಾಡಲು ಊರಿನವರಿಗೆ ಬಿಟ್ಟರೆ ಅವರೇ ಸರ್ವೇ ಮಾಡಿಕೊಳ್ಳುತ್ತಾರೆ. ಎಷ್ಟು ಜನರಿಗೆ ಏನು ವರಮಾನ ಇದೆ, ಕುಟುಂಬದ ಸಂಖ್ಯೆ ಇತ್ಯಾದಿ ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರದವರು ಆ ಜನಗಳಿಗೆ ಅನುಕೂಲ ಮಾಡಬೇಕು. ಮುಂದೆ ಒಂದು ಅಮೆಂಡ್‌ಮೆಂಟ್ ಬರುತ್ತದೆ ಲ್ಯಾಂಡ್ ಗ್ರಾಂಟ್ ವಿಚಾರದಲ್ಲಿ ಲ್ಯಾಂಡ್ ಇಲ್ಲದವರಿಗೆ ಸ್ವಲ್ಪ ಜಾಸ್ತಿ ಕೊಡಿ. ಸರ್ಕಾರ ಈ ವಿಚಾರವನ್ನು ತೀವ್ರವಾಗಿ ಗಮನದಲ್ಲಿಟ್ಟುಕೊಂಡರೆ ಆ ಜನರಿಗೆ ಸ್ವಲ್ಪ ಉಪಕಾರ ಆಗುತ್ತದೆ. ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಂಡು, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಇವೊತ್ತು ಶುಕ್ರವಾರ. ಖಾಸಗೀ ಕಾರ್ಯಕಲಾಪಗಳು ನಡೆಯಬೇಕಾಗಿದೆ. ಈಗಾಗಲೇ 12 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಸುಮಾರು 5—6 ಗಂಟೆಗಳ ಕಾಲ ಚರ್ಚೆ ಆಗಿದೆ. ಸಭೆ ಇವೊತ್ತು ಮುಂದುವರಿಯಬೇಕಾಗಿದೆ. ಆದ್ದರಿಂದ ಇನ್ನೂ ಎಷ್ಟು ಹೊತ್ತು ಬೇಕು ಎಂದು ಅಂದಾಜು ಸಿಕ್ಕಿದರೆ ನಾನು ಕಾರ್ಯಕಲಾಪಗಳನ್ನು ನಿಯೋಜಿಸುವುದಕ್ಕೆ ಅವಕಾಶ ಆಗುತ್ತದೆ.

ಶ್ರೀ ಪಿ.ಸಿ. ಸಿದ್ಧನಗೌಡರ್ :— ಈ ಕಡೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :— ಮಾನ್ಯ ಚಂದ್ರೇಗೌಡರು ಈ ಕಡೆಯವರು, ಮಾನ್ಯ ಯಡಿಯೂರಪ್ಪನವರು ಈ ಕಡೆಯವರು, ಮಾನ್ಯ ನಂಜುಂಡಸ್ವಾಮಿಯವರೂ ಈ ಕಡೆಯವರು, ಬನ್ನಿಕೋಡ್‌ರವರೂ ಈ ಕಡೆಯವರು, ಕೌಜಲಗಿಯವರೂ ಈ ಕಡೆ, ವೆಂಕಟೇಶ್‌ರವರೂ ಈ ಕಡೆ. ಇನ್ನು ಯಾವ ಕಡೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ.ಸಿ. ಸಿದ್ಧನಗೌಡರ್ :– ಧಾರವಾಡ ಕಡೆಯವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : ಎಲ್ಲಿ ಬರಗಾಲ ಇದೆ. ಅಲ್ಲಿಗೆ ಅವಕಾಶ ಕೊಡಬೇಕು.

ಶ್ರೀ ಪಿ.ಸಿ.ಸಿದ್ಧನಗೌಡರ್ :– ನಮಗೆ ಎರಡು ಮಿನಿಟ್ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :– ಅವಕಾಶ ಕೊಡಬಾರದು ಎಂಬ ಉದ್ದೇಶ ಇಲ್ಲ, ಸಿದ್ಧನಗೌಡರೇ. ಬರಪೀಡಿತ ಪ್ರದೇಶ ಎಂದು ಆ ಕಡೆ ಈ ಕಡೆ ತಾರತಮ್ಯ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಸಾರ್ವತ್ರಿಕವಾಗಿ ಯಾವ ಜಿಲ್ಲೆಯಲ್ಲಿ ಬರದ ಛಾಯೆ, ಅಂದರೆ ಕರಾಳ ಛಾಯೆ ಜಾಸ್ತಿ ಇದೆ, ಅದಕ್ಕೆ ಹೆಚ್ಚು ಅವಕಾಶ ಕೊಡಬೇಕಾಗಿರತಕ್ಕದ್ದು ಸಾಧುವಾದ ವಿಚಾರ.

ಶ್ರೀ ಎಂ.ಪಿ. ವೆಂಕಟೇಶ್ :– ಎಲ್ಲಾ ವಿಚಾರ ತಮಗೆ ಗೊತ್ತಿದೆ. ತಾವು ಎಷ್ಟು ಅವಕಾಶ ಕೊಡುತ್ತೀರಿ, ಕೊಡಿ.

ಶ್ರೀಮತಿ ಮೋಟಮ್ಮ :– ನಮ್ಮಲ್ಲಿ ರೈನ್ ಡ್ಯಾಮೇಜ್ ವರ್ಕ್ ಇದೆ. ಎಲ್ಲರೂ ಅಭಾವದ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮಲ್ಲಿ ಅತಿವೃಷ್ಟಿ ಮಳೆಯಾಗಿ ಸಿಕ್ಕಾಪಟ್ಟೆ ಬೆಳೆ ನಾಶವಾಗಿ ಹೋಗಿದೆ. ರೋಡ್ಸ್ ಎಲ್ಲಾ ಡ್ಯಾಮೇಜ್ ಆಗಿದೆ. ಇದರ ಜೊತೆಗೆ ಬರ ಕೂಡ ಇದೆ. ನಮ್ಮ ಜಿಲ್ಲೆ ವಿಚಿತ್ರವಾಗಿದೆ. ಆದ್ದರಿಂದ ನಮ್ಮ ಜಿಲ್ಲೆಯ ಬಗ್ಗೆಯೂ ಸ್ವಲ್ಪ ಹೇಳಬೇಕಾಗುತ್ತದೆ.

ಅಧ್ಯಕ್ಷರು :– ಮಂತ್ರಿಗಳನ್ನು ಕೇಳಬೇಕು. ಇನ್ನೂ ನಾಲ್ಕಾರು ಸದಸ್ಯರು ಮಾತನಾಡಬೇಕಾಗಿದೆ.

ಶ್ರೀ ಪಿ.ಸಿ. ಸಿದ್ಧನಗೌಡರ್ :– ಇಂಪಾರ್ಟೆಂಟ್ ಪಾಯಿಂಟ್ಸ್ ಹೇಳುತ್ತೇವೆ. ಡೀಟೇಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಮಿನಿಟ್ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– "ನಾನ್ ಅಫಿಷಿಯಲ್ ರೆಸಲ್ಯೂಷನ್" ಕೂಡ ಇದೆ. ನನಗೆ ಕನಿಷ್ಟ 45 ನಿಮಿಷ ಆದರೂ ಬೇಕು. ನೀವು ಇಷ್ಟೆಲ್ಲಾ ಬಯ್ದಿದ್ದನ್ನು ಸ್ವಲ್ಪವಾದರೂ ಹೇಳಬೇಕಲ್ಲ. ನಿಮ್ಮಿಂದ ಬಯ್ಸಿಕೊಂಡು ಹಾಗೆಯೇ ಕೂಡುವುದಕ್ಕೆ ಆಗುವುದಿಲ್ಲವಲ್ಲ.

ಅಧ್ಯಕ್ಷರು :– ಹಾಗಾದರೆ ಚರ್ಚೆ ಇನ್ನೂ ಒಂದು ಅರ್ಧ ಗಂಟೆ ಮಾಡಿ, ನಾನು ಒಂದು ಗಂಟೆಗೆ ಮಾನ್ಯ ಮಂತ್ರಿಗಳನ್ನು ಉತ್ತರ ಕೊಡುವುದಕ್ಕೆ ಕರೆಯಬಹುದಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ಪ್ರಾರಂಭಿಸಿ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ ಬರಗಾಲವು ಬಹಳ ತೀವ್ರವಾಗಿ ಇದೆ. ಈ ಬಗ್ಗೆ ಮೈಸೂರು ಜಿಲ್ಲಾ ಪರಿಷತ್‌ನವರು 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿ ಸುಮಾರು ಎರಡು ಸಾರಿ ಸಭೆ ಸೇರಿ, ನಿರ್ಣಯ ಮಾಡಿ, ಸರಕಾರಕ್ಕೆ ಕಳುಹಿಸಿದ್ದು ಸರಕಾರದವರು ಅದನ್ನು ತೀವ್ರವಾಗಿ ಗಮನಿಸಿಲ್ಲ ಎಂದು ಕಾಣುತ್ತದೆ. ತೀವ್ರ ಬರಗಾಲಕ್ಕೆ ಒಳಗಾದ ಚಾಮರಾಜ ನಗರ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆಗಳಲ್ಲಿನ ರೈತರು, ಜನರು ಕಂಗಾಲಾಗಿದ್ದಾರೆ. ಈ ವಿಭಾಗಗಳಲ್ಲಿ ಪರಿಸ್ಥಿತಿಯು ತೀವ್ರವಾಗಿ ಇದ್ದರೂ ಕೂಡ ಜಿಲ್ಲಾ ಪರಿಷತ್‌ನವರು ಪ್ರಾಮಾಣಿಕವಾಗಿ 5 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದರೂ ಕೂಡ ಸರಕಾರದವರು ಮಾತ್ರ ತೀವ್ರ ಗಮನವನ್ನು ಹರಿಸಿಲ್ಲ. ನಮ್ಮ ಚಾಮರಾಜ ನಗರದ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದೊಂದು ಶಾಶ್ವತ ಬರಗಾಲಪೀಡಿತ ಪ್ರದೇಶ ಎಂದು ಸರಕಾರದವರು ಒಂದು ತೀರ್ಮಾನಕ್ಕೆ ಬರಬೇಕು. ಇಲ್ಲಿ ವರ್ಷದಲ್ಲಿ 11 ತಿಂಗಳು ಮಳೆ ಇರುವುದಿಲ್ಲ. ಎಲ್ಲಾದರೂ ಸೈಕ್ಲೋನ್ ನಿಂದಾಗಿ ಒಂದೆರೆಡು ಮಳೆ ಬಿದ್ದರೆ ಬಿದ್ದೀತು, ಅದನ್ನು ಬಿಟ್ಟರೆ ಇಲ್ಲಿ ಮಳೆ ಕಾಣುವುದಿಲ್ಲ. ಇಲ್ಲಿರತಕ್ಕಂಥ ಎರಡು ದೊಡ್ಡ ಹೊಳೆಗಳಾದ ಸುವರ್ಣಾವತಿ ಮತ್ತು ಚಿಕ್ಕಹೊಳೆ ಎಂಬ ಎರಡು ಡ್ಯಾಮ್‌ಗಳು ಇವೆ. ಅವುಗಳಲ್ಲಿ ಕೂಡ ವರ್ಷದಲ್ಲಿ 11 ತಿಂಗಳು ನೀರು ಇರುವುದಿಲ್ಲ. ಹೀಗಾಗಿ ಈ ಪ್ರದೇಶದಲ್ಲಿ ಕೂಡ ಶೇಕಡಾ 20ರಷ್ಟು ಬೆಳೆ ಕೂಡ ಆಗುವುದಿಲ್ಲ. ಈ ಪ್ರದೇಶಗಳಲ್ಲಿ ಹೆಚ್ಚಿನ ರೀತಿಯಲ್ಲಿ ಹಿಪ್ಪುನೇರಳೆ ವ್ಯವಸಾಯ ಮಾಡುತ್ತಿರುತ್ತಾರೆ. ಸುಮಾರು 20 ಸಾವಿರ ಎಕರೆ ಪ್ರದೇಶಗಳಲ್ಲಿ ಹಿಪ್ಪು ನೇರಳೆ

ವ್ಯವಸಾಯವನ್ನು ಕೈಗೊಳ್ಳುತ್ತಿದ್ದರೂ ಸಹ ನಮ್ಮ ಚಾಮರಾಜ ನಗರ ಪ್ರದೇಶದಲ್ಲಿ ಶೇಕಡಾ 10ರಷ್ಟು ಬೆಳೆ ಕೂಡ ಕೈಗೆ ಬರುವುದಿಲ್ಲ. ಇಂಥ ಒಂದು ಪರಿಸ್ಥಿತಿಯೂ ಅಲ್ಲಿ ಬರಗಾಲದಿಂದ ಉದ್ಭವವಾಗಿದೆ. ಅಲ್ಲಿ ಸುಮಾರು 1,153 ಕೊಳವೆ ಬಾವಿಗಳು ಇವೆ. ಅವುಗಳಲ್ಲಿ ಕೆಟ್ಟಿರತಕ್ಕಂಥವುಗಳ ಸಂಖ್ಯೆ ಸುಮಾರು 400. ಕೆಟ್ಟು ಹೋದವುಗಳಿಗೆ ಪರ್ಯಾಯವಾಗಿ ಬೇರೆ ಕೊಳವೆ ಬಾವಿಗಳನ್ನು ತೋಡುವ ಕೆಲಸವನ್ನು ಸರಕಾರದವರು ಮಾಡಿಲ್ಲ. ಈ ಉಳಿದಿರತಕ್ಕಂಥ ಕೊಳವೆ ಬಾವಿಗಳಲ್ಲಿನ ನೀರು ಕೂಡ ತುಂಬ ಕೆಳಮಟ್ಟಕ್ಕೆ ಇಳಿದು ಹೋಗಿದೆ. ಕೈಹಿಡಿದು ನೀರು ಎತ್ತ ಬೇಕಾದರೆ 10 ನಿಮಿಷಕ್ಕೆ ಒಮ್ಮೆ ನೀರು ಬರತಕ್ಕಂಥ ಒಂದು ಕಠಿಣ ಪರಿಸ್ಥಿತಿಯು ಅಲ್ಲಿ ಬಂದಿದೆ. ಹೀಗಾಗಿ ಇಡೀ ತಾಲ್ಲೂಕು ಸಮಗ್ರವಾಗಿ ಮಳೆ ಇಲ್ಲದೆ ಬರಗಾಲದ ಕರಾಳಛಾಯೆಗೆ ಒಳಗಾಗಿದೆ. ಅಂತೆಯೇ ಅಲ್ಲಿರತಕ್ಕಂಥ 80 ಕೆರೆಗಳಲ್ಲಿ ಒಂದು ಕೆರೆಯಲ್ಲಿಯೂ ಕೂಡ ಈವರೆಗೆ ನೀರು ಬಂದಿಲ್ಲ. ಒಟ್ಟಿನಲ್ಲಿ ನೀರಿನ ಪರಿಸ್ಥಿತಿ ಅಲ್ಲಿ ಭೀಕರವಾಗಿದೆ.

ಸರಕಾರದವರು ರೈತರುಗಳಿಗೆ ಜಾನುವಾರುಗಳಿಗಾಗಿ ಮೇವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಆ ಒಂದು ವ್ಯವಸ್ಥೆಯಲ್ಲಿನ ಕ್ರಮವನ್ನು ಇಡೀ ರಾಜ್ಯದಲ್ಲಿ ಬದಲಾವಣೆ ಮಾಡಬೇಕು. ಮೇವನ್ನು ಬಾಡಿಗೆ ಕೊಟ್ಟು ಯಾರಾದರೂ ತರುವುದಾದರೆ ನಾವು ಕೊಡುತ್ತೇವೆ ಎಂದು ಹೇಳಿ ತಾವೊಂದು ನಿಗದಿ ಮಾಡಿದ್ದೀರಿ. ಆದರೆ ಬಹಳಷ್ಟು ಜನರು ಬಾಡಿಗೆ ಕೊಟ್ಟು ತರುವುದಕ್ಕೂ ಕೂಡ ನಿರ್ಗತಿಕರಾಗಿದ್ದಾರೆ. ನನ್ನ ಸಲಹೆ ಈ ಕುರಿತು ಏನೆಂದರೆ, ಬಾಡಿಗೆಗೆ ಬದಲಾಗಿ ತಾವೇ ಮೇವನ್ನು ಖರೀದಿ ಮಾಡಿ ಅದನ್ನು ಪ್ರತಿ ಮಂಡಳ ವ್ಯಾಪ್ತಿಯಲ್ಲಿ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನನ್ನ ತಾಲ್ಲೂಕಿನಲ್ಲಿ 70 ಸಾವಿರ ರೂಪಾಯಿಗಳ ಬಾಡಿಗೆ ಹಣವು ಇನ್ನೂ ಉಳಿದಿದೆ. ಹಣವನ್ನು ತೆಗೆದುಕೊಳ್ಳುವುದಕ್ಕೆ ಯಾರೂ ಬರುತ್ತಾ ಇಲ್ಲ ಬಾಡಿಗೆ ಕೊಟ್ಟು ಹುಲ್ಲನ್ನು ಖರೀದಿ ಮಾಡಿಕೊಂಡು ಬರತಕ್ಕಂಥ ಒಂದು ವ್ಯವಸ್ಥೆ ಇಲ್ಲ. ಅದಕ್ಕೋಸ್ಕರವಾಗಿ ಈ ಬಾಡಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಬೇರೆ ರೀತಿಯಲ್ಲಿ ಬದಲಾವಣೆ ಮಾಡಿ ಹುಲ್ಲನ್ನು ಹಂಚತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರ ಕರ್ನಾಟಕ ರಾಜ್ಯದಲ್ಲಿಯೇ ಹಿಂದುಳಿದಿರತಕ್ಕಂಥ ಪ್ರದೇಶ. ಇದು ಗಡಿಪ್ರದೇಶ, ಇಲ್ಲಿ ಮೇವಿನ ಬ್ಯಾಂಕನ್ನು ತೆಗೆಯುವುದರ ಮೂಲಕ ಒಂದು ಬದಲಾವಣೆಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಾಡಿಗೆ ಹಣವು ಅನೇಕ ತಾಲ್ಲೂಕುಗಳಲ್ಲಿ ಹಾಗೆಯೇ ಇದೆ. ಹೀಗೆ ಮೇವನ್ನು ಹಂಚತಕ್ಕಂಥ ಒಂದು ನೀತಿಯನ್ನು ತಾವುಗಳು ಕೈಗೊಳ್ಳಬೇಕು.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ, ಈ ಸದನದಲ್ಲಿ ಈ ವಿಚಾರ ಕುರಿತು ಒಂದಲ್ಲ ಒಂದು ರೀತಿಯಿಂದ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ನಮ್ಮಲ್ಲಿ ಇರುವುದು 25 ವರ್ಷಗಳಷ್ಟು ಹಳೆಯ ಕಾಲದ ಯೋಜನೆ. ನಮ್ಮ ತಾಲ್ಲೂಕಿನಲ್ಲಿ ವಿದ್ಯುತ್‌ನ ತೀವ್ರ ಅಭಾವವನ್ನು ಎದುರಿಸುತ್ತಿದ್ದೇನೆ. ನಾಲ್ಕು ವರ್ಷಗಳಿಂದ 500–600 ನೂರು ನೀರಾವರಿ ಕೊಳವೆಬಾವಿಗಳಿಗೆ ವಿದ್ಯುತ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇವೆ. ಅದರ ಅರ್ಜಿಗಳ ಸಂಖ್ಯೆಯು ಬೆಳೆಯುತ್ತಾ ಇದೆ. ಬ್ಯಾಂಕ್‌ನ ಸಾಲಕ್ಕೆ ಬಡ್ಡಿ ಬೆಳೆಯುತ್ತಾ ಇದೆ. ರೈತರುಗಳು ವಿದ್ಯುಚ್ಛಕ್ತಿ ಇಲ್ಲದೇ ತೊಂದರೆಗೊಳಗಾಗಿದ್ದಾರೆ. ಆ ಪ್ರದೇಶಕ್ಕೆ ನಾಲ್ಕು ವರ್ಷಗಳಿಂದ ನಾಲ್ಕು ಕಂಬಿಗಳನ್ನು ಕೂಡ ಕೊಟ್ಟಿಲ್ಲ ಸಿಮೆಂಟ್ ಕಂಬಿಗಳನ್ನು ಕೊಟ್ಟಿಲ್ಲ, ತಂತಿಗಳನ್ನು ಕೊಟ್ಟಿಲ್ಲ, ಅಥವಾ ಇನ್ನಿತರ ಯಾವುದೇ ಸೌಲಭ್ಯಗಳನ್ನು ಒದಗಿಸಿಲ್ಲ. ವಿದ್ಯುಚ್ಛಕ್ತಿ ಅಭಾವದಿಂದಾಗಿ ತಾಲ್ಲೂಕಿನಲ್ಲಿ ತೀವ್ರ ಪರಿಸ್ಥಿತಿ ತಲೆದೋರಿರುವುದನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಈ ಅಭಾವವನ್ನು ನೀಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸುಮಾರು 600 ಜನರು ಕೊಳವೆಬಾವಿಗಳಿಗೆ ವಿದ್ಯುತ್ ಒದಗಿಸಲು ಏನು ಕಾದು ಕುಳಿತಿದ್ದಾರೆ, ಅವರಿಗೆ ಕೂಡಲೇ ವಿದ್ಯುತ್ತನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರದವರು ಸುಮಾರು 60 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ ಆ ತೀರ್ಮಾನವನ್ನು ಜಾರಿಗೆ ತಂದರೆ ಲಕ್ಷಾಂತರ ಜನ ರೈತರುಗಳಿಗೆ ತುಂಬಾ ಅನುಕೂಲವಾಗುತ್ತದೆ.

12–30 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲೂ ನಮ್ಮ ರಾಜ್ಯದ ಚಾಮರಾಜ ನಗರ ತಾಲ್ಲೂಕಿನಲ್ಲಿ 5 ವರ್ಷದಿಂದ ವಿದ್ಯುಚ್ಛಕ್ತಿ ಸರಬರಾಜನ್ನು ವ್ಯವಸ್ಥಿತವಾಗಿ ಕೆ.ಇ.ಬಿ.ಯವರು ಕಡೆಗಣಿಸಿದ್ದಾರೆ. ಇದನ್ನು ಶಾಶ್ವತ

ಬರಗಾಲ ಪ್ರದೇಶವೆಂದು ಘೋಷಿಸಬೇಕು. ಒಂದು ಸಲ ಸಚಿವರು ಸಂಚಾರ ಹಾಕಿಕೊಂಡು ಮೂರ್ನಾಲ್ಕು ತಾಲ್ಲೂಕುಗಳನ್ನು ಪರಿಶೀಲನೆ ಮಾಡಿ ಕೂಡಲೇ ಏನು ನಡೆಯಬೇಕೋ ಅದನ್ನು ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಶ್ರೀ ಎಂ. ಬ್ಲೇಸಿಯಸ್ ಡೀಸೌಜ ಅವರು ಪೀಠದಲ್ಲಿದ್ದರು)

ಈಗ ಚಾಮರಾಜನಗರ ತಾಲ್ಲೂಕೊಂದರಲ್ಲೇ 15 ಸಾವಿರ ಎಕರೆ ತೆಂಗು ಪ್ರದೇಶದ ಪೈಕಿ 8 ಸಾವಿರ ಎಕರೆ ಕ್ಷೇತ್ರದಲ್ಲಿ ಒಣಗುತ್ತಿದೆ ಇದರ ಜೊತೆ ಕರೆತಲೆಹುಳು ಹಾವಳಿ, ಬೇರೆ ಇದೊಂದು ವಿಚಿತ್ರ ಹುಳು ಇದನ್ನು ಹೋಗಲಾಡಿಸಲು ಇವತ್ತಿನವರೆಗೂ ಪರಿಣಾಮಕಾರಿ ವ್ಯವಸ್ಥೆಯಾಗಿಲ್ಲ.

ಶ್ರೀ ಬಿ.ಎಂ. ಇದಿನಬ್ಬ :— ಅವರು ಹೇಳುವುದು ನಿಜ, ನಮ್ಮ ಕರಾವಳಿಯಲ್ಲಿ ಕೂಡ ಕಪ್ಪು ತಲೆ ಹುಳು ಬಂದು ನಷ್ಟವುಂಟು ಮಾಡುತ್ತಿವೆ.

ಶ್ರೀ ಎಲ್. ಆರ್. ಶಿವರಾಮೇಗೌಡ :— ಇಡೀ ರಾಜ್ಯದಲ್ಲಿ ಎಲ್ಲ ಕಡೆ ಇದು ಬಂದಿದೆ ಈ ಸಂದರ್ಭದಲ್ಲೇ ಎಲೆಕ್ಟ್ರಿಸಿಟಿ ರಿಸ್ಟ್ರಿಕ್ಷನ್ಸ್ ಏನಿದೆ ಅದನ್ನು ಸಡಿಲಗೊಳಿಸಿ ವಿದ್ಯುತ್ ಪೂರೈಕೆ ಮಾಡಿ ಪಂಪ್‌ಸೆಟ್‌ಗಳು ಓಡುವಂತೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ಈ ಹುಳುವನ್ನು ಕಳೆಯುವ ಬಗ್ಗೆ ಸರ್ಕಾರದಲ್ಲೇನೂ ಯೋಜನೆ ಇದ್ದಂತಿಲ್ಲ ಒಂದು ಕಡೆ ಹೇಳುತ್ತಾರೆ ಈ ಹುಳು ತಿನ್ನುವುದಕ್ಕೆ ಇನ್ನೊಂದು ಹುಳು ಬಿಡಬೇಕೆಂದು ಇದರ ಬಗ್ಗೆ ನನಗೆ ನಂಬಿಕೆ ಹುಟ್ಟುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳು ಚಾಮರಾಜ ನಗರ ತಾಲ್ಲೂಕಿಗೆ ಮಾತ್ರವಲ್ಲ ರಾಜ್ಯದೆಲ್ಲ ಕಡೆ ತೆಂಗಿನ ತೋಟಕ್ಕೆ ಈ ಮಾರಿರೋಗ ಬಂದಿದೆ. 30 ವರ್ಷ 40 ವರ್ಷ ಬೆಳೆದ ಮರಗಳು ನಮ್ಮ ಕಣ್ಣೆದುರಿಗೇ ನಾಶವಾಗುವ ಪರಿಸ್ಥಿತಿ ಬಂದಿದೆ ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನಹರಿಸಬೇಕು. ಒಂದು ತೆಂಗುಸಸಿ ಎರಡು ಮೂರು ತಲೆಮಾರು ಬಾಳುತ್ತದೆ. ಆದರೆ, ನಮ್ಮ ಕಣ್ಣೆದುರಿಗೇ ಅವು ಹೋಗುವ ಸ್ಥಿತಿ ಇವತ್ತು ಇದೆ.

ಇನ್ನು ಕೊಳವೆ ಬಾವಿಗಳು. ನಮ್ಮಲ್ಲಿ ಇರುವ 1500ರಲ್ಲಿ 400ರಲ್ಲಿ ನೀರು ಬರುತ್ತಿಲ್ಲ ಅಂದರೆ ಒಂದೇ ತಾಲ್ಲೂಕಿನಲ್ಲಿ ಇಂಥ ಪರಿಸ್ಥಿತಿಯಾದರೆ ಕರ್ನಾಟಕದ ಎಲ್ಲ ತಾಲ್ಲೂಕುಗಳ ಪರಿಸ್ಥಿತಿ ಏನು? ಇವುಗಳಲ್ಲಿ ಕೆಟ್ಟಿರುವುದೆಷ್ಟು ಎಂದರೆ 600 ಬಾವಿಗಳು ಒಂದಕ್ಕೆ ಕಂಬ ಇಲ್ಲ, ಒಂದಕ್ಕೆ ಕೈ ಇಲ್ಲ ಇನ್ನೊಂದಕ್ಕೆ ನೆಟ್ ಇಲ್ಲ ಈ ರೀತಿಯಾಗಿ ಕೆಟ್ಟಿರುವ ಕೊಳವೆ ಬಾವಿಗಳ ರಿಪೇರಿ ಬಗ್ಗೆ ಒಂದು ಚಿಂತನೆ ಆಗಬೇಕು. ಇನ್ನು ಹೊಸ ಕೊಳವೆ ಬಾವಿಗಳ ಬಗ್ಗೆ ಹೇಳುವುದಾದರೆ ಕನಿಷ್ಠ 300 ಕೊಳವೆ ಬಾವಿಗಳನ್ನು ಆದರೂ ಒಂದೊಂದು ತಾಲ್ಲೂಕಿಗೆ ತಾವು ಕೊಡಬೇಕು. ಏಕೆಂದರೆ ಹಿಂದೆ ನಜೀರ್‌ಸಾಬರು ಈ ಕೆಲಸ ಮಾಡಿದ್ದರು. ಅವರನ್ನು ನೀರ್ ಸಾಹೇಬರು ಎಂದೇ ಹೇಳುತ್ತಿದ್ದರು ಅಂದರೆ ಆ ಒಂದು ಅಭಿಮಾನದ ಮೇಲೆ ಆ ರೀತಿ ಹೇಳುತ್ತಿದ್ದರು. ಒಂದು ರೀತಿ ಕೊಳವೆ ಬಾವಿಗಳು ಬಂದದ್ದು ಸಂತೋಷ ಪಡತಕ್ಕಂಥದ್ದೇ. ಈ ರೀತಿ ಕೊಳವೆ ಬಾವಿಗಳು ಮುಂದೆ ಏನಾಗುತ್ತದೆ ಎಂದು ನಾವು ನೋಡೋಣ. ಕೊಳವೆ ಬಾವಿ ಇರುವ ಕಡೆ ನೀರಿನ ಪರಿಸ್ಥಿತಿ ಏನಾಗುತ್ತದೆ ಎಂದು ನಾವು ಯೋಚನೆ ಮಾಡುವುದಕ್ಕಾಗುವುದಿಲ್ಲ. ಆದರೂ ತಕ್ಷಣಕ್ಕೆ ನೀರು ಬೇಕು. ತಮಗೆ ನಾನು ಪ್ರಾಮಾಣಿಕವಾಗಿ ಪ್ರಾರ್ಥನೆ ಮಾಡುತ್ತಿದ್ದೇನೆ, ಪ್ರತಿ ತಾಲ್ಲೂಕಿಗೂ ನೀವು ಏನು ಕೊಡದಿದ್ದರೂ ಚಿಂತೆಯಿಲ್ಲ ನನ್ನ ಪ್ರಕಾರ, ರಸ್ತೆ ಕೊಡಬೇಡಿ, ಕೆರೆಯಲ್ಲಿ ಹೂಳನ್ನು ಎತ್ತುವುದಕ್ಕೆ ಕೊಡಬೇಡಿ, ಕೊನೆಗೆ ಪ್ರತಿ ತಾಲ್ಲೂಕಿಗೂ 300–300 ಕೊಳವೆ ಬಾವಿಗಳನ್ನಾದರೂ ಕೊಟ್ಟರೆ ನಾವು ಧನ್ಯರಾಗುತ್ತೇವೆ ಎನಿಸುತ್ತದೆ ದಯಮಾಡಿ ಈ ಕೆಲಸವನ್ನು ಮಾಡಬೇಕು. ತಾವು ಹೊಸದಾಗಿ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ನಿಮಗೆ ಪ್ರಾಮಾಣಿಕತೆ ಇದೆ. ನಾನು ಸಂತೋಷಪಡುತ್ತೇನೆ. ದಯವಿಟ್ಟು 300 – 300 ಕೊಳವೆ ಬಾವಿಗಳನ್ನಾದರೂ ಕೊಡಿ ಎಂದು ಕೇಳುತ್ತೇನೆ. ನಾವು 300 ಎಂದು ಕೇಳುತ್ತೇವೆ, ಸ್ವಲ್ಪ ಹೆಚ್ಚು ಕಡಿಮೆ ರಾಜಿ ಮಾಡಿಕೊಂಡು ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಆದುದರಿಂದ ನಜೀರ್‌ಸಾಹೇಬರು ಏನು ಒಂದು ಯೋಜನೆಯನ್ನು ಹಾಕಿದರೋ ಅದೇ ಧರ್ಮ ಅವರನ್ನು ಕಾಪಾಡಿತು. ಇರಲಿ, ಅವರನ್ನು ನೆನೆದರೆ...

ಛೇರ್ಮನ್ :— ಇನ್ನು ಐದು ಜನರು ಮಾತನಾಡುವವರು ಇದ್ದಾರೆ. ಮಾನ್ಯ ಸಚಿವರು ಒಂದು ಗಂಟೆಗೆ ಉತ್ತರ ಕೊಡುವವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಇನ್ನು ಎರಡು—ಮೂರು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ. ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ಯಾವ ಒಂದು ಉದ್ದೇಶದಿಂದ ಪ್ರತಿ ಹಳ್ಳಿ ಹಳ್ಳಿಗೂ ಈ ಕೊಳವೆ ಬಾವಿಗಳನ್ನು ಕೊಟ್ಟರೋ ಆ ಉದ್ದೇಶ ಸಫಲವಾಗಬೇಕಾಗಿದೆ. ತಾವು ಅಭಾವಪರಿಸ್ಥಿತಿಯ ಲೆಕ್ಕದಲ್ಲಿ ಬರಗಾಲದ ಹೆಸರಿನಲ್ಲಿ ತೀವ್ರ ತರವಾದ ತೊಂದರೆಯು ಇರತಕ್ಕಂಥ ಯಾವ ತಾಲ್ಲೂಕುಗಳು ಇವೆ. ಆ ತಾಲ್ಲೂಕುಗಳಿಗೆ ಕನಿಷ್ಟ 300 ಕೊಳವೆ ಬಾವಿಗಳನ್ನಾದರೂ ಕೊಡಬೇಕು. ನಮ್ಮ ಮೈಸೂರು ಜಿಲ್ಲೆ ನಿಜವಾಗಿಯೂ ತೀವ್ರ ಬರಗಾಲಕ್ಕೆ ಬಿದ್ದಿದೆ. ಅಂದರೆ ಮೈಸೂರು ಜಿಲ್ಲೆ ಬಿಟ್ಟರೆ ಬೇರೆ ಇಲ್ಲವೇ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಬೇರೆ ಜಿಲ್ಲೆಗಳಲ್ಲೂ ಇದೆ. ನನ್ನ ಸ್ನೇಹಿತರಾದ ಶಿವರಾಮೇಗೌಡರು ಹೇಳಿದ ಪ್ರಕಾರ ನಾಗಮಂಗಲದಲ್ಲಿ ಎಂದೆಂದೂ ಬರಗಾಲವೇ. ಅವರು ಬರಗಾಲವನ್ನು ಕಂಡಂತೆ ಯಾರು ಕಾಣಲಿಲ್ಲ. ನಾಗಮಂಗಲ ತಾಲ್ಲೂಕಿನಲ್ಲಿ ಮೊದಲಿನಿಂದಲೂ ಬರಗಾಲ ಇದೆ. ಅದು ಒಂದು ಒಣಗಿದ ತಾಲ್ಲೂಕು ಎಂದು ಹೇಳುತ್ತಾರೆ. ಆ ತಾಲ್ಲೂಕಿನ ಜನ ಬಹಳ ಮುಂದುವರಿದಿರತಕ್ಕಂಥ ಜನ. ಮಂಗಳೂರು ಮತ್ತು ನಾಗಮಂಗಲದವರು ಎಲ್ಲಿ ಬೇಕಾದರೂ ಬದುಕುತ್ತಾರೆ ಚಂದ್ರಲೋಕದಲ್ಲಿ ಕೆಲಸ ಮಾಡಿ ಎಂದು ಹೇಳಿದರೂ ಅಲ್ಲಿ ಕೆಲಸ ಮಾಡುವುದಕ್ಕೆ ಸಿದ್ಧರಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ನಾನು ಸಂತೋಷಪಡುತ್ತೇನೆ. ನಮ್ಮ ಜನ ಅದರಲ್ಲೂ ಬಹಳ ಕೆಚ್ಚಿನ ಜನ. ಅದರ ಬಗ್ಗೆ ನನಗೆ ಎರಡನೇ ಅಭಿಪ್ರಾಯವಿಲ್ಲ. ಕೊಡಗಿನ ಜನ ಅಷ್ಟೇ ಇದಕ್ಕೆ ನಾನು ಸಂತೋಷಪಡುತ್ತೇನೆ. ತಾವು ಮಂಗಳೂರಿನವರು. ನನ್ನ ಮಾತಿನಲ್ಲಿ ಸಹಮತ ಇದೆ ಎಂದು ಒಪ್ಪುತ್ತೀರಿ ಎಂದು ನನಗನ್ನಿಸುತ್ತದೆ ಬಹಳ ಜನ ಮಂಗಳೂರಿನವರು ಬಾಂಬೆಯಲ್ಲಿದ್ದಾರೆ. ಅವರು ಎಲ್ಲಿ ಬೇಕಾದರೂ ಹೋಗತಕ್ಕಂಥ ಜನ. ಇದು ಇಡೀ ಕರ್ನಾಟಕದಲ್ಲಿಯ ಎಲ್ಲಾ ಜನರಿಗೂ ಬರಬೇಕು ಎಂದು ನಾನು ಆಸೆಪಡುತ್ತೇನೆ. ಆದರೆ ಆ ಪ್ರಶ್ನೆ ಬೇರೆ. ಮೈಸೂರು ಜಿಲ್ಲೆ ಸಮಗ್ರವಾಗಿ ಅವರು ಕೇಳಿರುವುದು ಏನು? ಐದು ಕೋಟಿ ರೂಪಾಯಿಯನ್ನು ಜಿಲ್ಲಾಪರಿಷತ್‌ನವರು ಕೇಳಿದ್ದಾರೆ. ಕೊಟ್ಟಿರತಕ್ಕಂಥ ಐವತ್ತು ಲಕ್ಷ ಸಾಲುವುದಿಲ್ಲ ಎಂದು ಅನಿಸುತ್ತದೆ. ಆದರೆ ಇದರಲ್ಲಿ ಕೇವಲ ಐದು ಲಕ್ಷ, ಮೂರು ಲಕ್ಷ ಅದು ಏನೋ ಒಂದು ಮಂಗಳಾರತಿ ಕಾಸು ಕೊಟ್ಟಹಾಗೆ ಕೊಡುತ್ತಿದ್ದೀರಿ, ಇದು ಮಂಗಳಾರತಿ ಕಾಸು ಕೊಟ್ಟಹಾಗೆ ಕೊಟ್ಟರೆ ಬರಗಾಲ ಪರಿಹಾರ ಆಗುವುದಿಲ್ಲ. ಆದುದರಿಂದ ದಯಮಾಡಿ ತಾವು ಪ್ರಮುಖವಾಗಿ ತಕ್ಷಣ ಇನ್ನು ಐದು ಕೋಟಿ ರೂಪಾಯಿಯನ್ನು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಿ ಎಂದು ಹೇಳುತ್ತೇನೆ. ನಾನು ಮೈಸೂರು ವಿಭಾಗ ಎಂದು ಹೇಳುವುದಿಲ್ಲ. ಮೈಸೂರು ಜಿಲ್ಲೆಗೆ ದಯಮಾಡಿ ತಾವು ಐದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಬೇಕು ಎಂದು ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಎಂ. ಮಹದೇವ್ :— ಎರಡು ಪಾರ್ಲಿಮೆಂಟರಿ ಕ್ಷೇತ್ರಗಳು ಇವೆ. ಒಂದೊಂದು ಪಾರ್ಲಿಮೆಂಟರಿ ಕ್ಷೇತ್ರಕ್ಕೂ ಐದೈದು ಕೋಟಿ ರೂಪಾಯಿ ಎಂದು ಹೇಳಿದರೆ ಹತ್ತು ಕೋಟಿ ರೂಪಾಯಿ ಆದರೂ ಬಿಡುಗಡೆ ಆಗಬೇಕು. ಆಗ ಮಾತ್ರ ಪರಿಹಾರ ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಈಗ ಖರ್ಗೆಯವರು ಹೊಸದಾಗಿ ಕಂದಾಯ ಸಚಿವರಾಗಿದ್ದಾರೆ. ಹಿಂದೆಯೂ ಕಂದಾಯ ಸಚಿವರಾಗಿದ್ದರು. ಅವರು ಬಹಳ ಧಾರಾಳ. ಅವರು ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಅವರು ಎಂದೂ ಪಿತೂರಿಗಿತೂರಿ ಮಾಡುವವರಲ್ಲ. ರಾಜಕೀಯ ಮಾಡುವವರಲ್ಲ. ನಿಮ್ಮ ಮಂತ್ರಿ ಮಂಡಲದಲ್ಲಿ ಖರ್ಗೆಯವರು ಮತ್ತು ಧರ್ಮಸಿಂಗ್‌ರವರು ಬಂದಾಗ ಇವರು ಪರವಾಗಿಲ್ಲ, ಇವರು ಯಾರು ಗಲಾಟೆ ಮಾಡುವವರಲ್ಲ, ಪಿತೂರಿ ಮಾಡುವವರಲ್ಲ ಎಂದು ಸ್ವಲ್ಪ ನನಗೆ ಅನಿಸಿತು. ಸಂತೋಷ, ಆದುದರಿಂದ ನಾವು ಕೇಳುವುದು ಸಾಮಾನ್ಯ ಬೇಡಿಕೆ. ನಮ್ಮ ಮಹದೇವ್, ನಮ್ಮ ಸಿದ್ಧಯ್ಯನವರು ಸಂತೇಮರಹಳ್ಳಿ...

ಶ್ರೀ ಟಿ.ಎಂ. ಮಂಜುನಾಥ್ :— ಇವರುಗಳು ಏನೂ ಪಿತೂರಿ ಮಾಡುವವರಲ್ಲ ಎಂದು ಹೇಳುತ್ತೀರಿ. ಇನ್ನು ಇದ್ದ ಮಂತ್ರಿಗಳೆಲ್ಲಾ ಪಿತೂರಿ ಮಾಡುತ್ತಾರೆಂತಲೊ ನಿಮ್ಮ ಮಾತಿನ ಅರ್ಥ?

ಶ್ರೀ ವಾಟಾಳ್ ನಾಗರಾಜ್ :— ಪಿತೂರಿ ವರ್ಷ ವರ್ಷದಲ್ಲಿ ನಡೆಯುತ್ತಿದೆ. ಅದನ್ನು ಇಲ್ಲ ಎಂದು ಹೇಳುವುದಿಲ್ಲ.

ಛೇರ್ಮನ್ : ಈಗ ಬರಗಾಲದ ವಿಷಯ ಮಾತನಾಡುವಾಗ ಪಿತೂರಿ ವಿಷಯ ಏತಕ್ಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಬಿ.ಎಂ.ಇದಿನಬ್ಬ :— ಈ ಪಿತೂರಿ ಎಂಬ ಶಬ್ಧದ ಅರ್ಥ ಹೇಳಿದರೆ ಒಳ್ಳೆಯದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಈಗ ಅದರ ಅರ್ಥವನ್ನು ಹೇಳುವುದಕ್ಕೆ ನನಗೆ ಟೈಮನ್ನು ಕೊಟ್ಟರೆ ಹೇಳುತ್ತೇನೆ. ಏನೇನು ಪಿತೂರಿ ನಡೆಯಿತು, ಹೇಗೆ ಹೇಗೆ ಆಯಿತು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರ ಹೇಗೆ ಆಯಿತು, ಮುಂದಿನ ಸರ್ಕಾರದ ಬಗ್ಗೆ ಏನು ಪಿತೂರಿ ನಡೆಯುತ್ತಿದೆ ಎನ್ನುವುದನ್ನು ಹೇಳುತ್ತೇನೆ. ಈಗಾಗಲೇ ಜಾತಿವಾದಿ ಸಹಿ ಶುರುವಾಗಿದೆ. ಇವೆಲ್ಲಾ ಪಿತೂರಿ ತಾನೆ? ಇವೆಲ್ಲಾ ಪಿತೂರಿಯ ಭಾಗಗಳು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಬಾಯಿದ್ದವರು ಬರಗಾಲದಲ್ಲಿ ಗೆದ್ದರು ಅಂತ ಹೇಳಿದರು. ಬಾಯಿ ಇದೆ ಅಷ್ಟೆ ಇನ್ನು ಬರಗಾಲಕ್ಕೆ ಏನೂ ಆಗಿಲ್ಲ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :— ನಮ್ಮನ್ನು ನಿಮ್ಮನ್ನು ನೋಡಿದರೆ ಬರಗಾಲ ಅನ್ನಿಸುವುದಿಲ್ಲ. ಮಲ್ಲಾರಿಗೌಡ ಪಾಟೀಲರು....

ಶ್ರೀ ಎಂ. ಪಿ. ವೆಂಕಟೇಶ್ :— ನಮ್ಮ ಮೈಸೂರು ಜಿಲ್ಲೆಯಲ್ಲಿ ಬೆಳೆ ಎಲ್ಲಾ ಹಾಳಾಗಿದೆ.

ಶ್ರೀ ವಾಟಾಳ್ ನಾಗರಾಜ್ :— ನನ್ನನ್ನು ನೋಡಿದರೆ ಬರಗಾಲ ಕಂಡಹಾಗೆ ಕಾಣುವುದಿಲ್ಲ ಅಂತ ಹೇಳುತ್ತಾರೆ. ನಾನು ಯಾವಾಗಲೂ ಹಾಗೆ ಇರುತ್ತೇನೆ. ಬರಗಾಲ ಇದ್ದರೂ ಚೆನ್ನಾಗಿರುತ್ತೇನೆ, ಬರಗಾಲ ಇಲ್ಲದಿದ್ದರೂ ಚೆನ್ನಾಗಿರುತ್ತೇನೆ. ನಾನು ಯಾವುದಕ್ಕೂ ಚಿಂತೆ ಪಡುವುದಕ್ಕೆ ಹೋಗುವುದಿಲ್ಲ. ನನ್ನ ಸ್ವರೂಪವೆ ಹಾಗೆ. ಅದಕ್ಕೆ ತಾವು ಸಂತೊಷ ಪಡಬೇಕು. ಮೈಸೂರು ಜಿಲ್ಲೆಯ ಬರಗಾಲದ ಬಗ್ಗೆ ಸರ್ಕಾರದವರು ತೀವ್ರ ಗಮನಹರಿಸಬೇಕು. ನಾನು 5 ಕೋಟಿ ಕೇಳುತ್ತೇನೆ. ನಿಮ್ಮ ಪಕ್ಷದವರು 5 ಕೋಟಿಯನ್ನು ಕೇಳುತ್ತಾರೆ. ಒಟ್ಟು 10 ಕೋಟಿಯನ್ನು ತಾವು ಬಿಡುಗಡೆ ಮಾಡಬೇಕು. ತಾವು ಉತ್ತರ ಕೊಡುವಾಗ ಈ ವಿಚಾರ ಹೇಳಿದರೆ ನನಗೆ ಸಂತೋಷವಾಗುತ್ತದೆ. ತಾವು ಕೊಡುತ್ತೀರೆಂದು ನಾನು ಅಂದುಕೊಂಡಿದ್ದೇನೆ. ನಿಮ್ಮ ಬಗ್ಗೆ ನಾನು ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ, ಗೌರವವನ್ನು ಇಟ್ಟುಕೊಂಡಿದ್ದೇನೆ. ನಿಮ್ಮ ನಮ್ಮ ಪ್ರೀತಿಗೆ ನಿಮ್ಮ ನಮ್ಮ ಗೌರವಕ್ಕೆ, ನಿಮ್ಮ ನಮ್ಮ ಪ್ರೇಮಕ್ಕೆ ನಮ್ಮ ಜಿಲ್ಲೆಗೆ ದುಡ್ಡು ಕೊಡುತ್ತೇವೆಂದು ಹೇಳಿದರೆ ನನಗೆ ಬಹಳ ಸಂತೋಷವಾಗುತ್ತದೆ. ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) :— ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರುಗಳು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲ. ಬೀದರ್ ಗುಲ್ಬರ್ಗದಲ್ಲಿ ಆದಂತಹ ಮಳೆಯಿಂದ ಅತಿವೃಷ್ಟಿಯಿಂದ ಸಾಕಷ್ಟು ಜನರಿಗೆ ತೊಂದರೆಯಾಗಿರುವ ಪರಿಸ್ಥಿತಿಯನ್ನು ಸರ್ಕಾರದವರು ಕಣ್ಣಾರೆ ಕಂಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಮಂತ್ರಿಯಾಗಿರುವುದು ನಮಗೆ ಸಂತೋಷವನ್ನು ಉಂಟು ಮಾಡಿದ ಸಂಗತಿಯಾಗಿದೆ. ಏಕೆಂದರೆ ಬೀದರ್, ಗುಲ್ಬರ್ಗ, ಬಳ್ಳಾರಿ, ರಾಯಚೂರು ಈ ನಾಲ್ಕು ಭಾಗಗಳಲ್ಲಿ ಹಿಂದೆಂದೂ ಕಾಣದಂತಹ ಅತಿ ಹೆಚ್ಚಿನ ಅತಿವೃಷ್ಟಿಯಿಂದಾಗಿ ಮನೆಗಳಿಗೆ ಹೆಚ್ಚಿಗೆ ಹಾನಿಯಾಗಿ, ದನಕರುಗಳಿಗೆ ಸಾಕಷ್ಟು ಮೇವು ಸಿಗದೆ, ಮನೆಗಳು ಕುಸಿದು ಬಿದ್ದಿರುವಂತಹ ಹಲವಾರು ಪ್ರಸಂಗಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಮೊನ್ನೆ ಆದಂತಹ ಬೀಕರ ಮಳೆಯಿಂದಾಗಿ ಅಲ್ಲಿ ಅಪಾರವಾದ ಹಾನಿಯಾಗಿದೆ. ಸರ್ಕಾರದ ಮಂತ್ರಿಗಳು ಸಮೀಕ್ಷೆ ಮಾಡುವ ಪದ್ಧತಿಯನ್ನು ಟೀಕೆ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಪಿ.ಡಬ್ಲ್ಯೂ.ಡಿ ಇಲಾಖೆಯ ಮಂತ್ರಿಯಾಗಿದ್ದ ಪುಟ್ಟಸ್ವಾಮಿಗೌಡರು ನಮ್ಮ ಭಾಗಕ್ಕೆ ಹೆಲಿ ಕ್ಯಾಪ್ಟರ್‌ನಲ್ಲಿ ಬಂದು ಸಮೀಕ್ಷೆ ಮಾಡಿದ್ದಾರೆ. ನಾನು ಹೇಳತಕ್ಕದ್ದು ಏನೆಂದರೆ ಸರ್ಕಾರಕ್ಕೆ ಈ ಭಾಗದ ಜನರ ಬಗ್ಗೆ ಕಳಕಳಿ ಇಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಅವರು ಸಮೀಕ್ಷೆ ಕಾರ್ಯವನ್ನು ಸಾಧಾರಣವಾಗಿ ತಮ್ಮ ಕಾರಿನ ಮುಖಾಂತರ ರಸ್ತೆಗಳ ಬದಿಯಲ್ಲಿ ಹೋಗಿ ಜನರ ಸಮಸ್ಯೆಯನ್ನು ಕೇಳಿ

ಯಾವ್ಯಾವ ಭಾಗದಲ್ಲಿ ಮಳೆಯಿಂದ ಹಾನಿಯಾಗಿದೆ ಎನ್ನುವುದರ ಬಗ್ಗೆ ವೀಕ್ಷಣೆ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿಕೊಡಬೇಕಾಗಿತ್ತು. ಆದರೆ, ಮಾನ್ಯ ಮಂತ್ರಿಗಳು ನೇರವಾಗಿ ಹೆಲಿಕ್ಯಾಪ್ಟರ್‌ಗಳ ಮುಖಾಂತರ ಬೀದರ್, ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕೈಗೊಂಡ ಕ್ರಮದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಯಾವಾಗಲೂ ನಮ್ಮ ಕರ್ನಾಟಕದಲ್ಲಿ ಕೇಂದ್ರದವರು ಮಲತಾಯಿಧೋರಣೆಯನ್ನು ತಾಳುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಮಹಾರಾಷ್ಟ್ರಕ್ಕೆ, ಆಂಧ್ರಪ್ರದೇಶಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತಾರೋ ಅದಕ್ಕಿಂತಲೂ ಬಹಳ ಕಡಿಮೆ ಹಣವನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಿರುವುದನ್ನು ನಾವು ಹಿಂದಿನಿಂದಲೂ ನೋಡಿಕೊಂಡು ಬಂದಿದ್ದೇವೆ. ಸರ್ಕಾರದ ಅಂಕಿ ಸಂಖ್ಯೆಯ ಪ್ರಕಾರ ನಮಗೆ ಕಡಿಮೆ ಹಣವನ್ನು ಕೊಡುತ್ತಿದ್ದಾರೆ ಕೇಂದ್ರ ಸರ್ಕಾರದವರು. ಈ ವರ್ಷ ರಾಜ್ಯಸರ್ಕಾರಕ್ಕೆ 27 ಕೋಟಿ ರೂಪಾಯಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಈ 27 ಕೋಟಿ ರೂಪಾಯಿ ಯಾವುದಕ್ಕೂ ಕೂಡ ಸಾಲದು. ನಮ್ಮ ರಾಜ್ಯದಲ್ಲಿ ಉತ್ತರ ಭಾಗದಲ್ಲಿ ಹೆಚ್ಚಿನ ಮಳೆಯಿಂದಾಗಿ ಜನರಿಗೆ ತೊಂದರೆಯಾದರೆ, ಹಳೆಯ ಮೈಸೂರು ಭಾಗದಲ್ಲಿ ಮೈಸೂರು, ಮಂಡ್ಯ, ಹಾಸನ, ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಿನ ಬರಗಾಲವನ್ನು ಎದುರಿಸಬೇಕಾಗಿದೆ. ಆದ್ದರಿಂದ, 27 ಕೋಟಿ ರೂಪಾಯಿ ಹಣ ಸಾಲದು ಎಂದು ಹೇಳುತ್ತೇನೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬರಗಾಲ ಕಾಮಗಾರಿ ಸಲುವಾಗಿ, ಅತೀ ಹೆಚ್ಚಿನ ಬೆಳೆಯನ್ನು ಕಳೆದುಕೊಂಡಿರತಕ್ಕಂಥ ಜನರ ಸಲುವಾಗಿ ಹೆಚ್ಚಿನ ಹಣವನ್ನು ಕೇಂದ್ರದಿಂದ ಬಿಡುಗಡೆ ಮಾಡಲಿಕ್ಕೆ ತಾವು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ಮಹಾರಾಷ್ಟ್ರದವರು, ತಮಿಳುನಾಡಿನವರು, ಹೆಚ್ಚಿನ ಹಣವನ್ನು ತಮ್ಮ ರಾಜ್ಯಕ್ಕೆ ತೆಗೆದುಕೊಂಡು ಹೋಗಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೋ ಅದೇ ಪ್ರಕಾರ ತಾವು ಸಹಾ ರಾಜಕೀಯ ಒತ್ತಡವನ್ನು ಹೇರಿ, ಹೆಚ್ಚಿನ ಹಣವನ್ನು ತಂದು, ಜನರಿಗೆ ಒಂದು ಹೆಚ್ಚಿನ ಕಾಮಗಾರಿ ಮಾಡಿಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಮ್ಮಲ್ಲಿ ಮೂಲಭೂತವಾಗಿ ಬೆಳೆಯತಕ್ಕಂಥ ಬೆಳೆಗಳು ಅಂದರೆ ಎಳ್ಳು, ಹೆಸರು, ಉದ್ದು, ಶೇಂಗಾ ಎಲ್ಲಾ ಬೆಳೆಗಳು ಮಳೆಯಲ್ಲಿ ಕೊಚ್ಚಿಹೋಗಿವೆ. ಸರ್ಕಾರದ ಅಂಕಿಸಂಖ್ಯೆಗಳ ಪ್ರಕಾರ ನಾನು ಹೇಳಬೇಕಾದರೆ, ಸಾಮಾನ್ಯ ಬರಗಾಲ ಕಾಮಗಾರಿಯ ಸಲುವಾಗಿ, 17 ಕೋಟಿ ರೂಪಾಯಿಗಳನ್ನು ಇಂದಿನವರೆಗೆ ಬಿಡುಗಡೆ ಮಾಡಿದ್ದಾರೆ. ಇದು ಸಾಲದು ಈ ಸಂದರ್ಭದಲ್ಲಿ ಎರಡು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಒಟ್ಟು ಸರ್ಕಾರದ ಸಮೀಕ್ಷೆ ಪ್ರಕಾರವಾಗಿ 45 ಕೋಟಿ ರೂಪಾಯಿಯಷ್ಟು ಹಾಳಾಗಿದೆ. ಅದರಲ್ಲಿ 27 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. 20 ಸಾವಿರ ಮನೆಗಳು ಹಾಳಾಗಿವೆ. ಭೀಮಾ, ಕಾರಂಜ, ಬೆಣ್ಣೆತೊರೆ, ಅಪ್ಪರ್‌ಮುಲ್ಲಾಮರಿ, ಅಲ್ಲೆಲ್ಲಾ ಸಾವಿರಾರು ಎಕರೆಯಷ್ಟು ಭೂಮಿ ನಷ್ಟವಾಗಿದೆ. ಸುಮಾರು 40 ಕೆರೆಗಳು ಹಾಳಾಗಿಹೋಗಿವೆ. ಅತಿಹೆಚ್ಚಿನ ಮಳೆಯಿಂದಾಗಿ 150 ಸರ್ಕಾರಿ ಕಟ್ಟಡಗಳು ಹಾಳಾಗಿವೆ. ಈ ರೀತಿಯಾಗಿ ಹಾನಿಯಾದಂಥಾದ್ದು ನಾವು ಕಣ್ಣಾರೆ ಕಂಡಿದ್ದೇವೆ. ಸುಮಾರು 200 ಸಣ್ಣ ಕೆರೆಗಳು ಹಾಳಾಗಿವೆ. ನಾವು ಹಿಂದೆಂದೂ ಕಾಣದಷ್ಟು ಅತಿವೃಷ್ಟಿಯನ್ನು ಕಾಣುತ್ತಿದ್ದೇವೆ. ಆದ್ದರಿಂದ, ಅತೀ ಹೆಚ್ಚಿನ ಅಧಿಕವಾದಂಥ ಹಣವನ್ನು ಬೀದರ್, ಗುಲ್ಬರ್ಗ ಜಿಲ್ಲೆಗೆ ಕೊಡಲಿಕ್ಕೆ ಹೆಚ್ಚು ಹಣಕಾಸು ನೆರವನ್ನು ಕೊಡಬೇಕು. ಎಷ್ಟೆಷ್ಟು ಜನರು ರೈತರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದಾರೆ. ಆ ರೈತರಿಗೆ ಅನುಕೂಲ ಮಾಡಿಕೊಡಬೇಕು. ಇನ್ನು ಬೀದರ್ ಜಿಲ್ಲೆಯಲ್ಲಿ ಬಂಪಳ್ಳಿ ಎಂಬ ಗ್ರಾಮಕ್ಕೆ ಹೆಲಿಕ್ಯಾಪ್ಟರ್‌ನಿಂದ ಆಹಾರ ಕೊಡಬೇಕಾದಂಥ ಪ್ರಸಂಗ ಬಂದಿತ್ತು. ಹಿಂದೆಂದೂ ಕಾಣದಷ್ಟು ಮಳೆ ಬಂದಿದ್ದರಿಂದ ಈ ಪರಿಸ್ಥಿತಿ ಆಯಿತು. ಆ ಸಂದರ್ಭದಲ್ಲಿ ನೀರು, ಆಹಾರ, ಬೇಕಾದಂಥ ಊಟ, ತಿಂಡಿ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಇನ್ನು ಭೀಮಾ ನದಿ ದಡದ ಜಮೀನು ಹಾಳಾಗಿರುವುದರಿಂದ, ಅಲ್ಲಿ ಕಬ್ಬಿನ ಬೆಳೆ ಶೇಂಗಾ ಬೆಳೆ ಇಟ್ಟಿದ್ದೆಲ್ಲಾ ಹಾಳಾಗಿಹೋಗಿದೆ. ಆರ್ಥಿಕ ಬೆಳೆಗಳೆಲ್ಲಾ ಹಾಳಾಗಿಹೋಗಿದೆ. ಜನರು ಬಹಳಷ್ಟು ಕಷ್ಟದಲ್ಲಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿಂದೆ ಕೂಡ ಕಂದಾಯ ಮಂತ್ರಿಗಳಾಗಿದ್ದವರು. ಅವರು ನಮ್ಮ ಭಾಗಕ್ಕೆ ಸಾಕಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ನಮ್ಮ ಭಾಗದಲ್ಲಿ ಒಬ್ಬ ಹೆಸರು ಪಡೆದಂಥ ಮಂತ್ರಿಗಳಾಗಿದ್ದಾರೆ. ಆದ್ದರಿಂದ, ಹೈದರಾಬಾದ್ ಕರ್ನಾಟಕದ ಜನತೆಯ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗ ಬೀದರ್, ಗುಲ್ಬರ್ಗ ಜಿಲ್ಲೆಗಳಲ್ಲಿ ಮಳೆಯಿಂದ ಹಾನಿಯಾಗಿರತಕ್ಕದ್ದನ್ನು ಸರ್ವೆ, ಸಮೀಕ್ಷೆ ಮಾಡಿಸಿ ಅವರಿಗೆಲ್ಲಾ ಹಣಕಾಸಿನ

ನೆರವನ್ನು ಕೊಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ, ತಾವು ಹೆಚ್ಚಿನ ಬಡ್ಜೆಟ್ ಮಂಜೂರಾತಿ ಕೊಡುತ್ತೀರಿ, ಅದರ ಬಗ್ಗೆ ಜಿಲ್ಲಾಧಿಕಾರಿ ಮತ್ತು ನಮ್ಮ ಜಿಲ್ಲಾಮಂತ್ರಿಗಳ ನೇತೃತ್ವದಲ್ಲಿ ಎಲ್ಲಾ ಶಾಸನಸಭಾ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ನೇಮಕ ಮಾಡಬೇಕು.. ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಬೇಕೆಂದು ಒಂದು ನಿಗದಿಯಾದಂಥ ಕಾರ್ಯಕ್ರಮವನ್ನು ರೂಪಿಸಿಕೊಂಡು ಎಲ್ಲಾ ತಾಲ್ಲೂಕುಗಳಿಗೂ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ನಾಗಮಾರಪಲ್ಲಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮಲ್ಲಿ ಅಧಿಕ ಸಂಖ್ಯೆಯ ಜನರು ಇದ್ದೇವೆ. ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಬೆಳೆ ಹಾನಿಯಾಗಿದೆ. ರಸ್ತೆಗಳೂ ಕೂಡ ಪೂರ್ಣವಾಗಿ ಕೆಟ್ಟುಹೋಗಿವೆ. ಆ ರಸ್ತೆಗಳಲ್ಲಿ ಬಸ್ಸುಗಳು ಓಡಾಡಲಿಕ್ಕೆ ಆಗುವುದಿಲ್ಲ. ಜನರೂ ಸಹ ಓಡಾಡಲಿಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ವಿದ್ಯುಚ್ಛಕ್ತಿ ಕೂಡ ಪೂರ್ಣ ಹಾಳಾಗಿದೆ ನಮ್ಮಲ್ಲಿ ಬಹಳ ಮುಖ್ಯವಾಗಿ ವಿದ್ಯುಚ್ಛಕ್ತಿ ತೊಂದರೆಯನ್ನು ಎದುರಿಸುತ್ತಿದ್ದೇವೆ. ಆದ್ದರಿಂದ, ತಾವು ಇದರ ಬಗ್ಗೆ ಎಲ್ಲಾ ಗಮನದಲ್ಲಿಟ್ಟುಕೊಂಡು, ನಮ್ಮಲ್ಲಿಗೆ ಹೆಚ್ಚಿನ ಅನುಕೂಲ ಕೊಟ್ಟು ರಸ್ತೆ ರಿಪೇರಿ ಮಾಡಿಸಿ ಬಸ್ಸುಗಳು ಸರಿಯಾಗಿ ಓಡಾಡಲಿಕ್ಕೆ ಒಳ್ಳೆಯ ಸೌಕರ್ಯ ಕಲ್ಪಿಸುವಂತಾಗಬೇಕು. ನಮ್ಮ ಬೀದರ್ ಜಿಲ್ಲೆಯಲ್ಲಿ ಬರಪರಿಹಾರ ಕಾಮಗಾರಿ ಕೆಲಸವನ್ನು ತ್ವರಿತಗತಿಯಲ್ಲಿ ತೆಗೆದುಕೊಂಡು ಹೆಚ್ಚಿನ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಎರಡು ಮಾತುಗಳನ್ನು ಹೇಳಲು ಅವಕಾಶ ಕಲ್ಪಿಸಿಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಖರ್ಗೆಯವರು ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಮಾಡಿದ್ದಾರೆ. ನಾವು ಅನೇಕ ಸಂದರ್ಭಗಳಲ್ಲಿ ಸಭೆ ಸೇರಿದಾಗ ಈ ಸದನದಲ್ಲಿ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವಾಗ ಅನೇಕ ವಿಚಾರಗಳನ್ನು ನಾವು ಹೇಳುತ್ತೇವೆ. ಮಾನ್ಯ ವಿರೋಧಪಕ್ಷದ ಉಪ ನಾಯಕರಾದ, ಮಾಜಿ ಕಂದಾಯ ಸಚಿವರಾದ ಅವರು ಹೇಳಿದ್ದಂಥ ಅನೇಕ ಮಾತುಗಳನ್ನು ಈಗ ಅವರ ನೆನಪಿಗೆ ನಾನು ತಂದುಕೊಡಬೇಕಾಗಿದೆ. ನಮ್ಮ ದೇಶದಲ್ಲಿ ಇದು ಸರ್ವೇಸಾಮಾನ್ಯ. ನಾವು ಹೇಳಿದಂಥ ಮಾತುಗಳನ್ನೇ ನಾವು ಮರೆತುಬಿಡುವುದು ಸ್ವಾಭಾವಿಕ ಮತ್ತು ಆ ಮಾತುಗಳಿಗೆ ವ್ಯತಿರಿಕ್ತವಾದ ರೀತಿಯಲ್ಲಿ ಕಾರ್ಯಾಚರಣೆಯನ್ನು ಮಾಡುವುದೂ ಕೂಡ ಅಷ್ಟೇ ಸ್ವಾಭಾವಿಕ. ನಾನು ಈ ಮಾತನ್ನು ಹೇಳಬೇಕಾದರೆ ತುಂಬ ನೋವಿನಿಂದ ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರು ಕಂದಾಯ ಮಂತ್ರಿಗಳಾದ ಮೇಲೆ ಒಂದು ಹೇಳಿಕೆಯನ್ನು ಕೊಟ್ಟರೆ ಆ ಹೇಳಿಕೆ ಸಪ್ಪೆ ಮತ್ತು ನೀರಸವಾದ ಹೇಳಿಕೆಯಾಗುವುದಿಲ್ಲವೇ? ಇವತ್ತಿನ ದಿವಸ ನಾವು ಯಾವುದಾದರೊಂದು ಚರ್ಚೆ ಮಾಡಬೇಕಾದರೆ ಆ ಚರ್ಚೆ ಫಲಪ್ರದವಾಗಬೇಕಾದರೆ ಆದಕ್ಕೆ ಏನಾದರೂ ಪ್ರಾಮುಖ್ಯತೆ ಬರಬೇಕಾದರೆ ಆ ಚರ್ಚೆಯಲ್ಲಿ ಅನೇಕ ವಿಚಾರಗಳನ್ನು ಹೇಳಲೇಬೇಕಾಗುತ್ತದೆ. ಆ ರೀತಿ ಚರ್ಚೆ ಮಾಡಲು ಬೇಕಾದಂಥ ಆವಶ್ಯಕವಾದ ಅಂಕಿ ಅಂಶಗಳನ್ನು ಸರ್ಕಾರದವರು ಕೊಡಬೇಕಾದುದು ಅತ್ಯಂತ ಆವಶ್ಯಕ. ಮಾನ್ಯ ಖರ್ಗೆಯವರು ಕಂದಾಯ ಮಂತ್ರಿಗಳಾಗಿ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆ ಹೇಳಿಕೆಯಲ್ಲಿ ಏನಿದೆ ಉಪ್ಪು, ಹುಳಿ, ಕಾರ, ಏನೂ ಇಲ್ಲ ಅತ್ಯಂತ ಸಪ್ಪೆಯಾದ ಹೇಳಿಕೆಯನ್ನಿಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಸುಮಾರು 100 ತಾಲೂಕುಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂಬ ಮಾತನ್ನು ಹೇಳಿದ್ದಾರೆ. ಈಗಾಗಲೇ 11.68 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಇದನ್ನು ಹೊರತುಪಡಿಸಿದರೆ ಅತ್ಯಂತ ಆವಶ್ಯಕವಾಗಿ ಬೇಕಾದಂಥ ಅಂಕಿ ಅಂಶಗಳೇನಿವೆ ಅಂದರೆ ಎಷ್ಟು ಮಳೆ ಬಂದಿದೆ, ಎಷ್ಟು ಬೆಳೆಯಾಗಿದೆ, ಎಷ್ಟು ಜಿಲ್ಲೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ಬಿತ್ತನೆಯಾಗಿದೆ, ಬಿತ್ತನೆಯ ಪ್ರದೇಶ ಎಷ್ಟಿದೆ, ಎಲ್ಲೆಲ್ಲಿ ಏನೇನು ಪರಿಸ್ಥಿತಿ ಇದೆ, ಎಷ್ಟು ನಷ್ಟವಾಗಿದೆ. ಅಲ್ಲಿರತಕ್ಕ ಕೃಷಿ ಕಾರ್ಮಿಕರ ಸಂಖ್ಯೆ ಏನು ಎಂಬುದನ್ನೆಲ್ಲಾ ಹೇಳಬೇಕು.

ಮಾನ್ಯ ಖರ್ಗೆಯವರು ಇಲ್ಲಿ ಇದ್ದಾಗ ಏನು ಹೇಳುತ್ತಿದ್ದರು ಅದನ್ನೆಲ್ಲಾ ನಾನು ಹೇಳುವುದಕ್ಕೆ ಸಮಯ ಇಲ್ಲದಿರುವುದರಿಂದ ಅದನ್ನೆಲ್ಲಾ ನಾನು ಉಲ್ಲೇಖ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ನೀವು ಮಾಡತಕ್ಕ ಬರಪರಿಹಾರ ಕಾರ್ಯ ಕೇವಲ ಕೆಲವೇ ಜನರಿಗೆ ಉಪಯೋಗ ಆಗಬೇಕೆಂದಿಲ್ಲ. ನಿಜವಾದ ಬರ ಪರಿಸ್ಥಿತಿಯಿಂದ ಸಂತ್ರಸ್ತವಾಗಿರತಕ್ಕ ಜನರು ಯಾರಿದ್ದಾರೆ, ಕೃಷಿ ಕಾರ್ಮಿಕರು, ರೈತರು ಯಾರಿದ್ದಾರೆ ಅವರಿಗೆ ಬೇಕಾದಂಥ ಪರಿಹಾರವನ್ನು ಕೊಡತಕ್ಕ ದೃಷ್ಟಿಯಿಂದ ಇವತ್ತಿನ ದಿವಸ ನಾವು ಬರಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ನಮ್ಮ ರಾಜ್ಯದಲ್ಲಿ 15 ಜಿಲ್ಲೆಗಳಲ್ಲಿ 100 ತಾಲ್ಲೂಕುಗಳಲ್ಲಿ ಬರ ಇದೆ ಎಂಬ ಮಾತನ್ನು ಹೇಳುತ್ತಿದ್ದೀರಿ. ಇನ್ನೊಂದು ಹೇಳಿಕೆಯಲ್ಲಿ ತಾವು ಹೇಳಿದ್ದೀರಿ 19 ಜಿಲ್ಲೆಗಳಲ್ಲಿರತಕ್ಕ ಬರಪರಿಹಾರಕ್ಕಾಗಿ ಸರ್ಕಾರ

ಹಣವನ್ನು ಬಿಡುಗಡೆ ಮಾಡಿದೆ ಅಂತ. ಇಂಥ ವ್ಯತ್ಯಾಸ ಏತಕ್ಕೆ? ಒಂದು ಹೇಳಿಕೆಯಲ್ಲಿ 15 ಜಿಲ್ಲೆಗಳಲ್ಲಿ 100 ತಾಲ್ಲೂಕುಗಳಲ್ಲಿ ಬರ ಇದೆ ಎಂದು ಹೇಳುತ್ತಿದ್ದೀರಿ, ಮತ್ತೊಂದು ಕಡೆ ಬರಪರಿಹಾರ ನಿಧಿಯಿಂದ 19 ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇದು ಸರಿಯೇ? ನಮಗೆ ಇಷ್ಟ ಬಂದ ರೀತಿಯಲ್ಲಿ ಸಹಾಯ ಮಾಡಲಿಕ್ಕೆ ಈ ಹಣವನ್ನು ಬಿಡುಗಡೆ ಮಾಡಿದ್ದೀರಾ? ಸಂತೆಯಲ್ಲಿ ಮಳೆ ಬಂದರೆ ಉಪ್ಪಿನವನು ಅತ್ತರೆ ತೆಂಗಿನ ಕಾಯಿಯವನೂ ಅತ್ತ ಅಂತ. ತಮ್ಮ ಹೇಳಿಕೆಯಲ್ಲಿ 15 ಜಿಲ್ಲೆಗಳಲ್ಲಿ ಮಾತ್ರ ಬರ ಇದೆ ಎಂದು ಏತಕ್ಕೆ ಹೇಳುತ್ತಿದ್ದೀರಿ. ನಮ್ಮ ರಾಜ್ಯದಲ್ಲಿರತಕ್ಕ 20 ಜಿಲ್ಲೆಗಳಲ್ಲೂ ಕೂಡ ಅಂದರೆ 175 ತಾಲ್ಲೂಕುಗಳಲ್ಲೂ ಕೂಡ ಬರ ಇದೆ. ಆದ್ದರಿಂದ ಈ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇಂಥ ವಿಪರ್ಯಾಸ ಏತಕ್ಕೆ? ಮುಖ್ಯವಾಗಿ ತಾವು ಒಂದು ಮಾತನ್ನು ಹೇಳಿದ್ದೀರಿ. ನೀರನ್ನು ಪೂರೈಕೆ ಮಾಡಲಿಕ್ಕೆ ಹಣವನ್ನು ಬಿಡುಗಡೆ ಮಾಡಿದರೆ, ಮಿನಿ ಕಿಟ್ಸ್‌ನ್ನು ಸಪ್ಲೈ ಮಾಡಲಿಕ್ಕೆ ಹಣವನ್ನು ಬಿಡುಗಡೆ ಮಾಡಿದಿರಿ, ಪೌಷ್ಟಿಕ ಆಹಾರ ಯೋಜನೆಗೆ ಹಣವನ್ನು ಬಿಡುಗಡೆ ಮಾಡಿದಿರಿ; ಉದ್ಯೋಗವನ್ನು ಸೃಷ್ಟಿ ಮಾಡಬೇಕೆಂಬ ಉದ್ದೇಶದಿಂದ 6.74 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದಿರಿ. ಒಟ್ಟು ಹಣ 15–11–90ರವರೆಗೆ 11.69 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ನಾನು ತಮ್ಮನ್ನು ಕೇಳುತ್ತೇನೆ, ತಮ್ಮ ಹೇಳಿಕೆಯಲ್ಲಿ 15–11–90ರವರೆಗೆ 11.69 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ಉದ್ಯೋಗ ಸೃಷ್ಟಿಗಾಗಿ 6.74 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದಿರಿ, ಅಂದರೆ ನೀವು ಎಷ್ಟು ಕಾಮಗಾರಿಗಳನ್ನು ಸೃಷ್ಟಿಮಾಡಿ, ಎಷ್ಟು ಮಾನವ ಕೆಲಸದ ದಿನಗಳನ್ನು ಸೃಷ್ಟಿಮಾಡಿದಿರಿ? ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಾವು ಹೇಳಿಲ್ಲ. ಇಂಥ ಸಪ್ಪೆ ಮತ್ತು ನೀರಸ ಹೇಳಿಕೆಗಳನ್ನು ಏನು ಕೊಟ್ಟಿದ್ದೀರಿ ಇದು ಕಾಟಾಚಾರದ ಹೇಳಿಕೆ ಎಂಬ ಭಾವನೆ ಜನರ ಮನಸ್ಸಿನಲ್ಲಿ ಬಂದರೆ ಏನೂ ತಪ್ಪಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ತಾವು 6.74 ಕೋಟಿ ರೂ.ಗಳನ್ನು 100 ತಾಲ್ಲೂಕುಗಳಿಗೆ ಏನು ಬಿಡುಗಡೆ ಮಾಡಿದ್ದೀರಿ ಇದರಲ್ಲಿ ಎಷ್ಟು ಕಾಮಗಾರಿಗಳಿಗೆ ಹಣವನ್ನು ಖರ್ಚು ಮಾಡಿದ್ದೀರಿ ಎಂಬ ಲೆಕ್ಕ ಸಿಕ್ಕಿದೆಯೇ ಈ 6.74 ಕೋಟಿ ರೂ.ನಲ್ಲಿ ಎಷ್ಟು ಮಾನವ ಕೆಲಸದ ದಿನಗಳನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯವಾಗಿದೆ? ಇದರಲ್ಲಿ ಶೇಕಡ 50 ರಷ್ಟು ಹಣವನ್ನು ಮೆಟೀರಿಯಲ್ಸ್‌ಗೆ ಮತ್ತು ಇನ್ನುಳಿದ 50 ರಷ್ಟು ಹಣವನ್ನು ಕೇವಲ ಕೂಲಿಗಾಗಿ ಕೊಟ್ಟಿದ್ದರೆ ಎಷ್ಟು ಕೊಡಲಿಕ್ಕೆ ಸಾಧ್ಯ? ಸುಮಾರು 3.35 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬಹುದು ಇಷ್ಟು ಹಣದಲ್ಲಿ ನೀವು ಎಷ್ಟು ಮಾನವ ಕೆಲಸದ ದಿನಗಳನ್ನು ಸೃಷ್ಟಿಮಾಡಲಿಕ್ಕಾಗಿದೆ? ಸುಮಾರು ಮೂರು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಬಹುದು. ಈ ಮೂರು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳಲ್ಲಿ ಎಷ್ಟು ಮಾನವ ದಿವಸಗಳನ್ನು ಸೃಷ್ಟಿಮಾಡಲಿಕ್ಕೆ ಸಾಧ್ಯವಾಗುತ್ತದೆ? ಒಂದು ತಿಂಗಳು ಕೆಲಸ ಮಾಡಲಿಕ್ಕೆ ಕೇವಲ ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಖರ್ಗೆಯವರು ಹೇಳುತ್ತಿದ್ದರು, ಕೃಷಿ ಕೂಲಿಗಾರರನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು. ತಾವು ಆ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡಿರುತ್ತೀರಾ? ಇವತ್ತು ತಾವು ಬಿಡುಗಡೆ ಮಾಡಿರತಕ್ಕಂಥ ಹಣ ಏನಿದೆ ಇಡೀ ರಾಜ್ಯದಲ್ಲಿ ಬಿಡುಗಡೆ ಮಾಡಿರುವ ಹಣ ಕೇವಲ ಒಂದು ಲಕ್ಷ ಜನರಿಗೆ ಮಾತ್ರ ಉದ್ಯೋಗ ಅದು ಒಂದು ತಿಂಗಳಿಗೆ ಸಾಧ್ಯವಿದೆ. ಇಪ್ಪತ್ತು ಜಿಲ್ಲೆಗಳಿಗೆ ತಾವು ಅದನ್ನು ಹಂಚಿದರೆ ಅಥವಾ ಒಂದು 100 ತಾಲ್ಲೂಕುಗಳಿಗೆ ಹಂಚಿದರೆ ಕೇವಲ ಒಂದು ಸಾವಿರ ಜನರಿಗೆ ಒಂದು ತಾಲ್ಲೂಕಿಗೆ ಕೆಲಸ ಮಾಡತಕ್ಕಂಥವರಿಗೆ ಕೊಡಲಿಕ್ಕೆ ಸಾಧ್ಯವಿದೆ. ಇಂಥ ಒಂದು ದುಸ್ಥಿತಿಯಲ್ಲಿ ತಾವು ಇದ್ದೀರಿ. ಇದನ್ನು ಲೆಕ್ಕ ಹಾಕಿದಾಗ ಅಲ್ಲಿರತಕ್ಕಂಥ ಕಾರ್ಮಿಕರಿಗೆ ಕೂಲಿ ಕೆಲಸವನ್ನು ಕೊಡುವಂಥ ಉದ್ದೇಶ ಸರ್ಕಾರಕ್ಕಿಲ್ಲ. ಅದಕ್ಕೆ ಬದಲಾಗಿ ಏನು ಹಣವನ್ನು ಕೊಟ್ಟಿದ್ದೀರಿ ಅದು ತಾವು ಒಂದೇ ಒಂದು ಕಾರಣಕ್ಕೋಸ್ಕರವಾಗಿ ಹಣವನ್ನು ಬಿಡುಗಡೆ ಮಾಡಿರುತ್ತೀರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಬಿಡುಗಡೆಯಾದಂಥ ಹಣ ತಾವು ನೋಡಬೇಕು. ಇದನ್ನು ಯಾರಿಗೆ ಬಿಡುಗಡೆ ಮಾಡಿದ್ದೀರಿ ಸ್ವಾಮಿ ಯಾವ ಆಧಾರದಮೇಲೆ ಬಿಡುಗಡೆ ಮಾಡಿದ್ದೀರಿ? ಹಳ್ಳಿಗಳಲ್ಲಿ ತೀವ್ರವಾದ ಅಭಾವಪರಿಸ್ಥಿತಿ ಇದೆ, ಅದರ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಿದ್ದೀರಾ? ಎಲ್ಲೆಲ್ಲಿ ರಾಜಕೀಯ ಪ್ರಭಾವ ಇದೆ ಆ ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ ಈ ಇಲಾಖೆಯವರು ಹಣವನ್ನು ಏನು ಬಿಡುಗಡೆ ಮಾಡಿದ್ದಾರೆ ಇದು ಒಂದು ನ್ಯಾಯ ಸಮ್ಮತವಾದ ಆಧಾರದಮೇಲೆ ಹಣವನ್ನು ಬಿಡುಗಡೆ ಮಾಡಿಲ್ಲ. ಅದಕ್ಕೆ ಬದಲಾಗಿ ರಾಜಕೀಯ ಪ್ರಭಾವ ಎಲ್ಲೆಲ್ಲಿ ಇದೆ ಅಲ್ಲಲ್ಲಿ ಮಾತ್ರ

ಬಿಡುಗಡೆ ಮಾಡಿದ್ದಾರೆಂದು ನಾನು ಹೇಳುತ್ತಿದ್ದೇನೆ. ಹಾಸನದಲ್ಲಿ, ಹುಬ್ಬಳ್ಳಿಯಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಪ್ರಭಾವವಿದೆ ಅಲ್ಲಿ ಹಣವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಈ ಪ್ರಭಾವಕ್ಕೆ ಏನು ಮಾಡುತ್ತೀರೆನ್ನುವ ಮಾತನ್ನು ಮಾನ್ಯ ಖರ್ಗೆಯವರಿಗೆ ಕೇಳುತ್ತಿದ್ದೇನೆ. ನಾನು ಇವತ್ತು ಹೇಳುತ್ತಿದ್ದೇನೆ ತಾವು ಸರ್ಕಾರದಿಂದ ಬಿಡುಗಡೆ ಮಾಡಿದ 11 ಕೋಟಿ 90 ಲಕ್ಷ ರೂಪಾಯಿಗಳು ಏನು ಇರುತ್ತದೆ ಇದು ಯಾವ ಆಧಾರದಮೇಲೆ ಬಿಡುಗಡೆ ಮಾಡಿದ್ದೀರಿ. ತಾವು ಇದನ್ನು ನೋಡಿದರೆ ಅರ್ಥವಾಗುತ್ತದೆ. ಇದರಲ್ಲಿ ವಸ್ತುಸ್ಥಿತಿಯ ಆಧಾರದಮೇಲೆ ಬರಗಾಲ ಪೀಡಿತ ಪ್ರದೇಶಗಳಿಗೆ ಅವರ ಸಂಕಷ್ಟಗಳನ್ನು ನೋಡಿಕೊಂಡು ಮಾಡಿಲ್ಲ. ಅದಕ್ಕೆ ಬದಲಾಗಿ ತಮಗೆ ಇಷ್ಟಬಂದ ರೀತಿಯಲ್ಲಿ ಹಣವನ್ನು ತಾವು ಬಿಡುಗಡೆ ಮಾಡಿದ್ದೀರಿ. ತಮಗೆ ಇಷ್ಟ ಬಂದ ಜಿಲ್ಲೆಗಳಿಗೆ ತಾವು ಹಣವನ್ನು ಬಿಡುಗಡೆ ಮಾಡಿದ್ದೀರಿ. ಚಿತ್ರದುರ್ಗಾ ಜಿಲ್ಲೆಯನ್ನು ತಮ್ಮ ಗಮನಕ್ಕೆ ತಂದರೆ ಇದು ಅತ್ಯಂತ ಭೀಕರವಾದಂಥ ಬರಗಾಲಕ್ಕೆ ತುತ್ತಾದ ಪ್ರದೇಶವೆಂದು ಹೆಸರು ವಾಸಿಯಾಗಿದೆ. ಬಿಜಾಪುರ ಜಿಲ್ಲೆ ಇರಬಹುದು, ಚಿತ್ರದುರ್ಗಾ ಜಿಲ್ಲೆಇರಬಹುದು, ಕೋಲಾರ ಜಿಲ್ಲೆ ಇರಬಹುದು. ಈ ಜಿಲ್ಲೆಗಳು ತಮಗೆ ಪ್ರಧಾನವಲ್ಲ. ತಮಗೆ ಪ್ರಾಧಾನ್ಯತೆ ಇರುವುದು ಬೇರೆ ಬೇರೆ ಜನರುಗಳು. ಅವರ ಹೆಸರುಗಳನ್ನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ನ್ಯಾಯ ಸಮ್ಮತವಾದ, ನೀತಿ ತಾವು ತೆಗೆದುಕೊಳ್ಳಬೇಕು. ನ್ಯಾಯಸಮ್ಮತವಾದ ನೀತಿಯನ್ನು ಅನುಸರಿಸುವಂಥ ಕೆಲಸ ಮಾಡಿಲ್ಲವೆಂದು ನಾನು ತೀವ್ರವಾಗಿ ಖಂಡನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸ್ವಾಮಿ ಈ 80 ಲಕ್ಷ ರೂಪಾಯಿಗಳನ್ನು ತಾವು ಏನು ಮಾಡಿದ್ದೀರಿ? ಎಷ್ಟು ಹಣವನ್ನು ಇದರಲ್ಲಿ ಖರ್ಚು ಮಾಡಿದ್ದೀರಿ? ಎಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ. ತಾವು ನಿಜಕ್ಕೂ ಕೂಡ ನಾಚಿಕೆ ಪಡಬೇಕು ಅಲ್ಲಿರುವಂಥ ಜನರಿಗೆ, ನೀರಿಲ್ಲದಿರುವಾಗ ಕುಡಿಯಲಿಕ್ಕೆ ನೀರನ್ನು ಕೊಡುತ್ತಿಲ್ಲ. ಇದನ್ನು ತಮ್ಮ ಪರಿಗಣನೆಗೆ ತಂದಿರುತ್ತೇವೆ. ಇಲ್ಲಿ ತಾವು ಎಷ್ಟು ನೀರನ್ನು ಸಪ್ಲೈ ಮಾಡಿರುವುದು ಸ್ವಾಮಿ. ಇಲ್ಲಿಯವರೆಗೆ ಚಿತ್ರದುರ್ಗ ಜಿಲ್ಲೆಗೆ 25 ಪರ್ಸೆಂಟ್‌ನಷ್ಟು ಕುಡಿಯುವ ನೀರನ್ನು ಕೊಟ್ಟಿಲ್ಲ. ನಿಜಕ್ಕೂ ನಾಚಿಕೆ ಪಟ್ಟುಕೊಳ್ಳಬೇಕು. ಇಲ್ಲಿಯ ದನಕರುಗಳಿಗೆ ಮೇವಿಲ್ಲವೆಂದು ಹೇಳಿದಾಗ ಈ ಜಿಲ್ಲೆಗೆ ತೀವ್ರವಾಗಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಇಲ್ಲಿ ಬಹಳ ಸಂಕಷ್ಟದಲ್ಲಿದ್ದಾರೆಂದು ಹೇಳಿ ಸರ್ಕಾರ ಕೊಟ್ಟಿರುವ ಹಣವೆಷ್ಟೆಂದರೆ 25 ನೂರು. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಮತ್ತೊಂದು ಇಲ್ಲವೆನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದಕ್ಕಿಂತ ಹೆಚ್ಚಿನ ಹಣವನ್ನು ಇವತ್ತಿನದಿವಸ ಏನು ಬಿಡುಗಡೆ ಮಾಡಿದ್ದೀರಿ, ಆ ಬಿಡುಗಡೆ ಮಾಡಿರುವ ಹಣವನ್ನು ಯಾವರೀತಿ ಖರ್ಚುಮಾಡಿದ್ದಾರೆ ಎನ್ನುವುದಕ್ಕೆ ತಾವು ಯಾರಾದರೂ ಹೋಗಿ ನೋಡಿದ್ದೀರಾ? ತಮ್ಮ ಅಧಿಕಾರಿಗಳು ಯಾರಾದರೂ ಹೋಗಿ ನೋಡಿದ್ದಾರೆಯೇ. ಸ್ವಾಮಿ ಬರಗಾಲ ಬಂದನಂತರ ಬಹಳ ಜನರಿಗೆ ಬಹಳ ಪ್ರೀತಿ ಉಂಟಾಗುತ್ತದೆ. ಈ ಬರಗಾಲಕ್ಕೆ ಬಂದ ಹಣವನ್ನು ಅನಾವಶ್ಯಕವಾದ ರೀತಿಯಲ್ಲಿ ಅತ್ಯಂತ ದೋಷಪೂರಿತವಾದ ರೀತಿಯಲ್ಲಿಲ್ಲಾಗುಮಾಡುವಂತೆ ಉದ್ದೇಶದಿಂದ ಹಣವನ್ನು ಖರ್ಚುಮಾಡುತ್ತಿದ್ದಾರೆ. ಇದರ ಬಗ್ಗೆಯೂ ಸಹ ತಮ್ಮ ಗಮನವಿರಬೇಕು. ಹಣ ಬಿಡುಗಡೆ ಮಾಡಿರುವುದರಲ್ಲಿ ಕಾಮಗಾರಿಗಳಿಗಾಗಿ ಖರ್ಚುಮಾಡಿದ್ದೀರಿ. ಅಲ್ಲಿ ಕೂಲಿ ಕೆಲಸ ಮಾಡಿದಂಥ ಕೂಲಿಗಾರರಿಗೆ ತಾವು ಧಾನ್ಯಗಳನ್ನು ಕೊಟ್ಟಿದ್ದೀರಿ. ಅದರ ಲೆಕ್ಕವೇನಾದರೂ ತಮ್ಮ ಇಲಾಖೆಯಲ್ಲಿ ಇಟ್ಟಿದ್ದಾರೆಯೇ? ಇವತ್ತಿನದಿವಸ ಸಾಕಷ್ಟು ಬೆಳೆ ಇಲ್ಲವೆಂಬ ಕಾರಣಕ್ಕಾಗಿ ತಾವು ವಿಶೇಷವಾಗಿ ಹಣವನ್ನು ಕೊಡುತ್ತಿರಬಹುದು. ಆದರೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ ಸನ್ಮಾನ್ಯ ಅಧ್ಯಕ್ಷಣೀಯವರೇ ಇವತ್ತಿನ ದಿವಸ ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ ಕಣ್ಣಿಗೆ ಮಣ್ಣನ್ನು ಎರಚುವ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತಿನ ದಿವಸ ಏನು ಬರಪೀಡಿತ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರು ಇದ್ದಾರೆ ಅವರಿಗೆ ಕೂಲಿ ಕೆಲಸ ಕೊಡಬೇಕು, ಆಹಾರ ಧಾನ್ಯ ವಿತರಣೆ ಮಾಡಬೇಕು. ಬರೀ ಪುಸ್ತಕದಲ್ಲಿ ಮಾಡುವುದು ಅಲ್ಲ; ಕೊಟ್ಟಂತಹ ಹಣ, ಆಹಾರ ಎಲ್ಲ ದುರುಪಯೋಗವಾಗುವ ಸಂದರ್ಭ ಇದೆ. ಇದು ಹೊಸದಾಗಿ ಏನು ಅಲ್ಲ, ಮೊದಲಿನಿಂದಲೂ ಇದೆ. ಇದನ್ನು ಸರಿಪಡಿಸುವ ಕ್ರಮವನ್ನು ಕಂದಾಯ ಮಂತ್ರಿಗಳು ತೆಗದುಕೊಳ್ಳಬೇಕು. ಅದಕ್ಕಿಂತ ಹೆಚ್ಚಾಗಿ ಕುಡಿಯುವ ನೀರಿನ ಸಂಕಷ್ಟ ಇದೆ. ಅದರಲ್ಲೂ ನೀರಾವರಿ ಬಾವಿಗಳಿಗೆ ಇವತ್ತಿನ ದಿವಸ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಸರಿಯಾಗಿ ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಅದರ ಬಗ್ಗೆ ಮಂಡಳಿಗೆ ಹೇಳಿದರೂ ಆಗುವುದಿಲ್ಲ. ಸರ್ಕಾರಕ್ಕೆ ಹೇಳಿದರೂ ಆಗುವುದಿಲ್ಲ. ಚಿತ್ರದುರ್ಗ ವಿಭಾಗದಲ್ಲಿ 2350

ಜನ ಇವತ್ತಿನ ದಿವಸ ವಿದ್ಯುತ್‌ಗೋಸ್ಕರ ಕಾಯುತ್ತಿದ್ದಾರೆ. ಆದರಲ್ಲೂ ಹಿರಿಯೂರು ತಾಲ್ಲೂಕಿನಂತಹ ಬರಪೀಡಿತ ಪ್ರದೇಶಗಳಲ್ಲಿ 1-4-88 ರಿಂದ ಇವತ್ತಿನವರೆಗೆ 500 ಜನ ವಿದ್ಯುತ್ತನ್ನು ಪಡೆಯಲಾರದ ಪರಿಸ್ಥಿತಿಯಲ್ಲಿದ್ದಾರೆ ಕೇವಲ 1300 ಜನರಿಗೆ ವಿದ್ಯುಚ್ಛಕ್ತಿ ಆಗುತ್ತದೆಂಬ ಗುರಿ ಇದೆ. ಆದರಲ್ಲಿ 790 ಜನರಿಗೆ ಕೊಟ್ಟಮೇಲೂ 1988ನೇ ಏಪ್ರಿಲ್ ಒಂದರಿಂದ 2300 ಅರ್ಜಿಗಳು ಈ ವಿಭಾಗದಲ್ಲಿ ಇವೆ ಆಂದಾಗ ಎಷ್ಟರಮಟ್ಟಿಗೆ ವಿದ್ಯುತ್ ಪೂರೈಕೆಯಲ್ಲಿ ಪ್ರಾಧಾನ್ಯತೆ, ಆದ್ಯತೆ ಕೊಡಬೇಕಾಗಿತ್ತು ಅದನ್ನು ಕೊಡುತ್ತಿಲ್ಲ. ಆದರ ಬಗ್ಗೆ ಸರ್ಕಾರ ಆಲೋಚಿಸಬೇಕು. ಇವತ್ತಿನ ದಿವಸ ಮುಖ್ಯವಾಗಿ ಪರಿವೀಕ್ಷಣಾ ಕೆಲಸವನ್ನು ಮಾಡಬೇಕು. ಬಿಡುಗಡೆ ಮಾಡಿದ ಹಣ ದುರುಪಯೋಗವಾಗಬಾರದು. ಯಾವ ಉದ್ದೇಶಕ್ಕೋಸ್ಕರ ಹಣ ಬಿಡುಗಡೆ ಮಾಡಿದ್ದೀರಿ ಆ ಉದ್ದೇಶ ಸಾಧನೆ ಆಗಬೇಕಾದರೆ ಮಂತ್ರಿಗಳು ಮತ್ತು ಬೇರೆಯವರು ಹೆಚ್ಚು ಹೆಚ್ಚು ಆಸಕ್ತಿವಹಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಹಣ ಸದುಪಯೋಗ ವಾಗುವಂತೆ ಮಾಡಬೇಕು. ಕೊನೆಯದಾಗಿ, ಬರಪೀಡಿತ ಪ್ರದೇಶಗಳಲ್ಲಿ ನೀರು ಪೂರೈಕೆ ಉದ್ಯೋಗ ಕಲ್ಪಿಸುವುದು ಮೇವು ಪೂರೈಕೆ ಕೆಲಸಗಳನ್ನು ಏನು ಮಾಡಬೇಕೆಂದಿದ್ದೀರಿ, ಪ್ರಾಮಾಣಿಕವಾಗಿ ನ್ಯಾಯ ಸಮ್ಮತವಾದ ರೀತಿಯಲ್ಲಿ ಎಲ್ಲೆಲ್ಲಿ ಬರಗಾಲ ಇದೆ ಅಲ್ಲಿ ಆದ್ಯತೆ ಕೊಟ್ಟು ಕೆಲಸ ಮಾಡಬೇಕಾಗಿದೆ. ನಮ್ಮ ಕಣ್ಣಿಗೆ ಮಣ್ಣೆರೆಚುವ ಕೆಲಸ ಮಾತ್ರ ಮಾಡಬೇಡಿ. ಈ ದಿಸೆಯಲ್ಲಿ ವಿವೇಕಯುತವಾದ ನೀತಿಯನ್ನು ಅನುಸರಿಸಬೇಕೆಂದು ಒತ್ತಾಯಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):– ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ಜನ ಇದರ ಬಗ್ಗೆ ಮಾತನಾಡಿದ್ದಾರೆ. ನಾನು ಕೇವಲ 3 ಜಿಲ್ಲೆಗಳ ಬಗ್ಗೆ ಮಾತನಾಡುತ್ತೇನೆ. ಕೋಲಾರ, ತುಮಕೂರು ಮತ್ತು ನನ್ನ ಸ್ವಂತ ಜಿಲ್ಲೆಯಾದ ಬೆಂಗಳೂರಿನ ಬಗ್ಗೆ ಮಾತನಾಡುತ್ತೇನೆ. ತುಮಕೂರಿನಲ್ಲಿ ಒಂದೆರಡು ಕೆರೆಗಳನ್ನು ಬಿಟ್ಟರೆ ಎಲ್ಲ ಕೆರೆಗಳು ಒಣಗಿ ಹೋಗಿದ್ದು ಕುಡಿಯುವುದಕ್ಕೆ ಕೂಡ ನೀರಿಲ್ಲ. ತಾವು ದಾರಿಯಲ್ಲಿ ಬರುವಾಗ ಕುಣಿಗಲ್ ಕೆರೆಯನ್ನು ನೋಡಬಹುದು, ಫುಟ್‌ಬಾಲ್ ಮೈದಾನ ಇದ್ದ ಹಾಗೆ ಇದೆ. ಯಾವ ಕೆರೆಗಳಲ್ಲೂ ನೀರಿಲ್ಲ; ದನಕರುಗಳಿಗೆ ಜನವರಿಯಿಂದ ಕುಡಿಯುವ ನೀರಿಗೆ ಏನು ಮಾಡುವುದು ಎಂದು ರೈತರಿಗೆ ಯೋಚನೆಯಾಗಿದೆ. ಆ ಕೆರೆಗಳನ್ನು 10–15 ಅಡಿ ಆಳಪಡಿಸಿದರೆ ದನಕರುಗಳಿಗೆ ನೀರು ಸಿಗಬಹುದೆಂದು ಅಂದುಕೊಂಡಿದ್ದೇನೆ. ಎರಡನೆಯದಾಗಿ, ಇರಿಗೇಷನ್ ಪಂಪುಗಳ ಬಗ್ಗೆ ಹೇಳುವುದಾದರೆ, ಸುಮಾರು 4–5 ನೂರು ಬೋರ್‌ವೆಲ್‌ಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ರೆಡಿಯಾಗಿವೆ. ವರ್ಷಾನುಗಟ್ಟಲೆ ಕಾಯ್ದರೂ ಇವತ್ತಿನವರೆಗೆ ಪವರ್ ಸಿಕ್ಕಿಲ್ಲ. ಸರ್ಕಾರ ಹೇಳಿದೆ. ಈ ವರ್ಷ 60 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು. ನಿನ್ನೆ ನಮ್ಮ ತಾಲ್ಲೂಕು ಅಭಿವೃದ್ಧಿ ಸಮಿತಿಯಲ್ಲಿ ಕೇಳಿದೆ, ನೀವು ನೋಡಿದರೆ ನಮ್ಮ ಮೇಲೆ ರೇಗುತ್ತೀರಿ, ಆದರೆ ನಮ್ಮಲ್ಲಿ ಮೆಟೀರಿಯಲ್ ಸರಬರಾಜಾಗುತ್ತಿಲ್ಲವೆಂದು ಹೇಳುತ್ತಾರೆ. ಹರಿಜನಗಿರಿಜನರಿಗೆ ಕೊಡುವುದಕ್ಕೆ 90 ಬೋರ್‌ವೆಲ್‌ಗಳು ರೆಡಿಯಾಗಿದ್ದು 50 ಪಂಪುಗಳು ಬಂದಿದ್ದರೂ ಪವರ್ ಸಪ್ಲೈ ಮಾಡಿಲ್ಲ. ನಿನ್ನೆ ದಿವಸ 30 ಜನ ಕಾಯುತ್ತಿದ್ದರು. ಇವರಿಗಾದರೂ ಕೂಡಲೇ ಪವರ್ ಸಪ್ಲೈ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ, 500 ಕೋಟಿ ರೂಪಾಯಿ ಆದಾಯ ಎಕ್ಸೈಜ್ ಬಾಬತ್ತಿನಲ್ಲಿ ಜಾಸ್ತಿ ಬರುತ್ತಿದೆ ಎಂದು. 500 ಕೋಟಿ ರೂಪಾಯಿ ಬಂತೋ ಅಥವಾ ಅದು ಬರೀ ಪುಸ್ತಕದಲ್ಲಿ ಇದೆಯೋ? ಹಣ ಬಂದಿದ್ದರೆ ಖರ್ಚು ಮಾಡುವುದಕ್ಕೆ ಏತಕ್ಕೆ ಹಿಂದುಮುಂದು ನೋಡುತ್ತೀರಿ ಎಂದು ಅರ್ಥವಾಗಲಿಲ್ಲ. ನನ್ನ ತಾಲ್ಲೂಕಿಗೆ 50 ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದಾರೆ ಬರಗಾಲ ಕಾಮಗಾರಿಗೆ ಎಂದು, ಅಂದರೆ ಒಂದೇ ಒಂದು ರಸ್ತೆ ಕೆಲಸವನ್ನು ಮಾತ್ರ ಆದರಿಂದ ಮಾಡಲು ಸಾಧ್ಯ. 50 ಸಾವಿರ ರೂಪಾಯಿ ಕೊಟ್ಟರೆ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ ಹೇಳಿ. ಎರಡು ಹೋಬಳಿಯಲ್ಲಿ 50 ಪರ್ಸೆಂಟ್ ರಾಗಿಯಾಗಿದೆ. ಉಳಿದ ಕಡೆ 10 ಪರ್ಸೆಂಟ್ ಕೂಡ ಬೆಳೆಯಾಗುವುದಿಲ್ಲ. ಅಧಿಕಾರಿಗಳು ಏನು ಮಾಡುತ್ತಾರೋ ಗೊತ್ತಿಲ್ಲ. 56 ಊರುಗಳಲ್ಲಿ ಕುಡಿಯುವ ನೀರಿಲ್ಲ. ಜಿಲ್ಲಾ ಪರಿಷತ್ತಿನಿಂದ ಬೋರ್‌ವೆಲ್ ಹಾಕುವುದನ್ನು ವಾಪಸ್ ತೆಗೆದುಕೊಂಡಿದ್ದೀರಿ. ಅಧಿಕಾರಿಗಳು ಏನು ಮಾಡುತ್ತಿದ್ದಾರೋ ನೋಡಬೇಕು. ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ಸುಮ್ಮನೆ ತಾಲ್ಲೂಕು ಪಂಚಾಯಿತಿಯಿಂದ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳು ನಿಮಗೆ ಬರೆಯುವುದು ಹೀಗಾಗಿ ಪೇಪರ್ ವ್ಯಯ ಆಗುತ್ತಿದೆಯೇ ವಿನಾ

ಕೆಲಸ ಆಗುವುದಿಲ್ಲ. ಕೆಲಸ ಮಾಡಬೇಕು ಎಂದು ಆಸೆ ಇದ್ದರೆ ಅಧಿಕಾರಿಗಳಿಗೆ ಸೂಚನೆ ಕೊಡಿ. ಸೂಚನೆ ಕೊಟ್ಟು ಹಣ ಬಿಡುಗಡೆ ಮಾಡಿ. ಹಣ ಇದೆಯೋ ಇಲ್ಲವೇ ದಯವಿಟ್ಟು ಹೇಳಿ ನಮಗೆ. ಇಲ್ಲದೇ ಇದ್ದರೆ ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಒಂದು ಸೊಸೈಟಿಯೂ ಕೆಲಸ ಮಾಡುತ್ತಿಲ್ಲ ಅಧ್ಯಕ್ಷರೆ. ಸಹಕಾರ ಸಂಘದಿಂದ 3 ಪೈಸೆ ರೈತರಿಗೆ ಸಿಗುವುದಿಲ್ಲ. ಎಲ್ಲಾ ಡಿಫಾಲ್ಟರ್ ಆಗಿವೆ. ಸಕಾಲದಲ್ಲಿ ಕಾರ್ಯಕ್ರಮ ಕೈಗೊಳ್ಳಲಿಲ್ಲ. ಸಹಕಾರ ಸಂಸ್ಥೆಗಳು ಯಾವಾಗ ಸರಿಹೋಗುತ್ತದೋ ಗೊತ್ತಿಲ್ಲ. ನೀರಾವರಿ ಪಂಪುಗಳಿಗೆ ಹಣ ಸಿಗುತ್ತಿಲ್ಲ. ನೀರಾವರಿ ಯೋಜನೆಗಳಿಗೆ ಹಣ ಇಲ್ಲ. ಸಾಲ ಮಾಡಿಯಾದರೂ ಬದುಕೋಣ ಎಂದರೆ ಅದಕ್ಕೂ ವಿಧಿಯಿಲ್ಲದ ಸನ್ನಿವೇಶ ಇರುವಾಗ ಸರ್ಕಾರ ಸರಿಯಾಗಿ ಕೆಲಸ ಮಾಡದೇ ಇದ್ದರೆ ಜನರನ್ನು ಯಾರೂ ರಕ್ಷಿಸುವುದಕ್ಕಾಗುವುದಿಲ್ಲ. ಆದ್ದರಿಂದ ನೀವು ಬೇಗ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನಾದರೂ ಈ ಸಮಯದಲ್ಲಿ ಒತ್ತಾಯಿಸುತ್ತೇನೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ. 17ನೇ ತಾರೀಖಿನವರೆಗೂ ಅಧಿವೇಶನ ಇರುವುದಿಲ್ಲ. ಬಿಡುವಿರುತ್ತದೆ. ದಯಮಾಡಿ ಜಿಲ್ಲೆಗಳಲ್ಲಿ ಓಡಾಡಿ. ಹಳ್ಳಿಗಳಲ್ಲಿ ಓಡಾಡುವುದಕ್ಕೆ ಜಿಲ್ಲಾ ಮಂತ್ರಿಗಳಿಗೆ ಹೇಳಿ. ಜಿಲ್ಲಾ ಕೇಂದ್ರದಲ್ಲಿ ಕೂತ್ಕೊಂಡು ಅವರಿವರನ್ನು ಕರೆದು ಭಾಷಣ ಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ದಯಮಾಡಿ ಹಳ್ಳಿಗಳಿಗೆ ಹೋಗಿ ಪರಿಸ್ಥಿತಿ ನೋಡಿದರೆ ನಿಜವಾಗಿ ಸಹಾಯ ಮಾಡಬಲ್ಲಿರಿ ಎಂದು ಧೈರ್ಯ ಇದೆ. ಇದರ ಬಗ್ಗೆ ಕೂಡಲೇ ಗಮನ ಹರಿಸಬೇಕೆಂದು ಒತ್ತಾಯಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಸನ್ಮಾನ್ಯ ಅಧ್ಯಕ್ಷರೆ, ಈಗ ಮಾತನಾಡಿದ ಎಲ್ಲ ಹಿರಿಯ ಸದಸ್ಯರೂ ಉತ್ತರ ಕರ್ನಾಟಕ ಭಾಗದವರು ಎಲ್ಲಾ ಬರ ಪರಿಹಾರದ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ವಿಶೇಷವಾದ ಜಿಲ್ಲೆ ಎಂಬುದು ತಮಗೆ ಗೊತ್ತಿರುವ ವಿಷಯ. ತಾವು ನಮ್ಮ ಜಿಲ್ಲಾ ಮಂತ್ರಿಯಾಗಿ ನೋಡಿದ್ದೀರಿ. ಕಡೂರು, ತರೀಕೆರೆ, ಬೀರೂರು ತೀವ್ರ ಬರಗಾಲಕ್ಕೆ ತುತ್ತಾಗಿದ್ದರೆ ಕೊಪ್ಪ, ಮೂಡಿಗೆರೆ, ಶೃಂಗೇರಿ, ನರಸಿಂಹರಾಜಪುರ ಈ ಕಡೆಗಳಲ್ಲಿ ಅತಿಯಾದ ಮಳೆಯಿಂದ ಸಿಕ್ಕಾಪಟ್ಟೆ ರಸ್ತೆ ಮತ್ತು ಬೆಳೆ ನಾಶವಾಗಿದೆ. ಮೊದಲನೆಯದಾಗಿ ಕಡೂರು, ತರೀಕೆರೆ, ಬೀರೂರು ಈ ಭಾಗಗಳಲ್ಲಿನ ಬರಗಾಲದ ಬಗ್ಗೆ ನಾಲ್ಕು ಮಾತು ಆಡಬೇಕಾಗಿದೆ. ಅಲ್ಲಿ ಸರ್ಕಾರದವರು ಈಗಾಗಲೇ ಬರಪರಿಹಾಕ್ಕೆ ಕೇವಲ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ಕೇಳಿರುವುದು ಒಂದು ಕೋಟಿ ರೂಪಾಯಿ ಕುಡಿಯುವ ನೀರಿಗೆ 13 ಲಕ್ಷ, ಮೇವಿಗೆ 3 ಲಕ್ಷ ಉದ್ಯೋಗಕ್ಕೆ 24 ಲಕ್ಷ ಕೊಟ್ಟಿದ್ದಾರೆ. ಇದು ಏನೇನೂ ಸಾಲದು. ಜಿಲ್ಲಾಧಿಕಾರಿಗಳು 50 ಲಕ್ಷ ರೂಪಾಯಿ ಹೆಚ್ಚು ಹಣ ಏನು ಕೇಳಿದ್ದಾರೆ ಅದನ್ನು ಕೂಡಲೇ ಆ ಭಾಗಕ್ಕೆ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಕುಡಿಯುವ ನೀರಿನ ಅಭಾವ ಇಡೀ ಜಿಲ್ಲೆಯಾದ್ಯಂತ ಇದ್ದು ಅದಕ್ಕೆ 64 ಲಕ್ಷ ರೂಪಾಯಿ 4–7–90ಕ್ಕೆ ಸರ್ಕಾರ ಮಂಜೂರು ಮಾಡಿದೆ. ಆದರೆ ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ ಪೂರೈಸುತ್ತೇವೆ. ಸರ್ಕಾರದಿಂದ 64 ಲಕ್ಷ ರೂಪಾಯಿ ಬಿಡುಗಡೆ ಮಾಡಿಸಿದ್ದೇವೆ ಎಂದು ಶಾಸಕರೆಲ್ಲಾ ಬೆನ್ನು ತಟ್ಟಿಕೊಂಡು ಅದು ಲೋಕಲ್ ಪೇಪರ್‌ನಲ್ಲೆಲ್ಲಾ ಬಂತು. ಆದರೆ ಹಣ ಇದುವರೆಗೂ ಬಿಡುಗಡೆಯಾಗಿಲ್ಲ. ಯಾವ ಜಿಲ್ಲೆಯಲ್ಲಿ ಆದ್ಯತೆ ಕೊಡಬೇಕು ಎಂದು ಲಿಸ್ಟ್ ತಯಾರು ಮಾಡಿದ್ದೇವೆ. ಆದ್ದರಿಂದ ಆದಷ್ಟು ಜಾಗ್ರತೆ ಹಣ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ. ಮೂಡಿಗೆರೆ, ಕೊಪ್ಪ, ಶೃಂಗೇರಿ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ 250 ರಿಂದ 300 ಇಂಚು ಮಳೆಯಾಗಿದೆ. ಮಂಗಳೂರಿನಲ್ಲಿ ಇದಕ್ಕಿಂತ ಹೆಚ್ಚಾಗಿ ಮಳೆಯಾಗಿದೆ ಎಂದು ನಾನು ಹೇಳಬಲ್ಲೆ. ನನಗೆ ಗೊತ್ತಿರುವ ಹಾಗೆ ಎಲ್ಲಾ ರಸ್ತೆಗಳೂ ಡ್ಯಾಮೇಜ್ ಆಗಿ ಗುಂಡಿಗುಂಡಿಯಾಗಿದೆ. ಮೋರಿಗಳು ಒಡೆದುಹೋಗಿವೆ. ನಿಮಗೆ ಗೊತ್ತಿರುವ ಹಾಗೆ ಕಡೂರು ಮಂಗಳೂರು ರಸ್ತೆಯಲ್ಲಿ ಇದ್ದ ಮೇಜರ್ ಬ್ರಿಡ್ಜ್ ಕಿತ್ತುಹೋಗಿ ಸರ್ಕಾರಕ್ಕೆ ಭಾರಿ ಹಾನಿಯಾಯಿತು. ಅದನ್ನು ಕೂಡಲೇ ಕಟ್ಟಬೇಕಾದ ಪ್ರಸಂಗ ಬರುತ್ತದೆ. ನಮ್ಮ ತಾಲ್ಲೂಕಿನಲ್ಲಿ ನಾಲ್ಕು ಶಾಲೆಗಳು ಕುಸಿದ್ದು ಬಿದ್ದಿವೆ,

ನಮ್ಮಲ್ಲಿ ಹೌಸಿಂಗ್ ಬೋರ್ಡ್ ವತಿಯಿಂದ ಏನು ಟೀಚರ್ಸ್ ಕ್ವಾರ್ಟ್‌ರ್ಸ್, ಆರೋಗ್ಯ ಇಲಾಖೆ ಸಿಬ್ಬಂದಿ ಕ್ವಾರ್ಟ್‌ರ್ಸ್ ಕಟ್ಟಲಾಗಿವೆ ಅವೆಲ್ಲಾ ಜೋರು ಮಳೆಯ ದಿಸೆಯಿಂದ ಬೀಳುವ ಪರಿಸ್ಥಿತಿಯಲ್ಲಿವೆ. ನಮಗೆ ರೈನ್ ಡ್ಯಾಮೇಜ್ ವರ್ಕ್ಸ್‌ಗೆ ಕೇವಲ 30 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದು ಇದು ಏನೇನೂ ಸಾಲದು.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಅಲ್ಲಿ ಮಳೆಯಿಂದಾಗಿ ಕೇವಲ ಸರ್ಕಾರಿ ಲೋಕೋಪಯೋಗಿ ಇಲಾಖೆಯ ಕಟ್ಟಡಗಳು ಮಾತ್ರ ಹಾಳಾಗಿವೆಯೋ ಅಥವಾ ಖಾಸಗೀ ಮನೆಗಳಿಗೂ ಧಕ್ಕೆಯಾಗಿದೆಯೋ?

ಶ್ರೀಮತಿ ಮೋಟಮ್ಮ :– ಮಳೆಗೆ ಸರ್ಕಾರಿ ಕಟ್ಟಡಗಳು, ಖಾಸಗೀ ಮನೆಗಳು ಎಂದೇನಿಲ್ಲ. ಅಲ್ಲಿ ನಿಮ್ಮದೂ ಮನೆ ಏನಾದರೂ ಇದ್ದರೆ ನಿಮ್ಮ ಮನೆಗೂ ಡ್ಯಾಮೇಜ್ ಆಗುತ್ತಿತ್ತೇನೋ.

ಶ್ರೀ ಬಿ.ಹೆಚ್. ಬನ್ನಿಕೊಡ್ :– ಸರ್ಕಾರದ್ದಷ್ಟೇ ಬಿದ್ದಿವೆ ಎಂದರೆ ಅಷ್ಟು ಭದ್ರವಾಗಿ ಕಟ್ಟಿದ್ರೇ ಎಂದು ಅಷ್ಟೇ.

ಶ್ರೀಮತಿ ಮೋಟಮ್ಮ :– ರೈನ್ ಡ್ಯಾಮೇಜ್ ವರ್ಕ್ಸ್‌ಗೆ ಹೆಚ್ಚಿನ ಸಹಾಯವನ್ನು ಒದಗಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಆದಷ್ಟು ಬೇಗ ಕುಸಿದಿರುವ ಶಾಲಾಕಟ್ಟಡಗಳ ರಿಪೇರಿಯಾಗಬೇಕು. ಮೋರಿಗಳ ರಿಪೇರಿಯಾಗಬೇಕು ಹಾಳಾಗಿರುವ ಕಡೂರು–ಮಂಗಳೂರು ಹೆದ್ದಾರಿಯನ್ನು ಅತಿ ಜಾಗ್ರತೆ ರಿಪೇರಿ ಮಾಡಬೇಕು. ನಾವು ಕೇವಲ ಚಿಕ್ಕಮಗಳೂರು ಜಿಲ್ಲೆ ಮಾತ್ರ ಹೇಳುತ್ತಿಲ್ಲ, ಮಂಗಳೂರು ಜಿಲ್ಲೆಯನ್ನು ಸೇರಿಸಿಕೊಂಡೇ ಮಾತನಾಡುತ್ತಿದ್ದೇನೆ, ನಾವೆಲ್ಲರೂ ಅಕ್ಕಪಕ್ಕದವರು. ಆಮೇಲೆ ಶಿವಮೊಗ್ಗವನ್ನೂ ನಾವು ಬಿಡುವುದಿಲ್ಲ. ತೀರ್ಥಹಳ್ಳಿ, ಸೊರಬ, ಸಾಗರ ತಾಲ್ಲೂಕುಗಳಲ್ಲೂ ಕೂಡಾ ರೈನ್ ಡ್ಯಾಮೇಜಿನಿಂದ ರಸ್ತೆಗಳು ಹಾಳಾಗಿವೆ. ಇದಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕು. ನಮ್ಮ ಜಿಲ್ಲೆ ಬಗ್ಗೆ ಈಗಾಗಲೇ ಒಂದು ಪ್ರಾಜೆಕ್ಟ್ ಮಾಡಿ ಕಳುಹಿಸಿದ್ದು ಅದರ ಪ್ರಕಾರ ಹಣ. ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಹೇಮಾವತಿ ನದಿಯ ನೀರು ಉಕ್ಕಿದ್ದು, ಭದ್ರಾ ನದಿಯಲ್ಲಿ ಫ್ಲಡ್ ಬಂದಿದ್ದು ವಾರಗಟ್ಟಲೆ ನೀರು ನಿಂತು ಭತ್ತ ಕೊಳೆತಿದೆ. ಅದಕ್ಕೆ ಸಾಕಷ್ಟು ಪರಿಹಾರವನ್ನು ಕೊಟ್ಟಿಲ್ಲ. ಪರಿಹಾರ ಎಂದರೆ 1 ಎಕರೆ ಇರಲಿ, ಅರ್ಧ ಎಕರೆ ಇರಲಿ ಕೇವಲ 300 ರೂಪಾಯಿ, 500 ರೂಪಾಯಿ ಕೊಡುತ್ತಿರುವುದು ಸರಿಯಲ್ಲವೆಂದು ನಾನು ನಿನ್ನೆಯೇ ಹೇಳಿದ್ದೇನೆ. ಇದರಿಂದ ಯಾವ ರೈತರಿಗೆ ಸಹಾಯವಾಗುತ್ತದೆ? ಇವತ್ತು ಎಷ್ಟು ಬೆಳೆ ನಷ್ಟವಾಗಿದೆ ಅದಕ್ಕೆ ತಕ್ಕ ಪರಿಹಾರವನ್ನು ಕೊಡಬೇಕೆಂದು ಒತ್ತಾಯಪೂರ್ವಕ ಮನವಿ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ :– ಈಗ ಕಂದಾಯ ಮಂತ್ರಿಗಳಿಂದ ಉತ್ತರ.

(ಹಲವಾರು ಸದಸ್ಯರು ಎದ್ದುನಿಂತು ತಮಗೂ ಅವಕಾಶ ಕೊಡಬೇಕೆಂದು ಕೇಳಿಕೊಂಡರು)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– 2 ಗಂಟೆಗೆ ಖಾಸಗೀ ಕಾರ್ಯಕಲಾಪದ ಚರ್ಚೆ ಇದೆ. ಅಷ್ಟರೊಳಗೆ ಉತ್ತರಿಸಲು ನನಗಿರುವುದು ಕೇವಲ 45 ನಿಮಿಷ.

ಛೇರ್ಮನ್ :– ಕೊನೆಯಲ್ಲಿ ಕ್ಲಾರಿಫಿಕೇಷನ್ಸ್‌ಗೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಲೆನಾಡು ಪ್ರದೇಶದ ಕಡೆಯಿಂದ ನಾನು ಮಾತನಾಡಬೇಕಾಗಿದೆ.

ಛೇರ್ಮನ್ :– ಮೋಟಮ್ಮನವರು ನಿಮ್ಮ ಜಿಲ್ಲೆಯನ್ನೂ ಸೇರಿಸಿ ಮಾತನಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :– ಎಲ್ಲರಿಗೂ ಐದೈದು ನಿಮಿಷ ಕಾಲಾವಕಾಶ ಕೊಟ್ಟರೆ ಎಲ್ಲರೂ ಬೇಗ ಮಾತನಾಡುತ್ತೇವೆ.

ಛೇರ್ಮನ್ :– ಖಾಸಗೀ ಕಾರ್ಯಕಲಾಪಕ್ಕೂ ನಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಉತ್ತರದ ನಂತರ ತಮಗೆ ಕ್ಲಾರಿಫಿಕೇಷನ್ಸ್‌ಗೆ ಅವಕಾಶ ಮಾಡಿಕೊಡೋಣ. ಈಗ ಮಂತ್ರಿಗಳಿಂದ ಉತ್ತರ.

ಕಂದಾಯ ಮಂತ್ರಿಗಳಿಂದ ಉತ್ತರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :— ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುಮಾರು 19 ಜನ ಶಾಸಕರು ಈವೊಂದು ಬರಗಾಲ ಪರಿಸ್ಥಿತಿಯ ಮೇಲೆ ಮಾತನಾಡಿದ್ದಾರೆ. ಮತ್ತು ಅನೇಕ ಸಲಹೆಗಳನ್ನು ಮತ್ತು ಹಲವಾರು ಟೀಕೆಗಳನ್ನು ಕೂಡ ಮಾಡಿದ್ದಾರೆ. ಸರ್ಕಾರ ಈ ಬರಗಾಲ ಕಾಮಗಾರಿಯ ಬಗ್ಗೆ ಮಾಡಿದಂತಹ ಕೆಲಸ ಕುಡಿಯುವ ನೀರು ಅದರ ಬಗ್ಗೆ ಮತ್ತು ಜಾನುವಾರುಗಳಿಗೆ ಒದಗಿಸತಕ್ಕ ಮೇವು ಅದು ಅಲ್ಲದೆ ಪರ್ಮನೆಂಟಾಗಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಹೀಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಇಲಾಖೆಯ ಪಾತ್ರ ಬಹಳ ಸೀಮಿತವಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಆದರಲ್ಲೂ ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದಮೇಲೆ ಅವುಗಳು ಜಿಲ್ಲೆಗಳ ಆಡಳಿತವನ್ನು ವಹಿಸಿಕೊಂಡ ಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟ್ ಏನು ಹಿಂದೆ ಬರಗಾಲ ಕಾಮಗಾರಿಗಳನ್ನು ಮಾಡತಕ್ಕ ರೀತಿ ನೀತಿ ಇತ್ತು. ಇವತ್ತು ಸ್ವಲ್ಪ ಅದರಲ್ಲಿ ಬದಲಾವಣೆಯಾಗಿದೆ. ಏಕೆಂದರೆ ಹಿಂದೆ ಜಿಲ್ಲಾಧಿಕಾರಿಗಳೆಂದರೆ ಜಿಲ್ಲೆಯ ಕ್ಯಾಪ್ಟನ್ ಇದ್ದ ಹಾಗೆ ಇದ್ದರು. ಎಲ್ಲ ಟೀಮ್‌ಗಳ ಮುಖಂಡರಾಗಿದ್ದುಕೊಂಡು ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಟ್ಟಮೇಲೆ ಅವರು ಎಲ್ಲ ಇಲಾಖೆಗಳ ಸಹಕಾರವನ್ನು ತೆಗೆದುಕೊಂಡು ಸಂಪೂರ್ಣವಾದ ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಮಾಡತಕ್ಕ ಪರಿಸ್ಥಿತಿ ಇತ್ತು. ಇವತ್ತು ಏನಾಗಿದೆ ಅಂದರೆ ನಾವು ಕೊಟ್ಟ ಹಣ ಮತ್ತು ಅವರಿಗೆ ಜವಾಬ್ದಾರಿಯನ್ನು ಕೊಟ್ಟರೂ ಕೂಡ ಅವರು ಪುನ: ಜಿಲ್ಲಾಪರಿಷತ್‌ನ ಮುಖಾಂತರವಾಗಲೀ ಲೋಕೋಪಯೋಗಿ ಇಲಾಖೆಯ ಮುಖಾಂತರವಾಗಲೀ ಪಿ.ಹೆಚ್.‌.ೆ. ಇಲಾಖೆಯ ಮುಖಾಂತರವಾಗಲೀ ಕೆಲಸವನ್ನು ಮಾಡಿಸಬೇಕಾಗುತ್ತದೆ ಅನೇಕ ಮಾನ್ಯ ಸದಸ್ಯರುಗಳ ಕಳವಳ ಏನಿತ್ತು ಂದರೆ ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಜಿಲ್ಲಾ ಪರಿಷತ್‌ನವರಿಗೂ ಮತ್ತು ಜಿಲ್ಲಾಧಿಕಾರಿಗಳವರಿಗೂ ಹೊಂದಾಣಿಕೆ ಲ್ಲ ಅದನ್ನು ಸರಿಪಡಿಸಬೇಕು ಹಾಗೆ ಆದಾಗ ಮಾತ್ರ ಜನರಿಗೆ ಸಹಾಯವಾಗುತ್ತದೆಂದು ಹೇಳಿದ್ದಾರೆ. ತಾವು ಆ ಕೆಲಸ ಮಾಡದಿದ್ದರೆ ಇದು ಪುನ: ಗೊಂದಲಮಯ ವಾತಾವರಣವಾಗಿ ಅದರಿಂದ ಯಾರಿಗೂ ಪರಿಹಾರ ಸಿಗುವುದಿಲ್ಲ ಎನ್ನುವ ಮಾತನ್ನು ಅವರು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ನಾನು ಈಗಾಗಲೇ ಸುತ್ತೋಲೆಯನ್ನು ಹೊರಡಿಸಿ ಜಿಲ್ಲಾಧಿಕಾರಿಗಳು ಏನು ಆದೇಶ ಕೊಡುತ್ತಾರೆ ಆ ಆದೇಶವನ್ನು ಪಾಲನೆ ಮಾಡಬೇಕೆಂದು ಹೇಳಿ ಎಲ್ಲ ಡಿಪಾರ್ಟ್‌ಮೆಂಟ್‌ನವರಿಗೆ ಒಂದು ಸರ್ಕ್ಯುಲರ್ ಹೊರಡಿಸಿದ್ದೇನೆ. ಒಂದು ವೇಳೆ ಯಾರಾದರೂ ಜಿಲ್ಲಾಧಿಕಾರಿಗಳು ಕೊಟ್ಟಂತಹ ಆದೇಶವನ್ನು ವೈಲೇಟ್ ಮಾಡಿದರೆ ಅವರು ಹೇಳಿದಂತಹ ಕೆಲಸವನ್ನು ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಅದು ಅಲ್ಲದೆ ಗ್ರಾಮೀಣಾಭಿವೃದ್ಧಿ ಮತ್ತು ಮಂಡಲ ಪಂಚಾಯತಿ ವತಿಯಿಂದ ಕೂಡ ಅಲ್ಲಿ ಡೆವಲಪ್‌ಮೆಂಟ್ ಕಮೀಷನರ್‌ರವರು ಕೂಡ ಈಗಾಗಲೇ ಒಂದು ಸರ್ಕ್ಯುಲರ್ ಹೊರಡಿಸಿ ಜಿಲ್ಲಾಧಿಕಾರಿಗಳು ಏನು ಆದೇಶ ಕೊಡುತ್ತಾರೆ ಬರಗಾಲ ಪರಿಹಾರ ಕೆಲಸಕಾರ್ಯಗಳ ಬಗ್ಗೆ ಅದನ್ನು ಸ್ಟ್ರಿಕ್ ಆಗಿ ಇಂಪ್ಲಿಮೆಂಟ್ ಮಾಡಬೇಕು ಅದನ್ನು ಆಚರಣೆಗೆ ತರಬೇಕೆಂದು ಅವರು ಕೂಡ ಹೇಳಿದ್ದಾರೆ. ನಮ್ಮಲ್ಲಿ ಸುಗಮವಾಗಿ ಆ ಕೆಲಸಗಳು ನಡೆಯಬೇಕು, ಆ ಕೆಲಸಗಳು ಆಗುತ್ತವೆ ಎನ್ನುವ ವಿಶ್ವಾಸ ನನಗಿದೆ. ಮಾನ್ಯ ಏಕಾಂತಯ್ಯನವರು ಮಾತನಾಡುವಾಗ ಮತ್ತು ಅನೇಕ ಸದಸ್ಯರುಗಳು ಮಾತನಾಡುವಾಗ ಒಂದು ಮಾತನ್ನು ಹೇಳಿದ್ದಾರೆ. ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುವಾಗ ಅದರಲ್ಲಿ ಡೀಟೈಲ್ಸ್ ಬರಬೇಕಾಗಿತ್ತು ಅದು ಬಂದಿಲ್ಲವೆಂದು ಹೇಳಿದ್ದಾರೆ ಹಣ ಎಷ್ಟು ಖರ್ಚಾಯಿತು, ಹಣವನ್ನು ಎಷ್ಟು ಬಿಡುಗಡೆ ಮಾಡಿದ್ದಾರೆ, ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ ಅದರಲ್ಲಿ ಎಷ್ಟು ಹಣ ಖರ್ಚಾಯಿತು ಎನ್ನುವ ವಿವರವಾದ ಮಾಹಿತಿಯನ್ನು ಕೊಡದೆ ಕೇವಲ ಸ್ಟೇಟ್‌ಮೆಂಟ್ ಮಾಡಿ 15 ಜಿಲ್ಲೆಗಳಲ್ಲಿ ಬರಗಾಲವಿದೆ ಸುಮಾರು 114 ತಾಲ್ಲೂಕುಗಳಲ್ಲಿ ಬರಗಾಲವಿದೆ ಅದನ್ನು ಮಾತ್ರ ಹೇಳಿದ್ದಾರೆ, ಹಣವನ್ನು ಎಷ್ಟು ಬಿಡುಗಡೆ ಮಾಡಿದ್ದೇವೆ. ಎಷ್ಟು ಹಣ ಖರ್ಚಾಯಿತು, ಯಾವ್ಯಾವ ಬಾಬಿನಲ್ಲಿ ಖರ್ಚು ಮಾಡಿದ್ದಾರೆ ಎನ್ನುತಕ್ಕದ್ದನ್ನು ಹೇಳದೆ ಸುಮ್ಮನೆ ತರಾತುರಿಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಸಂಪೂರ್ಣವಾದ ಮಾಹಿತಿ ನನ್ನ ಹತ್ತಿರ ಇದೆ.ಜಿಲ್ಲಾವಾರು ಕೂಡ ನಾನು ಕೊಡಬಹುದು ಮತ್ತು ತಾಲ್ಲೂಕುವಾರು ಕೂಡ ಮಳೆ ಎಷ್ಟು ಆಗಿದೆ, ಆಗಸ್ಟ್‌ನಲ್ಲಿ ಎಷ್ಟು ಆಯಿತು, ಸೆಪ್ಟೆಂಬರ್‌ನಲ್ಲಿ ನವೆಂಬರ್‌ನಲ್ಲಿ ಎಷ್ಟು ಆಯಿತು ಎನ್ನುವ ಮಾಹಿತಿ ಕೂಡ ಇದೆ. ಆದರೆ, ಸಂಪೂರ್ಣವಾಗಿ ಎಲ್ಲವನ್ನೂ ಓದಬೇಕೆಂದು ಹೇಳಿದರೆ,

ಅದರಿಂದ ಸದನದ ಸಮಯ ಕೂಡ ಹಾಳಾಗುತ್ತದೆ. ಆದ್ದರಿಂದ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅವರಿಗೆ ಕೂಡ ಈ ಜಿಲ್ಲೆಗಳ ಪರಿಸ್ಥಿತಿ ಗೊತ್ತಿದೆ. ಅದನ್ನು ತಿಳಿದುಕೊಂಡು ನಾವು ಏನು ಪರಿಹಾರ ಕೊಡಬಹುದು ಎಂಬುದರ ಬಗ್ಗೆ ಏಕೆಂದರೆ ಆ ಭಾಗದವರಿಗೆ ಪರಿಸ್ಥಿತಿ ಗೊತ್ತಿರುವುದರಿಂದ, ನಾವು ಇದನ್ನು ತಿಳಿದುಕೊಂಡು ಹೇಳಬೇಕೆಂದು ಚರ್ಚೆಗೆ ಅವಕಾಶ ಮಾಡಿ ಮೊದಲೇ ಕೊಟ್ಟಿದ್ದೇವೆ. ಈಗ ಯಾವ್ಯಾವ ಜಿಲ್ಲೆಗೆ ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಈ ಬರಗಾಲ ಕಾಮಗಾರಿಗಾಗಿ ಕೇಂದ್ರ ಸರ್ಕಾರದವರು 27 ಕೋಟಿ ಮಾತ್ರ ಎಂದು ಒಂದು ಸೀಲಿಂಗ್ ಅನ್ನು ಹಾಕಿದ್ದಾರೆ. ಹಿಂದೆ ಏನು ಆಗುತ್ತಿತ್ತು ಅಂದರೆ ನಾವು ಮೆಮೊರೆಂಡಮ್ ಅನ್ನು ಕೊಡುತ್ತಿದ್ದವು. ಶ್ರೀ ಅಟ್ಟೂರ್ ಅವರು ಮತ್ತು ಶ್ರೀ ನಾಗಮಾರಪಲ್ಲಿ ಅವರು ಕೂಡ ಹೇಳಿದರು. ನೀವು ಏಕೆ ಕೇಂದ್ರ ಸರ್ಕಾರಕ್ಕೆ ಮೆಮೊರೆಂಡಮ್‌ನ್ನು ಕೊಡುವುದಿಲ್ಲ ಎಂದು ಶ್ರೀ ಮಲ್ಲಾರಗೌಡರು ಕೂಡ ಹೇಳಿದರು. ಈಗ ಆ ಪರಿಸ್ಥಿತಿ ಇಲ್ಲ. 9ನೇ ಫೈನಾನ್ಸ್ ಕಮೀಷನ್ ಜಾರಿಗೆ ಬಂದಮೇಲೆ ಅವರು ಒಂದು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅವರು ಸುಮಾರು ಹತ್ತು ವರ್ಷಗಳಲ್ಲಿ ನ್ಯಾಚ್ಯುಲರ್ ಕೆಲಾಮಿಟೀಸ್‌ಗೆ ಏನು ಖರ್ಚಾಗಿದೆ, ಅದನ್ನು ಆವರೇಜ್ ಆಗಿ ತೆಗೆದುಕೊಂಡು ಇವತ್ತಿನ ದಿವಸ ನಮ್ಮ ರಾಜ್ಯಕ್ಕೆ ಒಂದು ಸೀಲಿಂಗ್ ಲಿಮಿಟ್ ಹಾಕಿದ್ದಾರೆ. ಅದರ ಪ್ರಕಾರ ನಮ್ಮ ರಾಜ್ಯಕ್ಕೆ 27 ಕೋಟಿ ರೂಪಾಯಿ ಬರುತ್ತದೆ. 27 ಕೋಟಿಯಲ್ಲಿ ಈಗಾಗಲೇ ನಾವು ಸುಮಾರು 15 ಕೋಟಿಯನ್ನು ರಿಲೀಸ್ ಮಾಡಿದ್ದೇವೆ. ಯಾವ್ಯಾವ ಜಿಲ್ಲೆಗೆ ಎಷ್ಟು ಬರುತ್ತದೆ ಎನ್ನತಕ್ಕದ್ದು ಹೀಗೆ ಇದೆ –

ಬೆಂಗಳೂರು ಅರ್ಬನ್ ಜಿಲ್ಲೆಗೆ ಈ 27 ಕೋಟಿಯಲ್ಲಿ 12 ಲಕ್ಷ ಬಿಡುಗಡೆ ಮಾಡಿದ್ದೇವೆ. ಬೆಂಗಳೂರು ರೂರಲ್ ಜಿಲ್ಲೆಗೆ 27 ಲಕ್ಷ ಬಿಡುಗಡೆ ಮಾಡಿದ್ದು ಅದರಲ್ಲಿ 12 ಲಕ್ಷ ಕುಡಿಯುವ ನೀರು ಪೂರೈಕೆ ಸಲುವಾಗಿ ಇದೆ. ಕೋಲಾರಕ್ಕೆ – ಸುಮಾರು 1 ಕೋಟಿ 36 ಲಕ್ಷ ರೂಪಾಯಿ ಇದ್ದು ಅದರಲ್ಲಿ ಕುಡಿಯುವ ನೀರಿನ ಪೂರೈಕೆಗೆ 50 ಲಕ್ಷ ರೂಪಾಯಿಗಳು. ತುಮಕೂರಿಗೆ – 1 ಕೋಟಿ 16 ಲಕ್ಷ ರೂಪಾಯಿಗಳು ಮತ್ತು ಕುಡಿಯುವ ನೀರಿಗೆ 38 ಲಕ್ಷ 50 ಸಾವಿರ. ಚಿತ್ರದುರ್ಗ – ಸುಮಾರು 82 ಲಕ್ಷ, ಕುಡಿಯುವ ನೀರಿಗೆ 24 ಲಕ್ಷ. ಶಿವಮೊಗ್ಗ – 58 ಲಕ್ಷ ಇದರಲ್ಲಿ ಕುಡಿಯುವ ನೀರಿಗೆ 3 ಲಕ್ಷ. ಮೈಸೂರು – 1 ಕೋಟಿ 31 ಲಕ್ಷ, ಇದರಲ್ಲಿ ಕುಡಿಯುವ ನೀರಿಗೆ 30 ಲಕ್ಷ. ಮಂಡ್ಯ – ಒಟ್ಟಾರೆ 1 ಕೋಟಿ 1 ಲಕ್ಷ, ಇದರಲ್ಲಿ ಕುಡಿಯುವ ನೀರಿಗಾಗಿ 27 ಲಕ್ಷ, ಚಿಕ್ಕಮಗಳೂರು – 61 ಲಕ್ಷ ರೂಪಾಯಿಯಲ್ಲಿ ಕುಡಿಯವ ನೀರಿಗೆ 13 ಲಕ್ಷ ರೂಪಾಯಿಗಳು. ಹಾಸನ – ಒಟ್ಟಾರೆ 1 ಕೋಟಿ 19 ಲಕ್ಷ, ಇದರಲ್ಲಿ ಕುಡಿಯುವ ನೀರಿಗೆ 34 ಲಕ್ಷ ರೂಪಾಯಿಗಳು. ಕೊಡಗು – 8 ಲಕ್ಷ ರೂಪಾಯಿ. ದಕ್ಷಿಣ ಕನ್ನಡ ಜಿಲ್ಲೆ – 38 ಲಕ್ಷ ರೂಪಾಯಿಗಳು. ಗುಲ್ಬರ್ಗಾ – 1 ಕೋಟಿ 61 ಲಕ್ಷ. ಬೀದರ್ – 49 ಲಕ್ಷ. ರಾಯಚೂರು – 58 ಲಕ್ಷ. ಬಳ್ಳಾರಿ – 54 ಲಕ್ಷ. ಬೆಳಗಾಂ – 49 ಲಕ್ಷ. ಬಿಜಾಪುರ – 78 ಲಕ್ಷ. ಧಾರವಾಡ – 1 ಕೋಟಿ 67 ಲಕ್ಷ. ಉತ್ತರ ಕನ್ನಡ – 11 ಲಕ್ಷ. ಒಟ್ಟು ಸುಮಾರು 15 ಕೋಟಿ 29 ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ನ್ಯಾಚರಲ್ ಕೆಮೀಟಿಸ್ ಸಲುವಾಗಿ ಬಿಡುಗಡೆಯಾಗಿದೆ. ಇದಲ್ಲದೆ ಬೇರೆ ಬಾಬ್ತಿನಿಂದ, ಬೇರೆ ಯೋಜನೆಗಳಲ್ಲಿ ಕೂಡ ಸರ್ಕಾರ ಹಣವನ್ನು ಖರ್ಚು ಮಾಡಿದೆ. ಇದು ಒಂದು ಕೇವಲ ನ್ಯಾಚುರಲ್ ಕಲಾಮಿಟಿ ಫಂಡಿನಿಂದ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಸುಮಾರು 28 ಕೋಟಿ ರೂಪಾಯಿ ಈ ರಾಜ್ಯದಲ್ಲಿ ಖರ್ಚಾಗಿದೆ. ಡಿ.ಪಿ.ಎ.ಪಿ.ನಲ್ಲಿ 2 ಕೋಟಿ 58 ಲಕ್ಷ ಖರ್ಚಾಗಿದೆ ಇವೆಲ್ಲಾ ಜನರಿಗೆ ಕೆಲಸ ಕೊಟ್ಟಿರುವ ಹಣ, ಖರ್ಚು ಮಾಡಿರುವುದು ಹೇಳಬೇಕು. ಎಂದೂ ನಾನು ಹೇಳುತ್ತಿದ್ದೇನೆ, ನ್ಯಾಚುರಲ್ ಕಲಾಮಿಟಿ ಫಂಡಿನಿಂದ ಏನು ಕೊಟ್ಟಿದೆ ಮತ್ತು ರೆಗ್ಯುಲರ್ ಫಂಡಿನಲ್ಲಿ ಏನು ಖರ್ಚು ಮಾಡಿದೆ ಎರಡನ್ನು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಬರಗಾಲಕ್ಕೂ ಇದಕ್ಕೂ ಸಂಬಂಧ ಇಲ್ಲ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಾನು ಹೇಳುವುದನ್ನು ಕೇಳಿ, ಅನಂತರ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ. ಡಿ.ಪಿ.ಎ.ಪಿ.ನಲ್ಲಿ ಕೂಡ ಕೆಲಸಕ್ಕೆ ಕೊಟ್ಟಿದ್ದೇವೆ. ಅಗ್ರಿಕಲ್ಚರ್‌ನಲ್ಲಿ 89 ಲಕ್ಷ, ಮೈನರ್ ಇರಿಗೇಷನ್‌ನಲ್ಲಿ

33 ಲಕ್ಷ, ಅಫೋರ್‌ಸ್ಟೇಷನ್‌ನಲ್ಲಿ 92 ಲಕ್ಷ, ಆರ್ಟಿಕಲ್ಚರ್‌ನಲ್ಲಿ 7 ಲಕ್ಷ, ಸಿರಿಕಲ್ಚರ್‌ನಲ್ಲಿ 8 ಲಕ್ಷ, ಹೀಗೆ ಆದರಲ್ಲಿಯೂ ಕೂಡ 35 ಕೋಟಿ ರೂಪಾಯಿ ರೆಗ್ಯುಲರ್ ಫಂಡಿನಿಂದ, ರೆಗ್ಯುಲರ್ ಡಿಪಾರ್ಟ್‌ಮೆಂಟಲ್ ವರ್ಕ್ಸ್ ನಡೆಯಬೇಕೋ, ಇದರಲ್ಲೂ ಕೂಡ ಇವತ್ತಿನದಿವಸ ಇಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಬೆಳಗಾಂ ಜಿಲ್ಲೆಗೆ ಟೋಟಲ್ 49 ಲಕ್ಷ ಇದರಲ್ಲಿ 29 ಲಕ್ಷ ಕುಡಿಯುವ ನೀರಿಗಾಗಿ, ರಿಲೀಫ್ ಅಥವಾ ಆಕ್ಸಿಡೆಂಟ್‌ಗೆ 2 ಲಕ್ಷ, ಫ್ಲಡ್ ರಿಲೀಫ್‌ಹೆಡ್‌ನಲ್ಲಿ 8 ಲಕ್ಷ, ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ 10 ಲಕ್ಷ, ಹೀಗೆ ಟೋಟಲ್ 49 ಲಕ್ಷ. ಹೀಗೆ ಸುಮಾರು ಒಟ್ಟು 50 ಕೋಟಿ ರೂಪಾಯಿವರೆಗೂ ಸರ್ಕಾರ ಎಲ್ಲಾ ಹೆಡ್‌ನಲ್ಲಿ, ಎಂಪ್ಲಾಯ್‌ಮೆಂಟ್ ಪ್ರಾವಿಷನ್‌ಗಾಗಲೀ ಅಥವಾ ಕುಡಿಯುವ ನೀರಿಗಾಗಲೀ, ಇವೆಲ್ಲವನ್ನೂ ರಿಲೀಸ್ ಮಾಡಿದೆ. ಮತ್ತು ಆದರಲ್ಲಿ ಸುಮಾರು 39 ಕೋಟಿ ಇಲ್ಲಿಯವರೆಗೆ, ಈ 50 ಕೋಟಿಯಲ್ಲಿ ಖರ್ಚಾಗಿದೆ. ಒಂದು ಮಾತನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ನ್ಯಾಚುಲರ್ ಕಲಾಮಿಟಿ ಕೆಳಗಡೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಸುಮಾರು 15 ಕೋಟಿ ರೂಪಾಯಿ ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲೆಗಳಲ್ಲಿ ಹೆಚ್ಚಿನ ಹಣ ಖರ್ಚಾಗಿಲ್ಲ, ಇದು ದುರ್ದೈವದ ಸಂಗತಿ. ಇದಕ್ಕೆ, ನಾನು ತಕ್ಷಣ ಸಂಬಂಧಪಟ್ಟ ಡೆಪ್ಯೂಟಿ ಕಮೀಷನರಿಗೆ ಆದೇಶ ನೀಡಿ, ಹಣ ಏಕೆ ಖರ್ಚಾಗಿಲ್ಲ ಎನ್ನತಕ್ಕ ವಿವರಗಳನ್ನು ನಾನು ತೆಗೆದುಕೊಳ್ಳುತ್ತೇನೆ. ಎಷ್ಟು ಹಣ ಖರ್ಚಾಗ್‌ಬೇಕಿತ್ತೋ ಅಷ್ಟು ಹಣವನ್ನು ಇವತ್ತಿನದಿವಸ ಡೆಪ್ಯೂಟಿ ಕಮೀಷನರ್ ಆಗಲೀ, ಜಿಲ್ಲಾಪರಿಷತ್‌ನವರಾಗಲೀ, ಖರ್ಚು ಮಾಡಿಲ್ಲ. ಇದನ್ನು ನಾನು ಎನ್‌ಕ್ವೈರಿ ಮಾಡಿಸಿ, ಯಾರದು ತಪ್ಪಿದೆ, ಏಕೆ ಈ ರೀತಿ ಮಾಡಿದ್ದಾರೆ ಎಂಬುದನ್ನು ನೋಡುತ್ತೇನೆ. ಒಂದು ನಾನು ಒಪ್ಪುತ್ತೇನೆ. ಬರ ಇದೆ, ಕೆಲಸ ಕೊಡಬೇಕೆಂದು ಒಂದು ಕಡೆ ಹೇಳುತ್ತಾರೆ, ಇನ್ನೊಂದು ಕಡೆ ಹಣವನ್ನು ನಮ್ಮ ಅಧಿಕಾರಿಗಳು ಖರ್ಚು ಮಾಡಿಲ್ಲ. ಏಕೆ ಖರ್ಚು ಮಾಡಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೇನೆ. ಆದರೆ ಇದು ಏನು ತೋರಿಸುತ್ತದೆ? ಹೆಚ್ಚಿನ ಆಸಕ್ತಿಯನ್ನು ನಮ್ಮ ಜಿಲ್ಲಾಧಿಕಾರಿಗಳು ಆಗಲಿ ಮತ್ತು ಜಿಲ್ಲಾ ಪರಿಷತ್ತುಗಳು ಆಗಲಿ ವಹಿಸಿಲ್ಲ ಎನ್ನತಕ್ಕಂಥಾದ್ದು ನನ್ನ ಹತ್ತಿರ ಇರತಕ್ಕ ಅಂಕಿಸಂಖ್ಯೆಗಳಿಂದ ಗೊತ್ತಾಗುತ್ತದೆ. ಆಮೇಲೆ ಇದು ನಿಮ್ಮ ಕೆಲಸ ನೀವು ಮಾಡಬೇಕು ನಾವು ಮಾಡಬೇಕು ಎಂದು ಹೇಳತಕ್ಕಂಥಾದ್ದು ಅಲ್ಲ. ಇದು ಎಲ್ಲರ ಕೆಲಸ ಇದೆ. ನಾವು ಬೇರೆ ನೀವು ಬೇರೆ ಅಲ್ಲ. ನೀವು ಮಾಡಿಲ್ಲ ಎಂದು ದೂಷಣೆ ಮಾಡಬೇಕು. ಅದಕ್ಕೆ ನಾನು ಏನೋ ಒಂದು ಸಮಾಧಾನಕರವಾದ ಉತ್ತರ ಕೊಡಬೇಕು ಅದು ಅಲ್ಲ ನಾವು ನೀವು ಎಲ್ಲಾ ಸೇರಿ ಜನಗಳ ಕೆಲಸ ಮಾಡಬೇಕೇ ಹೊರತಾಗಿ ನಾವು ಮಾಡಲಿಲ್ಲ ನೀವು ಮಾಡಲಿಲ್ಲ ಎಂದು ಹೇಳುವುದು ಸರಿಯಲ್ಲ. ನೀವು ಇದ್ದರೂ ಏನು ಮಾಡುತ್ತೀರಿ ಎನ್ನುವುದು ಗೊತ್ತಿದೆ. ನಾನೇ ಒಂದು ರಿಪೋರ್ಟ್ ಕೊಟ್ಟಿದ್ದೇನೆ. ನಿಮ್ಮ ಸರ್ಕಾರ ಇದ್ದಾಗ. ಆಗ ನಾವು ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಸುತ್ತಾಡಿ ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಟ್ಟು 1985ನೇ ಇಸವಿಯಲ್ಲಿ ಒಂದು ರಿಪೋರ್ಟ್ ಕೊಟ್ಟಿದ್ದೇವೆ. ಆಗ ಶ್ರೀ ಕೌಜಲಗಿಯವರು ಇದ್ದರು, ನಾವು ಆಗ ಒಂದು ರಿಪೋರ್ಟ್ ಕೊಟ್ಟಿದ್ದೇವೆ. ಆವಾಗ ಇದ್ದಿದ್ದು ಇದೇ ಪರಿಸ್ಥಿತಿ. ಈಗಲೂ ಅದೇ ಪರಿಸ್ಥಿತಿ ಆಗಬಾರದು ಎಂದು ಹೇಳಿ ನಾನು ಈಗಾಗಲೇ ಹೇಳಿದ್ದೇನೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಸಂಬಂಧಪಟ್ಟವರು ಯಾರ್ಯಾರು ಇದ್ದಾರೋ ಅವರೆಲ್ಲರಿಗೂ ಕೂಡ ಹೇಳಿದ್ದೇನೆ ಅವರನ್ನು ಫುಲ್ ಆಫ್ ಮಾಡಬೇಕು ಒಳ್ಳೆಯ ಕೆಲಸ ಮಾಡಬೇಕು ಎಂದು ನಾನು ಈ ಸದನದ ಮುಖಾಂತರ ಎಲ್ಲಾ ಅಧಿಕಾರಿಗಳಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಅದರಲ್ಲಿ ವಿಶೇಷವಾಗಿ ಖರ್ಚು ಆಗಿಲ್ಲ ಎನ್ನತಕ್ಕಂಥಾದ್ದು ಅಲ್ಲ. ಕೆಲವು ಬಾಬುಗಳಲ್ಲಿ ಖರ್ಚಾಗುತ್ತದೆ. ರೆಗ್ಯುಲರ್ ಫಂಡ್‌ನಲ್ಲಿ ಆದರೆ ಈ ನ್ಯಾಚುರಲ್ ಕಲಾಮೆಟಿಸ್‌ವಿನಲ್ಲಿ ಮಾತ್ರ ಅಷ್ಟು ಆಸಕ್ತಿ ವಹಿಸಿಲ್ಲ ಎನ್ನುವ ಮಾತನ್ನು ನಾವು ಒಪ್ಪಿಕೊಂಡರೂ ಕೂಡ ಇನ್ನು ಮೇಲೆ ಇದು ಸುಗಮವಾಗಿ ಒಳ್ಳೆಯ ಕೆಲಸ ನಡೆಯುತ್ತದೆ ಎಂದು ನಮ್ಮ ಅಪೇಕ್ಷೆ. ಈ ಮೂಲಕ ನಾನು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :— ಎಷ್ಟು ಖರ್ಚಾಗಿದೆ ಅಂಕಿಅಂಶಗಳನ್ನು ಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :— ನಾನು ಆಗಲೇ ಹೇಳಿದ್ದೇನೆ. 50 ಕೋಟಿ ರೂಪಾಯಿಗಳಲ್ಲಿ 39 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಎಲ್ಲಾ ಸೇರಿ, ನಾಳೆ ನಿಮ್ಮ ಸರ್ಕಾರ ಬಂದರೂ ಅದೇ ಮಾಡುವುದು.

ಮಾನ್ಯ ಜಾಲಪ್ಪನವರಿಗೆ ಮತ್ತು ಏಕಾಂತಯ್ಯನವರಿಗೂ ಗೊತ್ತಿದೆ. ಒಂದು ವೇಳೆ ನ್ಯಾಚುರಲ್ ಕಲಾಮಿಟೀಸ್‌ನಲ್ಲಿ ಹಣ ಇಲ್ಲದಿದ್ದರೆ ಒಂದು ವೇಳೆ ಅಲ್ಲಿ ಏನು ಮಾರ್ಜಿನಲ್ ಮನಿ ಎಂದು 5 ಕೋಟಿ ಅಥವಾ 10 ಕೋಟಿ ಇಟ್ಟಿರುತ್ತಾರೋ ಅದನ್ನು ಕೂಡ ಖರ್ಚು ಮಾಡಿಲ್ಲ. ಬೇರೆ ನಾರ್ಮಲ್ ಫಂಡ್ ಏನು ಇರುತ್ತದೆಯೋ ಬೇರೆ ಪ್ರಾಜೆಕ್ಟ್ ಏನು ಇದೆಯೋ ಅದು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಅದನ್ನು ಕಡಿತ ಮಾಡಿ ಈ ಕೆಲಸವನ್ನು ನಿಲ್ಲಿಸಿ ಜನಗಳಿಗೆ ನೀರು ಕೊಡಬೇಕು, ಎಂಪ್ಲಾಯ್‌ಮೆಂಟ್ ಕೊಡಬೇಕು ಜಾನುವಾರುಗಳಿಗೆ ಫಾಡರ್ ಕೊಡಬೇಕೆಂದು ಮಾಡಿರುತ್ತಾರೆ. ಅದೇ ರೀತಿ ನಾವು ಕೂಡ ಮಾಡುತ್ತೇವೆ. ಈ 27 ಕೋಟಿ ರೂಪಾಯಿಗಳು ಮುಗಿದರೂ ಕೂಡ ಮುಂದೆ ತೊಂದರೆ ಬಂದರೆ ಖರ್ಚು ಮಾಡೋಣ. ಈಗ ಫೆಬ್ರವರಿ ನಂತರ ನೀರಿನ ಪರಿಸ್ಥಿತಿ ಇನ್ನೂ ಹೆಚ್ಚು ಗಂಭೀರ ಆಗಬಹುದು. ಆ ಪರಿಸ್ಥಿತಿ ಬಂದಾಗ ಸರ್ಕಾರ ಬೇರೆ ಎಲ್ಲಾ ಕೆಲಸಗಳನ್ನು ಸ್ಥಗಿತ ಮಾಡಿ ಜನರ ಜಾನುವಾರುಗಳನ್ನು ಬದುಕಿಸಲು ಸರ್ವ ಪ್ರಯತ್ನ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಿತ್ತೇನೆ. ಹಣ ಎಲ್ಲಿಂದ ತರುತ್ತೀರಿ ಎಂದು ಕೇಳಬಹುದು ಹಣ ಎಲ್ಲಿಂದಲಾದರೂ ತರಬೇಕಾಗುತ್ತದೆ. ಇನ್ನೊಂದು ಫ್ಯಾಮಿನ್ ಎಂದು ತಾವು ಏತಕ್ಕೆ ಡಿಕ್ಲೇರ್ ಮಾಡಿಲ್ಲ ಎಂದು ಮಾನ್ಯ ನಂಜುಂಡಸ್ವಾಮಿಯವರು ಕೇಳಿದರು. ಅವರು ಒಂದು ಗೈಡ್‌ಲೈನ್ ಸಹ ಕೊಟ್ಟಿದ್ದಾರೆ. ನಾನು ಅದನ್ನು ಓದಿದೆ. ಆ ಸ್ಟಡೀ ಟೀಮ್ ಗೈಡ್‌ಲೈನ್ ಕರ್ನಾಟಕ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿ ಬಹುಶಃ ಯಾರೂ ಒಪ್ಪಿಕೊಂಡಿಲ್ಲ ಎಂದು ನನಗನಿಸುತ್ತದೆ.

ಪ್ರೊ. ನಂಜುಂಡಸ್ವಾಮಿ :– ನಾನು ಮಾತನಾಡುವಾಗ ಹೇಳಿದೆ. ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯವು ಇದನ್ನು ಅನುಷ್ಠಾನಕ್ಕೆ ತರಲಿಲ್ಲ ಇಡೀ ದೇಶದಲ್ಲಿಯೇ ಒಂದು ಕುತಂತ್ರ ನಡೆಯುತ್ತಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ನಾನು ಏತಕ್ಕೆ ಹೇಳಿದೆ ಎಂದರೆ ಗೈಡ್‌ಲೈನ್ ಪ್ರಕಾರ ಹಿಂದೆ ಯಾರಾದರೂ ಮಾಡಿದ್ದಾರೋ ಮಾಡಿದ್ದರೆ ಏನು ರಿಲೀಫ್ ಸಿಕ್ಕಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ನಾನು ವಿಚಾರ ಮಾಡಿದೆ, ಆದರೆ ಅದು ಆಗಲಿಲ್ಲ. ಆಮೇಲೆ ಕೇಂದ್ರ ಸರ್ಕಾರಕ್ಕೆ ಮೆಮೋರಂಡಮ್ ಕೊಡುವುದರಲ್ಲಿ ನಿಧಾನ ಮಾಡಿದಿರಿ ಆದಕ್ಕೆ ಅವರು ಒಪ್ಪಲಿಲ್ಲ ಎನ್ನತಕ್ಕಂಥ ದೂರು ಕೂಡ ಬಂತು. ನಾವು ಕೇಂದ್ರ ಸರ್ಕಾರಕ್ಕೆ ಮೆಮೋರಂಡಮ್ ಕಾಲಕ್ಕೆ ಸರಿಯಾಗಿ ಕೊಟ್ಟರೂ ಸಹ ನಮಗೆ ಹಣ ಬಿಡುಗಡೆ ಯಾವ ರೀತಿಯಿಂದ ಮಾಡಿದರು ಎನ್ನತಕ್ಕಂಥಾದ್ದನ್ನು ತಮಗೆ ಹೇಳುತ್ತೇನೆ. 1985–86ರಲ್ಲಿ ನ್ಯಾಚುರಲ್ ಕೆಲಾಮಿಟಿ ಕೆಳಗೆ ಸೆಂಟ್ರಲ್ ಗೌರ್ನಮೆಂಟಿನವರಿಗೆ ನಾವು ಕೇಳಿದ್ದು 511 ಕೋಟಿ, ಆದರೆ ಸಿಕ್ಕಿದ್ದೆಷ್ಟು? 62 ಕೋಟಿ ರೂಪಾಯಿಗಳು. 86–87ರಲ್ಲಿ 88 ಕೋಟಿ ರೂಪಾಯಿ ಕೇಳಿದ್ದೇವೆ ಸಿಕ್ಕಿದ್ದು 50 ಕೋಟಿ ರೂಪಾಯಿ. 87–88ರಲ್ಲಿ 256 ಕೋಟಿ ರೂಪಾಯಿ ಕೇಳಿದ್ದೇವೆ, 46 ಕೋಟಿ ಮಾತ್ರ ಸಿಕ್ಕಿದೆ, 88–89ರಲ್ಲಿ 285 ಕೋಟಿ ರೂಪಾಯಿ ಕೇಳಿದ್ದೇವೆ, ಕೇವಲ 15 ಕೋಟಿ ಸಿಕ್ಕಿದ್ದು. 89–90ರಲ್ಲಿ 90 ಕೋಟಿ ಕೇಳಿದ್ದೇವೆ 10 ಕೋಟಿ ಮಾತ್ರ ಸಿಕ್ಕಿದೆ. ಆಗ ನಾವು ಆವರೇಜ್ ತೆಗೆದುಕೊಂಡರೂ ನಾವು ಎಷ್ಟು ಕೇಳುತ್ತೇವೆಯೋ ಅದರಲ್ಲಿ 10 ಪರ್‌ಸೆಂಟ್ ಅಥವಾ 5 ಪರ್‌ಸೆಂಟ್‌ಗಿಂತಾ ಜಾಸ್ತಿ ಬರುತ್ತಿಲ್ಲ. ಅದಕ್ಕಾಗಿ 9ನೇ ಫೈನಾನ್ಸ್ ಕಮೀಷನ್‌ನಲ್ಲಿ ಒಂದು ಗೈಡ್ ಲೈನ್ ಹಾಕಿದ್ದಾರೆ. ಏನೆಂದರೆ,

'The present arrangement for financing relief expenditure should be replaced by a new one where greater autonomy, accountability and responsibility are placed upon the States and they are provided adequate means and where with that to carry out the same. Once this is done State would be expected to follow the path of self-reliance and would not have to look upon Centre. This would also be in conformity with the views of previous Commissions and the Constitutional position that the primary responsibility for relief is that of the States. We propose to replace the present scheme involving the margin money.....

ನಮಗೆ ಸೀಲಿಂಗ್ ಫಿಕ್ಸ್ ಮಾಡಿದ್ದು 27 ಕ್ರೋರ್ಸ್. ಮುಂದೆ ಅವರು ಇದನ್ನು

'The provision of States memorandum, visit of Central teams etc., by a scheme which is qualitatively different in the sense that generation of funds are placed at the disposal of their States and they are expected to look after this and also of the situtaion. We have taken average of actual ceiling of expenditure approved during the last 10 years ending in 1988-89 and rounded it of the nearest point. That has completely changed the concept of marigin money followed hitherto. On this basis correct average of all the States taken together put at Rs.804 crores - that for the entire country. The other procedure of the scheme would be common...

ಆ ಪ್ರೊಸೀಜರ್ ಅವರು ಹೇಳಿದ್ದಾರೆ. ಅದಕ್ಕೆ ನಾನು ಹೋಗುವುದಿಲ್ಲ. ಈಗ ಮೆಮೊರೆಂಡಮ್ ಕೊಡುವ ಅವಶ್ಯಕತೆ ಇಲ್ಲ. ನಾವು ಮೆಮೊರೆಂಡಮ್ ಕೊಟ್ರೆ ಕೇಂದ್ರ ಸರ್ಕಾರದವರು ಕೇಳುವುದಿಲ್ಲ. ಏಕೆಂದರೆ 9ನೇ ಫೈನಾನ್ಸ್ ಕಮಿಷನ್ ರಿಪೋರ್ಟ್ ಪ್ರಕಾರ ನಮಗೆ ಮಿತಿ ಹಾಕಿದ್ದಾರೆ. 27 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಬಹುದು, ಒಂದು ವೇಳೆ ಇನ್ನೂ ಸೀರಿಯಸ್ ಸಿಚುಯೇಷನ್ ಇದೆಯೆಂದರೆ ಮತ್ತೆ ನಾವು ಪರ್ಸ್ಯೂ ಮಾಡಿದರೆ ನೆಕ್ಸ್ಟ್ ಇಯರ್ ಏನು ಗ್ರ್ಯಾಂಟ್ ಕೊಡುತ್ತಾರೋ ಅದರಲ್ಲಿ ಅಂದರೆ 27 ಕೋಟಿ ರೂಪಾಯಿಗಳ ನಾಲ್ಕನೇ ಒಂದರಷ್ಟು ಹಣ ರಿಲೀಸ್ ಮಾಡಬಹುದೆಂದು ಅದಕ್ಕೂ ಹೆಚ್ಚಿಗೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಗೈಡ್‌ಲೈನ್ ಹಾಕಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಇನ್ನೂ ಹೆಚ್ಚಿನ ಹಣ ತರುವುದಕ್ಕೆ ಮೆಮೊರೆಂಡಮ್ ಕೊಡಬಹುದಾಗಿತ್ತೆಂದು ಅನೇಕ ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ, ಅದು ಈ ಹೊಸ ಪದ್ಧತಿಯ ಅನುಸಾರವಾಗಿ ಬರುವುದಿಲ್ಲ. ನಮ್ಮ ಇತಿಮಿತಿಯೊಳಗೇ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ನಮ್ಮ ಕೆಲಸದಲ್ಲಿ ದೊಡ್ಡ ದೊಡ್ಡ ಕೆಲಸಕಾರ್ಯಗಳನ್ನು ನಿಲ್ಲಿಸಿ ಬಡವರಿಗೆ ಸಹಾಯ ಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇದು ಒಂದು ಕಡೆ, ಎರಡನೆಯದಾಗಿ ಹೇಳುವುದಾದರೆ ಈಗಿನ ಪರಿಸ್ಥಿತಿಯಲ್ಲಿ ರೋಡುಗಳ ಕೆಲಸ, ಟ್ಯಾಂಕುಗಳ ಕೆಲಸ, ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸಬಹುದೇ ಹೊರತು ದೊಡ್ಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಅಧ್ಯಕ್ಷರೇ, ನಾನು ಮತ್ತು ನನ್ನ ಡಿಪಾರ್ಟ್‌ಮೆಂಟ್ ಪಿಕ್ಚರ್‌ಗೆ ಬರುವುದು ಯಾವಾಗೆಂದರೆ ಸ್ಕೇರ್‌ಸಿಟಿ ಬಂದಾಗ ಮಾತ್ರ. ಆಗ ನನ್ನನ್ನು ನೆನಪಿಸಿಕೊಳ್ಳುತ್ತಾರೆ, ಬಯ್ಯುತ್ತಾರೆ, ಇಲ್ಲವೆಂದರೆ ನನ್ನನ್ನು ಕೇಳುವುದೇ ಇಲ್ಲ.

ಶ್ರೀ ವೆಂಕಟೇಶ್: ನಿಮ್ಮ ಹೆಸರು ಶಾಶ್ವತವಾಗಿ ಇರಲೆಂದು.

ಈ ನ್ಯಾಚುರಲ್ ಕೆಲಾಮಿಟೀಸ್‌ನಿಂದಾಗಿ ಏನಾಗಿದೆ ಅಂದರೆ, ಇಲ್ಲಿ ನಮ್ಮ ಕೆಲಸ ಫಸ್ಟ್ ಏಡ್ ಚಿಕಿತ್ಸೆ ಇದ್ದ ಹಾಗೆ. ಏನಾದರೂ ಅಪಘಾದವಾದಾಗ ತತ್‌ಕ್ಷಣವೇ ಅದಕ್ಕೆ ಬ್ಯಾಂಡೇಜ್ ಹಾಕುವುದು, ಸರ್ಜರಿ ಮಾಡುವುದು ಮುಂತಾಗಿ ತುರ್ತು ಉಪಚಾರ ಮಾಡುವಂತಾದ್ದು. ಅಗತ್ಯವಿದ್ದರೆ ಸ್ಪೆಶಲ್‌ವಾರ್ಡ್‌ಗೆ ಕಳುಹಿಸಿಕೊಡುವುದು, ಯಾವ ಕಾಯಿಲೆ ಇದೆ ಎಂದು ನೋಡಿ ಸಂಬಂಧಪಟ್ಟ ವಾರ್ಡ್‌ಗೆ ಕಳುಹಿಸಿಕೊಡುವುದು ಮುಂತಾಗಿ ತುರ್ತು ಚಿಕಿತ್ಸೆ ನೀಡುವ ರೀತಿಯಲ್ಲಿ ಈ ನಮ್ಮ ಕಂದಾಯ ಇಲಾಖೆ ಕೂಡ ತುರ್ತು ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ನಿಮಗೆ ಟ್ಯಾಂಕ್ ಬೇಕು ಎಂದಾಗ ನಾವು ಮೈನರ್ ಇರಗೇಶನ್‌ರವರನ್ನು ರಿಕ್ವೆಸ್ಟ್ ಮಾಡುತ್ತೇವೆ. ಇವೊತ್ತು ನಮ್ಮಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಇದೆ. ಅಂತೆಯೇ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ಇಂಥ ಕೆಲಸ ಕಾರ್ಯಗಳು ಶಾಶ್ವತವಾಗಿ ರಾಜ್ಯದಲ್ಲಿ ಬರಗಾಲ ಪರಿಹಾರ ಮಾಡಬೇಕೆಂಬ ಒಂದು ಒಳ್ಳೆಯ ದೃಷ್ಟಿಯಿಂದ. ಹಿಂದಿನ ಎಲ್ಲಾ ಸರಕಾರಗಳೂ ಕೂಡ ಇದೇ ದೃಷ್ಟಿಯಿಂದ ಕೆಲಸವನ್ನು ಮಾಡಿವೆ. ಮಾನ್ಯಶ್ರೀಯವರುಗಳಾದ ನಿಜಲಿಂಗಪ್ಪನವರಾಗಲಿ, ಗುಂಡುರಾವ್‌ರವರಾಗಲಿ, ರಾಮಕೃಷ್ಣಹೆಗಡೆವರಾಗಲಿ, ವೀರೇಂದ್ರ ಪಾಟೀಲರವರಾಗಿರಲಿ, ಕಡಿದಾಳ್ ಮಂಜಪ್ಪನವರಾಗಿರಲಿ, ಬಿ.ಡಿ.ಜತ್ತಿಯವರಾಗಿರಲಿ, ಯಾರೇ ಇದ್ದರೂ, ಯಾರೇ ಆಡಳಿತ ಮಾಡಿದ್ದರೂ ಎಲ್ಲರ ಉದ್ದೇಶವೂ ಒಂದೇ ಆಗಿತ್ತು. ಎಲ್ಲರೂ ರೈತರಿಗೆ ಶಾಶ್ವತ ಪರಿಹಾರ ದೊರಕಬೇಕೆಂಬ ಉದ್ದೇಶದಿಂದ ಕಾರ್ಯ ನಿರ್ವಹಣೆ ಮಾಡಿದ್ದರು. ಕರ್ನಾಟಕ ರಾಜ್ಯ ಸರಕಾರವು ಹಿಂದಿನಿಂದಲೂ ಪವರ್ ವಿಚಾರದಲ್ಲಾಗಲೀ, ಇರಿಗೇಷನ್ ವಿಚಾರದಲ್ಲಾಗಲೀ, ಆದ್ಯತೆಯನ್ನು ಕೊಟ್ಟುಕೊಂಡು ಬಂದಿದೆ. ನಮ್ಮ ಶಕ್ತಿಗೆ ಅನುಸಾರವಾಗಿ ಅದನ್ನು ನಾವೂ ಕೂಡ ಕೊಟ್ಟಿದ್ದೇವೆ. ಕೆಲವು ಸರಕಾರಗಳು ಹೆಚ್ಚು ಕೊಟ್ಟಿರಬಹುದು, ಕೆಲವು ಕಡಿಮೆ

ಕೊಟ್ಟಿರಬಹುದು. ಇವೊತ್ತು ನಾವು ಇರಿಗೇಷನ್‌ಗಾಗಿ 300 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದೇವೆ. ಶಾಶ್ವತ ಪರಿಹಾರ ಸಿಗಬೇಕೆನ್ನುವ ದೃಷ್ಟಿಯಿಂದ ಹೆಚ್ಚು ಹೆಚ್ಚಾಗಿ ಒಳ್ಳೆಯ ಕೆಲಸಗಳು ಈ ಕುರಿತು ಆಗಬೇಕು. ಇರಿಗೇಷನ್ ಪ್ರಾಜೆಕ್ಟ್ಸ್ ಪೂರ್ಣಗೊಳ್ಳಬೇಕೆಂಬ ದೃಷ್ಟಿಯಿಂದ ಎಲ್ಲಾ ದೊಡ್ಡ ದೊಡ್ಡ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಹಣವನ್ನು ಖರ್ಚು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಈಗ 1985 ರಿಂದ 1990ರ ವರೆಗೆ ಎಷ್ಟು ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರವಾಗಿ ಕೊಟ್ಟಿದ್ದಾರೆ– ಎಂದು ಹೇಳಿದ್ದೀರಿ. ಮೊದಲು ಅಡ್ವಾನ್ಸ್ ಪ್ಲಾನಿಂಗ್ ಎಸ್ಟಿಮೇಟ್ ಎಂದು ಕೊಡುತ್ತಾ ಇದ್ದರು. ಇವೊತ್ತು ನಿಮಗೆ ಕಲಾಮಿಟಿಸ್‌ಗೆ 27 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆ 27 ಕೋಟಿಗಳಲ್ಲಿ ನೀವು ಎಷ್ಟು ಕೋಟಿ ರೂ.ಗಳನ್ನು ಡ್ರಾ ಮಾಡಿದ್ದೀರಿ? ಕೇಂದ್ರ ಸರಕಾರದವರು ಎಷ್ಟು ಕೊಟ್ಟಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:– ಇದರಲ್ಲಿ ನಮ್ಮದ್ದು 25 ಪರ್‌ಸೆಂಟ್, ಅವರದ್ದು 75 ಪರ್‌ಸೆಂಟ್ ಇರುತ್ತದೆ ಅದರಲ್ಲಿ ಈಗಾಗಲೇ ನಾವು 15 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಕೇಂದ್ರ ಸರಕಾರದವರು ಈ ಬಗ್ಗೆ ಅಲೋಕೇಶನ್ ಮಾಡುತ್ತಾರೆ. ಅದು ಮಾಡಲೇಬೇಕಾಗುತ್ತದೆ. ನೀವು ಖರ್ಚು ಮಾಡಿ, ಮಾಡದೇ ಇರಿ, ನಾವಂತೂ ಖರ್ಚು ಮಾಡಿಯೇ ಮಾಡುತ್ತೇವೆ. 25 ಕೋಟಿ ರೂ.ಗಳು ಅವರಿಂದ ಬಂದಿಲ್ಲ ಅಂದರೂ ಕೂಡ ಅದು ಹಾಗೆಯೇ ಲ್ಯಾಪ್ಸ್ ಆಗುವ ಪ್ರಶ್ನೆಯೇ ಇಲ್ಲ. ಅದಕ್ಕಾಗಿ ಇರುವ ಗೈಡ್‌ಲೈನ್ಸ್‌ನ್ನು ನಾನು ಹೇಳಿದ್ದೇನೆ. ನಮ್ಮ ಹಣವನ್ನು ಕೂಡ ಬಿಡುಗಡೆ ಮಾಡಿದ್ದೇವೆ. ನಮ್ಮ ಪಾತ್ರವಾಗಿ 6–75 ಕೋಟಿ ರೂ.ಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಡೆಪ್ಯುಟಿ ಕಮಿಶನರ್‌ರವರ ಡಿಸ್ಪೋಸಲ್‌ನಲ್ಲಿ ಇದೆ. ಉಳಿದ ಎಲ್ಲಾ ಹಣವೂ ಕೂಡ ಕೇಂದ್ರ ಸರಕಾರದ್ದೇ. ಅವರಿಂದ ಈ ಕುರಿತು ಇರುವ ಬಾಕಿ ಹಣವ ಬರುತ್ತದೆ. ನಿಗದಿತ ಮೊತ್ತಕ್ಕಿಂತ ಹೆಚ್ಚು ಹಣವನ್ನು ನಾವು ಖರ್ಚು ಮಾಡಿದರೂ ಅವರು ಕೊಡುವುದಿಲ್ಲ. ಒಂದು ವೇಳೆ ಕೊಟ್ಟರೂ ಕೂಡ, ಅದರಲ್ಲೂ ನಾಲ್ಕನೇ ಒಂದಂಶವನ್ನು ಮುಂದಿನ ವರ್ಷದ ಪ್ಲಾನ್‌ನಲ್ಲಿ ಕಟ್ ಮಾಡಿ ಕೊಡುತ್ತಾರೆ. ಹೀಗೆ ಶಾಶ್ವತ ಕಾರ್ಯಕ್ರಮಗಳನ್ನು ಹಾಗಿಕೊಳ್ಳತಕ್ಕಂಥಾದ್ದನ್ನು ನಮ್ಮ ರೆಗ್ಯುಲರ್ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರಾಗಲಿ, ಇರಿಗೇಶನ್ ಡಿಪಾರ್ಟ್‌ಮೆಂಟ್‌ನವರಾಗಲೀ, ಪವರ್ ಡಿಪಾಟ್‌ಮೆಂಟ್‌ನವರಾಗಲಿ ಮಾಡುತ್ತಾರೆ. ಆದರೆ ಸದ್ಯಕ್ಕೆ ಕೊಡತಕ್ಕಂಥ ನೀರಿನ ವ್ಯವಸ್ಥೆಯು ಯಾವ ರೀತಿಯಾಗಿ ಇರಬೇಕು? ಜಾನುವಾರುಗಳಿಗೆ ಒದಗಿಸತಕ್ಕಂಥ ಮೇವಿನ ವ್ಯವಸ್ಥೆಯು ಯಾವ ರೀತಿಯಾಗಿ ಆಗಬೇಕು? ಈ ಒಂದು ಜವಾಬ್ದಾರಿಯು ಈ ಪದ್ಧತಿಯಲ್ಲಿ ಇರುತ್ತದೆ. ನಮ್ಮಲ್ಲಿ ಹಣ ಕಡಿಮೆ ಇದ್ದರೂ ಕೂಡ ಈ ಒಂದು ಬಾಬತಿನಲ್ಲಿ ಯಾವುದೇ ಕೆಲಸಗಳನ್ನು ನಾವು ಸ್ಥಗಿತ ಮಾಡಿ ಈ ನೈಸರ್ಗಿಕ ಕೆಲಮಿಟೀಸ್ ಕೆಳಗೆ ಯಾರ್‍ಯಾರು ತೊಂದರೆಗೆ ಈಡಾಗಿದ್ದಾರೆ, ಜಾನುವಾರುಗಳಿಗೆ ಏನು ತೊಂದರೆಯಾಗಿದೆ, ಅಂಥ ಎಲ್ಲಾ ಸಮಸ್ಯೆಗಳನ್ನು ನೀಗಿಸುವಲ್ಲಿ ಎಲ್ಲಾ ಸವಲತ್ತುಗಳನ್ನು ಕೊಡತಕ್ಕಂಥ ಕರ್ತವ್ಯವನ್ನು ನಾವು ಮಾಡುತ್ತೇವೆ. ಇನ್ನು, ಆಣೆವಾರಿ ಪದ್ಧತಿಯು ಸರಿಯಾಗಿಲ್ಲ ಎಂದು ಮಾನ್ಯ ನಂಜುಂಡಸ್ವಾಮಿಯವರು ಹೇಳಿದಹಾಗೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ 64ನೇ ಸೆಕ್ಷನ್‌ನಲ್ಲಿ ಅಡಾಪ್ಟ್ ಮಾಡಿಕೊಂಡಿದ್ದಾರೆ. ಅದರಲ್ಲಿ ರೂಲ್ 147ರಲ್ಲಿ ಏನು ಹೇಳಿದ್ದಾರೆ. ಅಂದರೆ––––

Rule 147 of the Land Revenue Act reads thus:

"When the Deputy Commissioner has ascertained by enquiries that owing to a partial or a total failure or destrction of crops throughout any track on account of drought or any other cause, he shall cause a crop-cutting experiment to be conducted in all the areas in such track in order to determine the average crop yield per acre. The Tashildars should conduct such crop cutting experiement in atleast 5% of the village, the Revenue Inspector in atleast 20% of such villages & the Village Accountant in all the villages in his charge.......

"In order to consider the question of suspension of remission of land revenue".

ಅದು ಮುಂದೆ ಯಾವರೀತಿಯಾಗಿ ಎಕ್ಸೆಂಪ್ಟ್ ಮಾಡಬೇಕು, ಎಂಬ ಬಗ್ಗೆ ಒಂದು ಪದ್ಧತಿಯನ್ನು ಹೇಳಿದ್ದಾರೆ.

"There shall be no collection of suspended land revenue if the average crop-wise yield in the area, the collection is less than 62%. If the average crop-wise yield is less than 25%, there shall be full remission of land revenue; If the average crop-wise yield is 25% and more, there shall be no remission of land revenue."

ಹೀಗೆ ಒಂದು ಪದ್ಧತಿಯು ಮೊದಲಿನಿಂದಲೂ ಬಂದಿದೆ. ಇದರಲ್ಲಿ ಬದಲಾವಣೆ ಆಗಬೇಕೆಂದು ಅನಿಸಿದರೆ ಈಗಾಗಲೇ ನಾನು ಹೇಳಿದ್ದೇನೆ, ಅದಕ್ಕೂ ಒಂದು ಸಮಗ್ರವಾದಂಥ ಚರ್ಚೆಯಾಗಬೇಕಾಗುತ್ತದೆ. ಇದು ನಾವು ಮಾಡಿದಂಥ ಕ್ರೈಟಿರೆಯಾ. ಈ ಬಗ್ಗೆ ರಾಷ್ಟ್ರಲ್ಲಿ ಒಂದೇ ರೀತಿಯ ಸ್ಟಾಂಡರ್ಡ್ ಆಗಬೇಕು. ಅದಕ್ಕಾಗಿ ಮಾನ್ಯ ನಂಜುಂಡಸ್ವಾಮಿಯವರು ಹೇಳಿದರು, ಇದು ಬರಿ ಕರ್ನಾಟಕಕ್ಕೆ ಸೀಮಿತವಲ್ಲ ಎಂದು. ಇಡೀ ದೇಶವೇ ನಮ್ಮ ವಿರುದ್ಧ ಇದೆ ಅದಕ್ಕಾಗಿ ನಮ್ಮ ಗೋಳು ದೇಶದ ವಿರುದ್ಧವಿದೆ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಇಡೀ ದೇಶಕ್ಕೆ ಒಂದೇ ಕ್ರೈಟಿರಿಯಾ ಇಟ್ಟುಕೊಂಡು ಸಹಾಯವನ್ನು ನೀಡುತ್ತಾರೆ. ಹಾಗಾಗಿ ಈ ಒಂದು ಆಣೆವಾರಿ ಪದ್ಧತಿಯ ಇನ್ನೂ ಜಾರಿಯಲ್ಲಿದೆ. ಈ ಮಾತನ್ನು ನಾನು ಮತ್ತು ಎಲ್ಲರೂ ಒಪ್ಪಿಕೊಳ್ಳತಕ್ಕಂಥಾದ್ದು ಆಗಿದೆ. ಇನ್ನು ಸರಕಾರ ನಡೆಸುವವರು ಕೆಲವು ವಿಚಾರಗಳನ್ನು ಡಿಪೆಂಡ್ ಮಾಡಿಕೊಳ್ಳುತ್ತಿರುತ್ತಾರೆ. ಯಾರು ಆಡಳಿತದಲ್ಲಿದ್ದರೂ ಅದೇ ಕೆಲಸವನ್ನು ಮಾಡುತ್ತಾರೆ. ಅನೇಕ ಜನ ವಿಲೇಜ್ ಅಕೌಂಟೆಂಟ್‌ಗಳು ಹಳ್ಳಿಗಳಿಗೆ ಹೋಗುವುದಿಲ್ಲ, ಹೋದರೂ ಕೂಡ ಒಂದೆರಡು ಕಡೆಗಳಲ್ಲಿ ನೋಡಿಕೊಂಡು ಬರೆದುಕೊಂಡು ಬರುತ್ತಾರೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಇದೇ ರಿಪೋರ್ಟ್ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಹೋಗುತ್ತದೆ, ಅದೇ ರಿಪೋರ್ಟ್ ತಹಶೀಲ್ದಾರರಿಗೆ ಮತ್ತು ಮೇಲೆ ಹೋಗತಕ್ಕಂಥವುಗಳು ಆಗಿರುತ್ತವೆ. ಪರಿಸ್ಥಿತಿಯು ಹೀಗಿರುವಾಗ ನಾವು ಇದನ್ನು ಸರಿಯಾಗಿ ಕೊಡಿ ಎಂದು ಹೇಳಬಹುದೇ ಹೊರತು ಇದನ್ನು ಪೂರ್ಣವಾಗಿ ಡಿಸ್‌ಬಿಲೀಫ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಎಲ್ಲೆಲ್ಲಿ ಲೋಪದೋಷಗಳು ಇವೆ ಅವುಗಳನ್ನು ಸರಿಪಡಿಸತಕ್ಕಂಥಾದ್ದು ಆಗಬೇಕು. ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಯಾಗಿ ಮಾಡಬೇಕು. ಲ್ಯಾಂಡ್‌ರೆವಿನ್ಯೂ ಆಕ್ಟ್‌ನಲ್ಲಿ ಸೆಕ್ಷನ್ 147ರಲ್ಲಿ ಏನು ಹೇಳಿದ್ದಾರೆ ಅದನ್ನು ನಾವು ತಿಳಿದುಕೊಂಡು ಅದರ ಪ್ರಕಾರ ನಡೆದುಕೊಳ್ಳಬೇಕು. ಹಳ್ಳಿಗಳಲ್ಲಿ ಖುದ್ದಾಗಿ ಕ್ರಾಪ್‌ಎಕ್ಸ್‌ಪಿರಿಮೆಂಟ್ ಮಾಡಿ ನಿಜವಾಗಿ ಇರತಕ್ಕಂಥ ಒಂದು ರಿಪೋರ್ಟ್‌ನ್ನು ಕೊಡಬೇಕು ಎಂದು ನಾನು ಆದೇಶ ಕೊಡುತ್ತೇನೆ. ಆದೇಶವೂ ಈಗಾಗಲೇ ಇದೆ. ಇದ್ದರೂ ಕೂಡ ಅವರುಗಳು ಫಾಲೋ ಮಾಡುತ್ತಾ ಇಲ್ಲ. ಯಾರಾದರೂ ತಪ್ಪು ರಿಪೋರ್ಟ್‌ನ್ನು ಕೊಟ್ಟರೆ ಅವರ ಮೇಲೆ ಇನ್ನು ಮುಂದೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳ ಬಯಸುತ್ತೇನೆ. ಈ ಮಾತು ಸದನದ ಪ್ರಶ್ನೋತ್ತರ ಕಾಲದಲ್ಲಿ ಕೂಡ ಬಂತು. ಮಾನ್ಯ ಸದಸ್ಯ ಕೊಣ್ಣೂರ್‌ರವರು ಮತ್ತು ಜಿ.ಎಸ್. ಪಾಟೀಲ್‌ರವರು ಹೇಳಿದ್ದರು. ರಿಪೋರ್ಟ್ ಸರಿಯಾಗಿ ಕೊಡುತ್ತಿಲ್ಲ ಎಂದು ದೂರಿದ್ದರು. ಹಿಂದೆ ಸಚಿವರಾಗಿ ಇದ್ದಾಗ ರೋಣ ಮತ್ತು ಧಾರವಾಡ ತಾಲ್ಲೂಕುಗಳಲ್ಲಿ ಸರಿಯಾಗಿ ರಿಪೋರ್ಟ್ ಮಾಡಿಲ್ಲ ಎಂದು ಸದನದಲ್ಲಿ ಗಲಾಟೆ ಮಾಡಿದಾಗ ಅನಂತರ ಅವರು ರೆವಿನ್ಯೂ ಸೆಕ್ರೆಟರಿ ಮತ್ತು ಡವೆಲಪ್‌ಮೆಂಟ್ ಕಮಿಶನರ್‌ರವರನ್ನು ಖುದ್ದಾಗಿ ಕಳುಹಿಸಿದರು. ಅವರೆಲ್ಲೂ ಹೋಗಿ ನೋಡಿ ರಿಪೋರ್ಟ್ ಕೊಟ್ಟಮೇಲೆ ನಮಗೆ ಹಣ ಬಿಡುಗಡೆಯಾಯಿತು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪರಿಸ್ಥಿತಿಯನ್ನು ನಾನು ಅರಿತುಕೊಂಡಿದ್ದೇನೆ. ನಾನೇ ಖುದ್ದಾಗಿ ಕೆಲವು ಜಿಲ್ಲೆಗಳಿಗೆ ಭೇಟಿ ನೀಡುತ್ತೇನೆ. ರೆವಿನ್ಯೂ ಕಾರ್ಯದರ್ಶಿಗಳೂ ಕೂಡ ಕೆಲವು ಕಡೆಗಳಿಗೆ ಹೋಗುತ್ತಾರೆ. ಎಲ್ಲಾ ಜಿಲ್ಲೆಗಳ ಡೆಪ್ಯುಟಿ ಕಮಿಶನರ್‌ಗಳಿಗೆ 15 ದಿವಸಗಳಿಗೆ ಒಂದು ಸಾರಿ ರಿಪೋರ್ಟ್ ಕಳಿಹಿಸುವಂತೆ ಆದೇಶವನ್ನು ನೀಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಮೊನ್ನೆ ನಮ್ಮಲ್ಲಿ ರೆವಿನ್ಯೂ ಕಾರ್ಯದರ್ಶಿಯವರು ಭೇಟಿ ಕೊಟ್ಟಾಗ ಆಣೆವಾರಿ ಪದ್ಧತಿಯ ಬಗ್ಗೆ ನಾನು ಮಾತನಾಡಿದಾಗ ಅವರು ಏನು ಹೇಳಿದ್ದಾರೆ ಅಂದರೆ ಆಣೆವಾರಿ ನಿಗದಿ ಮಾಡುವಾಗ ಮೂರು ಇಲಾಖೆಗಳಾದ ಅಗ್ರಿಕಲ್ಚರ್, ರೆವಿನ್ಯೂ, ಸ್ಟ್ಯಾಟಿಸ್ಟಿಕರ್‌ನವರು ಸೇರಿ ಫಿಕ್ಸ್ ಮಾಡುತ್ತಾರೆ. ಇದರಲ್ಲಿ ಮೂರು ಇಲಾಖೆಗಳವರಲ್ಲಿ ಯಾರಾದರೂ ಕಡಿಮೆ ಮಾಡಿದ್ದರೆ ಅಂಥ ಒಂದು ಆಣೆವಾರಿಯನ್ನು ನಾವು ನಿಗದಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ನಾನು ಹೇಳಿದ ಪರಿಸ್ಥಿತಿ ಹದಗೆಟ್ಟರೆ ಅಥವಾ ಪರಿಸ್ಥಿತಿಯೇ ಸರಿಯಿಲ್ಲವೆಂದಾರೆ ಅದನ್ನು ಪುನರ್‌ಪರಿಶೀಲನೆ ಮಾಡಿ ಇಮ್ಮಿಡಿಯೇಟಾಗಿ ಏನು ಮಾಡಬೇಕೋ ಅದನ್ನು ಮಾಡಲಾಗುವುದು ಏಕೆಂದರೆ ಇದು ಡಿಸ್ಕ್ರಿಮಿನೇಟ್

ಮಾಡುವುದಲ್ಲ. ಒಂದು ಊರಿನಲ್ಲಿ ಎಲ್ಲ ಪಕ್ಷೀಯರೂ ಇರಬಹುದು. ಇಷ್ಟೊಂದು ಸ್ಥಿತಿ ಇದ್ದರೂ ಫ್ಯಾಮಿನ್ ಎಂದು ಏಕೆ ಡಿಕ್ಲೇರ್ ಮಾಡಲಿಲ್ಲ ಇಷ್ಟೆಲ್ಲ ಸ್ಕೇರ್ಸಿಟಿ ಇದ್ದರೂ ಎಂದು ಕೇಳಿದರು. ಈಗಿರುವ ಪರಿಸ್ಥಿತಿಯಲ್ಲಿ ಹಾಗೆ ಮಾಡಲು ಬರುವುದಿಲ್ಲ ಇದನ್ನು ಕೇವಲ ಸ್ಕೇರ್ಸಿಟಿ ಎಂದು ಮಾತ್ರ ಎಲ್ಲ ಒಪ್ಪುತ್ತಾರೆ. ಅದಕ್ಕೆ ನಾರ್ಮ್ಸ್ ಏನಿದೆ ಎಂದರೆ ಅಲ್ಲಿ ನೀರಾವರಿ ಸೌಕರ್ಯ ಇರಬಾರದು ಅಂದರೆ ಅಗ್ರಿಕಲ್ಚರಲ್ ಆಕ್ಟಿವಿಟೀಸ್ ಆ ವರ್ಷ ಆಗಿರಬಾರದು, ವಾಹನ ಸೌಕರ್ಯ ಇರಬಾರದು ಕಮ್ಯುನಿಕೇಷನ್ ಫೆಸಿಲಿಟಿ ಇರಬಾರದು, ಅನ್ನಕ್ಕಾಗಿ ಸಾವಾಗಿದೆ ಎಂದು ವರದಿ ಇರಬೇಕು ಆಮೇಲೆ ಆಹಾರದ ಅಲಭ್ಯತೆ ಇರಬೇಕು ಆಮೇಲೆ ಜಾನುವಾರುಗಳಿಗೆ ಫಾಡರ್ ಇರಬಾರದು ಆಮೇಲೆ ಜನರ ವಲಸೆ ಎದ್ದುಕಾಣಬೇಕು 73ರಲ್ಲಿ ಗುಲ್ಬರ್ಗದಿಂದ ಬೆಂಗಳೂರಿಗೆ ಬಾಂಬೆಗೆ ಗೋವಾಕ್ಕೆ ಹೋದರೆ ಪರಿಸ್ಥಿತಿ ಇತ್ತಲ್ಲ ಆ ತರಹ ಆಗಬೇಕು ಈ ಎಲ್ಲ ನಾರ್ಮ್ಸ್ ಇವೆ. ಇದಿದ್ದರೇನೆ ಮಾಡುವುದು ಎಂದಲ್ಲ. ಈಗ ಕುಡಿಯುವ ನೀರಿನ ಪ್ರಶ್ನೆ ಇದೆ ಬೆಂಗಳೂರು ಜಿಲ್ಲೆಯಲ್ಲಿ ಜಾಲಪ್ಪನವರು ಹೇಳಿದಂತೆ ಮನುಷ್ಯರು ಹೇಗೋ ಬದುಕಬಹುದು ಆದರೆ ಜಾನುವಾರುಗಳಿಗೆ ಕುಡಿಯಲು ನೀರಿಲ್ಲ ಏಕೆಂದರೆ ಕೆರೆಕಟ್ಟೆಗಳೆಲ್ಲ ಒಣಗಿವೆ. ಮೈಸೂರು ಬೆಂಗಳೂರು ಗುಲ್ಬರ್ಗ ಮತ್ತು ಬೆಳಗಾಂ ಡಿವಿಜನ್‌ಗಳಲ್ಲಿ ಜಿಲ್ಲಾ ಪರಿಷತ್ತಿನಲ್ಲಿರುವ ಮೂರು ಕೋಟಿ ಹಣವನ್ನು ಡ್ರಿಂಕಿಂಗ್ ವಾಟರ್‌ಗೆ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಅದಕ್ಕೆ ವಯಲೇಟ್ ಮಾಡಿದರೆ ಆ ಹಣವನ್ನು ವಿಥ್‌ಡ್ರಾ ಮಾಡಿಕೊಳ್ಳಲಾಗುವುದೆಂದು ತಿಳಿಸಿದ್ದು ಆ ಹಣವನ್ನು ಅನಂತರ ಜಿಲ್ಲಾಧಿಕಾರಿಗಳ ಕೈಗೆ ಕೊಟ್ಟು ಅವರ ಕೈಯಿಂದಲೇ ಮಾಡಿಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್ :– ನೀವು ವಿಭಾಗಾಧಿಕಾರಿಗಳಿಗೆ ಆದೇಶ ಕೊಟ್ಟರೆ ಜಿಲ್ಲಾಪರಿಷತ್‌ನವರು ನಾರ್ಮ್ಸ್ ಹೇಳುತ್ತಾರೆ, ಆಕ್ಟ್ ಪ್ರಕಾರವೇ ಅವರು ಮಾಡಬೇಕಾಗುತ್ತದಂತೆ ಅದರ ಬದಲು ಈಗಲೇ ಜಿಲ್ಲಾಧಿಕಾರಿಗಳ ಕೈಯಿಂದ ಮಾಡಿಸುವುದು ಒಳ್ಳೆಯದು.

ಶ್ರೀ ಎಲ್. ಆರ್. ಶಿವರಾಮೇಗೌಡ :– ವೆಂಕಟೇಶ್‌ರವರು ಹೇಳುವುದು ನೂರಕ್ಕೆ ನೂರು ಸತ್ಯ. ನನ್ನ ತಾಲ್ಲೂಕಿನಲ್ಲಿ 50 ಬೋರ್‌ವೆಲ್ ಸ್ಯಾಂಕ್ಷನ್ ಮಾಡಿದರೆ 3 ತಿಂಗಳಿನಿಂದ ಬರೀ 19 ಬೋರ್‌ವೆಲ್ ಕೊರೆದಿದ್ದಾರೆ ಆದ್ದರಿಂದ ಜಿಲ್ಲಾ ಪರಿಷತ್‌ನಲ್ಲಿರುವ ಹಣವನ್ನು ವಾಪಸ್ ತೆಗೆದುಕೊಂಡು ಜಿಲ್ಲಾಧಿಕಾರಿಗಳ ಕೈಗೆ ಕೊಟ್ಟು ಕೆಲಸ ಮಾಡಿಸಬೇಕು.

ಶ್ರೀ ಎಂ.ಪಿ. ವೆಂಕಟೇಶ್ :– ಎಲ್ಲೆಲ್ಲಿ ನೀರಿಲ್ಲವೋ ಆ ಗ್ರಾಮಗಳಲ್ಲಿ ಬೋರ್‌ವೆಲ್ ತೆಗೆಸಿ ಎಂದು ಸರ್ಕ್ಯುಲರ್ ಹೊರಡಿಸಿದರೆ ಅವರು ನಾರ್ಮ್ಸ್ ಪ್ರಕಾರವೇ ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಲು ನೀವು ಡೈರೆಕ್ಷನ್ ಕೊಡಬೇಕಾಗುತ್ತದೆ. ಅದರಂತೆ ಅವರು ಮಾಡಬೇಕಾಗುತ್ತದೆ. ಕಷ್ಟದ ಪರಿಸ್ಥಿತಿಯನ್ನು ಹೇಳಿಕೊಳ್ಳೋಣ ಎಂದು ಎದ್ದುನಿಂತುಕೊಂಡಿದ್ದೇವೆಯೇ ಹೊರತಾಗಿ ಯಾರಿಗೂ ಏನೂ ಬೇಸರವಾಗಿಲ್ಲ. ಅವರನ್ನು ಇನ್ನು ಒಂದು ಗಂಟೆಯಾದರೂ ಬಿಡುವುದಿಲ್ಲ. ಎಲ್ಲಾ ಪ್ರಶ್ನೆಯನ್ನು ಕೇಳಿ ಉತ್ತರವನ್ನು ಪಡೆಯುತ್ತೇವೆ.

(ಗೊಂದಲ)

ಛೇರ್ಮನ್: :– ಇನ್ನು ರಿಪ್ಲೈ ಮುಗಿದಿಲ್ಲ. ರಿಪ್ಲೈ ಮುಗಿದ ನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಈಗಾಗಲೇ ನಾನು ಹೇಳಿದ ಹಾಗೆ ಇದನ್ನು ಅರಿತುಕೊಂಡೆ ಪ್ರತಿಯೊಂದು ಡಿವಿಜನ್‌ನಲ್ಲಿ ಜಿಲ್ಲಾ ಪರಿಷತ್ತಿನ ಫಂಡ್ಸ್‌ನ್ನು ಮೂರು ಮೂರು ಕೋಟಿ ರೂಪಾಯಿ ಡಿವಿಜನ್‌ಗಳಲ್ಲಿ ಇದಕ್ಕಾಗಿ ಇಡಬೇಕು ಎಂದು ಹೇಳಿ ಆದೇಶವನ್ನು ನೀಡಿದ್ದೇವೆ. ಸ್ಕೇರ್‌ಸಿಟಿಯಲ್ಲಿ ನೀರನ್ನು ಕೊಡತಕ್ಕಂಥದ್ದು ಆಗಿತ್ತು. ನಾರ್ಮ್ಸ್ ಎಂದರೆ 50 ಮನೆಗಳು ಇರುತ್ತವೆ. 60 ಮನೆಗಳು ಇರುತ್ತವೆ, ಅಲ್ಲಿಯೇ ಆಗಬೇಕು, ಇಲ್ಲಿಯೇ ಆಗಬೇಕು ಎನ್ನುವ ಪ್ರಶ್ನೆಯೇನೂ ಇಲ್ಲ. ಎಲ್ಲೆಲ್ಲಿ ನೀರನ್ನು ಕೊಡಬೇಕು, ಅದನ್ನು ಕೊಡಬೇಕಾಗುತ್ತದೆ. ಬೇಸಿಗೆಯಲ್ಲಿ ಕೂಡಾ ನೀರು ಸಿಗುವುದಿಲ್ಲ. ಪಟ್ಟಣದಲ್ಲಿಯೂ ಕೂಡಾ ಟ್ರಾನ್ಸ್‌ಪೋರ್ಟೇಷನ್ ಮಾಡಿ ಕೊಡುತ್ತಾರೆ. ಅದನ್ನು ಎಲ್ಲೆಲ್ಲಿದೆ, ಅಂಥದ್ದನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ನಾನು ಡೈರೆಕ್ಷನ್ಸ್‌ನ್ನು ಕೊಡುತ್ತೇನೆ. ಆದರೆ ನಾರ್ಮಲ್ ಆಗಿ ಈ ಕೆಲಸವನ್ನು ಡೆಪ್ಯುಟಿ ಕಮೀಷನರ್‌ರವರು ಮಾಡುತ್ತಾರೆ. ಎಲ್ಲೆಲ್ಲಿ ಈ ರೀತಿಯ ಅವಶ್ಯಕತೆ ಇದೆ, ಈ ಒಂದು ಡ್ರಿಂಕಿಂಗ್ ವಾಟರ್ ಪ್ರಾಬ್ಲಮ್ ಆಗಲಿ, ಫಾಡರ್ ಬ್ಯಾಂಕ್ ಬಗ್ಗೆ ಹೇಳಿದರು, ಫಾಡರ್ ಬ್ಯಾಂಕ್‌ಗಳು ಎಂದು ಹಿಂದೆ ಕೂಡಾ ಅನೇಕ ಬರಗಾಲದಲ್ಲಿ ತಾಲ್ಲೂಕು ಪ್ಲೇಸ್‌ಗಳಲ್ಲಿ ಹೋಬಳಿಗಳಲ್ಲಿ ಮಾಡುತ್ತಿದ್ದರು. ಎಲ್ಲಿ ಅವಶ್ಯಕತೆ ಇದೆ, ಅಲ್ಲೆಲ್ಲಾ ಮಾಡಬೇಕಾಗುತ್ತದೆ. ಏಕೆಂದರೆ ಕರ್ನಾಟಕ

ಫಾರೆಸ್ಟ್ ಕಾರ್ಪೊರೇಷನ್‌ನವರು ಕೂಡಾ ಹುಲ್ಲನ್ನು ಕೊಡುವುದಕ್ಕೆ, ಮೇವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಮತ್ತೆ ಕೆಲವು ಜಿಲ್ಲೆಗಳಲ್ಲಿ ಮೇವನ್ನು ಹೊರಗಡೆ ಬಿಡುತ್ತಿಲ್ಲ ಎಂದು ಹೇಳಿದ್ದಾರೆ. ಉದಾಹರಣೆಗೆ ಕೌನ್ಸಿಲ್‌ನಲ್ಲಿ ಶ್ರೀಮಾನ್ ಮೆಣಸಿಕಾಯಿಯವರು, ಎಂ.ಎಲ್.ಸಿ. ಅವರು ಹೇಳುತ್ತಿದ್ದರು, ಬಳ್ಳಾರಿಯಿಂದ ಮೇವನ್ನು ತರಬೇಕಾದರೆ ನಮಗೆ ತೊಂದರೆ ಇದೆ, ಧಾರವಾಡ ಜಿಲ್ಲೆಗೆ ಬಿಡುತ್ತಿಲ್ಲ ಎಂದು ಹೇಳಿದರು. ಎಲ್ಲೆಲ್ಲಿ ಅಂಥ ತೊಂದರೆಗಳು ಇದೆ, ಈಗಾಗಲೇ ಇದರ ಬಗ್ಗೆ ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್‌ಗೆ ಹೇಳಿದ್ದೇನೆ. ಇದನ್ನು ತಡೆಹಿಡಿಯಬಾರದು ಎಂದು ಹೇಳಿದ್ದಾರೆ. ಬೇಕಾದರೆ ನಮ್ಮ ರಾಜ್ಯದಿಂದ ಹೊರಗೆ ಹೋಗುತ್ತಿದ್ದರೆ ಅದನ್ನು ತಡೆಹಿಡಿಯಿರಿ ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗುತ್ತಿದ್ದರೆ ಅದನ್ನು ತಡೆಹಿಡಿಯಬಾರದು ಎಂದು ಹೇಳಿದ್ದೇನೆ. ಅದಕ್ಕೆ ನೀವು ಪರ್ಮಿಟನ್ನು ಮಾಡಬೇಕು ಎಂದು ಈಗಾಗಲೇ ಹೇಳಿದ್ದೇನೆ. ಮತ್ತು ಫಾಡರ್ ಬ್ಯಾಂಕ್ ಬಗ್ಗೆ ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಯ ಹೆಡ್ ಕ್ವಾರ್ಟರ್‌ನಲ್ಲಿ ಸಬ್ ಡಿವಿಜನ್‌ನಲ್ಲಿ ಸದ್ಯಕ್ಕೆ ಮಾತ್ರ ನಾವು ಮಾಡುತ್ತೇವೆ. ಅಲ್ಲಿಂದ ಟ್ರಾನ್ಸ್‌ಪೋರ್ಟೇಷನ್ ವ್ಯವಸ್ಥೆಯನ್ನು ಕೂಡಾ ಮಾಡುತ್ತೇವೆ. ಈಗಾಗಲೇ ಹಣ ಕೂಡಾ ಬಿಡುಗಡೆ ಮಾಡಿದ್ದೇವೆ. ಧಾರವಾಡಕ್ಕೂ ಕೂಡಾ ಬಿಡುಗಡೆ ಮಾಡಿದ್ದೇವೆ. ಆದರೆ ಕೆಲವು ಕಡೆ ಹಣವನ್ನು ಉಪಯೋಗ ಮಾಡಿದ್ದಾರೆ, ಇನ್ನು ಕೆಲವು ಕಡೆ ಮಾಡಿಕೊಂಡಿಲ್ಲ, ಇದನ್ನೆಲ್ಲಾ ನೋಡುತ್ತಿದ್ದೇನೆ. ತಾವು ಸಲಹೆಗಳನ್ನು ಕೊಟ್ಟಿದ್ದೀರಿ, ನೀವೇ ಖುದ್ದಾಗಿ ತಂದುಕೊಂಡು ಎಂದು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ, ಅದನ್ನು ನಾನು ನೋಡುತ್ತೇನೆ. ಅದಕ್ಕೆ ಎಲ್ಲೆಲ್ಲಿ ಯಾವ ರೀತಿಯಾಗಿ ವ್ಯವಸ್ಥೆಯನ್ನು ಮಾಡಬೇಕೋ ಅದರ ಬಗ್ಗೆ ಸವಿಸ್ತಾರವಾಗಿ ಪರಿಶೀಲನೆಯನ್ನು ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಹೀಗೆ ಅನೇಕ ರೀತಿಯಿಂದ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಜಾನುವಾರುಗಳಿಗೆ ಮೇವನ್ನು ಒದಗಿಸತಕ್ಕಂಥದ್ದಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಕೆಲಸವನ್ನು ಒದಗಿಸತಕ್ಕಂಥದ್ದಾಗಲಿ ಮತ್ತು ಯಾವುದೇ ರೀತಿಯಿಂದ ಈ ಒಂದು ಬರಗಾಲದಲ್ಲಿ ತೊಂದರೆಯಾದಂಥ ಜನರಿಗೆ ಸಹಾಯವನ್ನು ಮಾಡತಕ್ಕಂಥ ಜವಾಬ್ದಾರಿ ಕರ್ತವ್ಯ ಸರ್ಕಾರದ್ದು ಇದೆ. ಅದನ್ನು ನಿರ್ವಹಿಸುತ್ತೇವೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿ ಏನೇ ಬಂದರೂ ಎಷ್ಟೇ ಕಷ್ಟ ಬಂದರೂ ಕೂಡಾ ಬೇರೆ ಕೆಲಸಗಳನ್ನು ನಿಲ್ಲಿಸಿ ಈ ಕೆಲಸಗಳಿಗೆ ಆದ್ಯತೆಯನ್ನು ಕೊಡುತ್ತೇವೆ. ಜನರಿಗೆ ಸಹಾಯವನ್ನು ಮಾಡತಕ್ಕಂಥದ್ದು ಜಾನುವಾರುಗಳನ್ನು ಬದುಕಿಸತಕ್ಕಂಥದ್ದು ಮತ್ತು ಅನ್ನ ಎಂದರೆ ಫುಡ್‌ಗ್ರೈನ್ಸ್‌ನ್ನು ಸಪ್ಲೈ ಮಾಡತಕ್ಕಂಥದ್ದು, ಇದು ಎಲ್ಲವನ್ನೂ ಕೂಡಾ ಜವಾಬ್ದಾರಿಯಿಂದ ಹೊತ್ತುಕೊಂಡಿದ್ದೇವೆ. ನಮ್ಮ ಶಕ್ತಿ ಮೀರಿ ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ತಮ್ಮ ಮುಖೇನ ಹೇಳಿ ನನಗೆ ಇವತ್ತು ಅನೇಕ ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರತಿಯೊಂದಕ್ಕೂ ಕೂಡಾ ಉತ್ತರ ಕೊಡುವುದಕ್ಕೆ ಆಗದೇ ಹೋದರೂ ಕೂಡಾ ನಾನು ಇದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನು ತಮಗೆ ಹೇಳಿ ಮತ್ತು ಅವರು ಯಾವ ಒಂದು ಸಲಹೆ ಮತ್ತು ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳಿದ್ದಾರೆ. ಅದನ್ನು ಕೂಡಾ ನಾನು ಕೂಲಂಕುಷವಾಗಿ ಪರಿಶೀಲಿಸಿ ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಆಚರಣೆಯಲ್ಲಿ ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆಂದು ಈ ಸದನದ ಮುಖೇನ ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :— ಮಾನ್ಯ ಸಭ್ಯಾಧ್ಯಕ್ಷರೆ, ಬೋರ್‌ವೆಲ್‌ಗಳನ್ನು ತಾಲ್ಲೂಕುಗಳಲ್ಲಿ ಎಷ್ಟುಬೇಕಾದರೂ ಡೆಪ್ಯೂಟಿ ಕಮೀಷನರ್‌ರವರು ಮಾಡಲಿ ಎನ್ನುವ ಮಾತನ್ನು ಸಚಿವರು ಹೇಳಲೇ ಇಲ್ಲ. ಒಂದು ಡಿವಿಜನ್ನಿಗೆ 3 ಕೋಟಿ ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಹಣದಿಂದ ಒಂದು ತಾಲ್ಲೂಕಿಗೂ ಐದೈದು ಬೋರ್‌ವೆಲ್‌ಗಳು ಬರುವುದಿಲ್ಲ.

(ಗೊಂದಲ)

ಛೇರ್ಮನ್ :— ಸಚಿವರು ಉತ್ತರವನ್ನು ಆಮೇಲೆ ಹೇಳಿತ್ತಾರೆ. ನೀವು ಕ್ಲಾರಿಫಿಕೇಷನ್ ಅನ್ನು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ವಿರೋಧ ಪಕ್ಷದವರು ಕ್ಲಾರಿಫಿಕೇಷನ್ ಕೇಳಲಿಲ್ಲ.

ಛೇರ್ಮನ್ :— ವಿರೋಧ ಪಕ್ಷದವರಿಗೆ ಅಲ್ಲ, ಎಲ್ಲರಿಗೂ ಬರಗಾಲ ಬಂದಿದೆ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ :— ಮಾನ್ಯ ಯಡಿಯೂರಪ್ಪನವರ ಮಾನಪಲ್ಲಿನಾ? ಏಕೆ ಕುಳಿತುಕೊಳ್ಳಬೇಕು? ನಮಗೆ ಚಾನ್ಸ್ ಬೇಡವಾ? ಎಲ್ಲಾ ನೀವೇ ಮಾತನಾಡಬೇಕಾ?

(ಗೊಂದಲ)

ಶ್ರೀ ಜಿ.ಎಸ್ ಶಿವನಂಜಪ್ಪ : ಮಾನ್ಯ ವೆಂಕಟೇಶ್‌ರವರನ್ನು ನೋಡಿದರೆ ಅವರಿಗೆ ಖಂಡಿತ ಬರಗಾಲ ಬಂದಿಲ್ಲ ಅಂತ ಕಾಣುತ್ತೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ನೈಸರ್ಗಿಕ ವಿಕೋಪಕ್ಕೆ ಒಳಗಾಗಿದ್ದರೆ, ಅದು ಮಳೆ ಜಾಸ್ತಿಯಿಂದಲೂ ಆಗುತ್ತದೆ. ಮಳೆಬಾರದೆ ಇದ್ದಾಗಲೂ ಆಗುತ್ತದೆ ಕಂದಾಯ ಸಚಿವರು ಇದುವರೆಗೂ ಉತ್ತರ ಕೊಟ್ಟಿರತಕ್ಕದ್ದು ಎಲ್ಲಿ ಮಳೆ ಬಂದಿಲ್ಲ ಅಂತಹ ಕಡೆ ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ನಮಗೆ ಏನಾಗಿದೆ ಅಂದರೆ ಮಲೆನಾಡಿನಲ್ಲಿ ಕಳೆದ 10 ವರ್ಷದ ನಂತರ ಮೊದಲಬಾರಿಗೆ ಎಂದೂ ಬಾರದೆ ಇರತಕ್ಕ ಮಳೆ ಬಂದು ಇವತ್ತು ಹೇರಳವಾದಂತಹ ರಸ್ತೆಗಳು ಕೊಚ್ಚಿಹೋಗಿವೆ. ಬ್ರಿಡ್ಜ್‌ಗಳು ಹೋಗಿವೆ. ಅನೇಕ ಕಡೆ ಫಸಲು ಲುಕ್ಸಾನ್ ಆಗಿದೆ. ಹೊಳೆ ಹೊಡೆದುಹೋಗಿ ಅನೇಕ ಕಡೆ ನಷ್ಟವಾಗಿದೆ. ಈಗ ನಾವು ದುರಸ್ತಿ ಮಾಡುವುದಕ್ಕೆ ಹಣ ಕೊಡಿ ಎಂದು ಕೇಳಿದ್ದೇವೆ. ಗುಲ್ಬರ್ಗ ಜಿಲ್ಲೆಗೆ ಮಳೆ ಜಾಸ್ತಿಯಾಗಿದ್ದರಿಂದ 1.5 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಬಹುಶಃ ಆ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳು ಬಂದಿದ್ದರು ಎನ್ನುವ ಕಾರಣಕ್ಕೋ ಏನೋ...

ಶ್ರೀ ಹೆಚ್.ಏಕಾಂತಯ್ಯ :— ಈಗ ನಿಮ್ಮ ಮುಖ್ಯಮಂತ್ರಿಗಳು ಬಂದಿದ್ದಾರೆ, ನೀವು ಎಷ್ಟು ಕೊಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ :— ಚಿಕ್ಕಮಗಳೂರು ಜಿಲ್ಲೆಗೆ 30 ಲಕ್ಷ ಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ಹೋದರೆ 10 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಾವು ಏನು ಯಾರ ಕಣ್ಣಿಗೆ ಸುಣ್ಣ ಬಳಿದಿದ್ದೇವೇನು, ದಕ್ಷಿಣ ಕನ್ನಡ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗೆ ಬಂತು ನಿಜವಾಗಿ ಎಲ್ಲಿ ಮಳೆ ಜಾಸ್ತಿಯಾಗಿ ಹಾನಿಯಾಗಿದೆ ಅಲ್ಲಿ ರಸ್ತೆ ದುರಸ್ತಿ ಮಾಡುವುದಕ್ಕೋಸ್ಕರ ಕೆರೆ ದುರಸ್ತಿ ಮಾಡುವುದಕ್ಕೋಸ್ಕರ ಅಥವಾ ಶಾಲೆಗಳು ಬಿದ್ದು ಹೋಗಿವೆ, ಕೆಲವು ಕಡೆ ಮನೆಗಳು ಬಿದ್ದು ಹೋಗಿವೆ, ಅವುಗಳನ್ನು ದುರಸ್ತಿ ಮಾಡುವುದಕ್ಕೋಸ್ಕರ ಅಗತ್ಯವಾದ ಹಣವನ್ನು ದಯವಿಟ್ಟು ಬಿಡುಗಡೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರನ್ನು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :— ಅದನ್ನು ನಾನು ಹೇಳಬೇಕೆಂದು ಇಟ್ಟುಕೊಂಡಿದ್ದೆ. ಏಕೆಂದರೆ ಅವರು ಹೇಳಿದ ಹಾಗೆ ಬರಪರಿಹಾರದ ಬಗ್ಗೆ ಶಿವಮೊಗ್ಗ, ಬೀದರ್ ಗುಲ್ಬರ್ಗಗಳಲ್ಲಿ ಫ್ಲಡ್ ರೀಲೀಫ್ ಕೆಳಗಡೆ ಏನು ಮಾಡಬೇಕಾಗಿತ್ತು, ಏನು ಮಾಡಿದ್ದೇವೆ ಎನ್ನತಕ್ಕದ್ದನ್ನು ಹೇಳಿದ್ದೇವೆ. ಆದರೂ ಕೂಡ ಪರಿಹಾರ ಏನು ಕೊಟ್ಟಿದ್ದೇವೆಂಬುದನ್ನು ಹೇಳಿದ್ದೇನೆ. 10 ಲಕ್ಷ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಬೇರೆ ಎಂಪ್ಲಾಯಿಮೆಂಟ್ ಜನರೇಷನ್ 45 ಲಕ್ಷ ರೂಪಾಯಿಯನ್ನು ಬೇರೆ ಬಾಬತ್ತಿನಿಂದ ಖರ್ಚು ಮಾಡಿದ್ದೇವೆ. ಆದರೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ರೋಡ್ ಟ್ಯಾಕ್ಸ್‌ಗೆ ಬೇಕೆಂದು ಹೇಳುತ್ತಿದ್ದಾರೆ. ಆದಕ್ಕೆ ಡೆಪ್ಯುಟಿ ಕಮೀಷನರ್‌ರವರಿಂದ ವರದಿ ಬಂದಮೇಲೆ ಎಷ್ಟು ಬೇಕಾಗುತ್ತದೆ ಅಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ರೀತಿ ನೋಡಿದರೆ ಕರ್ನಾಟಕದಲ್ಲಿ ಬರಗಾಲ ಇಲ್ಲ, ಜನ ಸುಭಿಕ್ಷೆಯಿಂದ ಇದ್ದಾರೆಂಬ ವಾತಾವರಣ ಮೂಡುತ್ತದೆ. ನಾನು ಸ್ಪಷ್ಟವಾಗಿ ಮಂತ್ರಿಗಳನ್ನು ಉತ್ತರ ಕೇಳುವಂತಹದ್ದು ಏನೆಂದರೆ ಇವತ್ತು ಈ ರೀತಿ ಬರಗಾಲ 15 ಜಿಲ್ಲೆಯಲ್ಲಿ 100 ತಾಲ್ಲೂಕುಗಳಲ್ಲಿ ಇದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಈಗ ಆ ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡುತ್ತಿದ್ದಾರೆ. ಇವತ್ತು ನೀವು ಕೊಡುವ ಹಣ ಸಾಕಾಗುತ್ತಿಲ್ಲ. ಶಾಸಕರು ಕೂಡ ಜಾಸ್ತಿ ಕೊಡಿ ಎಂದು ಕೇಳುವ ಪರಿಸ್ಥಿತಿ ಇದೆ. ಕೃಷಿಕನಿಗೆ ಯಾವುದೊ ಕಾಲದಲ್ಲಿ ಹನ್ನೆಡೂವರೆ ರೂಪಾಯಿಯನ್ನು ಕೊಡುತ್ತಿದ್ದ ಕೂಲಿಯನ್ನು ಇವತ್ತು 20 ರೂಪಾಯಿಗೆ ಏರಿಸಿದರೂ ಅವನು ಎರಡು ಹೊತ್ತು ಊಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರ ಬಗ್ಗೆ ಸ್ಪಷ್ಟವಾದ ಉತ್ತರ ಸಿಗುತ್ತಿಲ್ಲ. ಆದಕ್ಕೋಸ್ಕರ ಕೃಷಿ ಕಾರ್ಮಿಕರಿಗೆ ಯಾರಿಗೆ ಈ ಬರಗಾಲದಲ್ಲಿ ಕೆಲಸ ಮಾಡಬೇಕೆಂಬ ನಿರೀಕ್ಷೆ ಇದೆ. ಆ ಜನಕ್ಕೆ ಅಲ್ಲೇ ಸುತ್ತಮುತ್ತ ಕೆರೆಗಳಲ್ಲಿ ಹೂಳುತೆಗೆದು ಬಹಳ ವರ್ಷಗಳಾಯಿತು. ಆ ಕೆರೆಯಲ್ಲಿ ನೀವು ಹೂಳುತೆಗೆಯಲು ಅವಕಾಶ ಮಾಡಿಕೊಡಬೇಕು. ಹರಿಜನ ಗಿರಿಜನ ಸಣ್ಣ ರೈತರಿಗೆ ಆ ಜಮೀನನ್ನು ಮಟ್ಟ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ, ಅಲ್ಲಿ ಕೆಲಸ ಮಾಡಿ ಅವನಿಗೆ ಸಾಯಂಕಾಲ ಕೂಲಿ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ವಿಶೇಷ ಕಾರ್ಯಕ್ರಮವನ್ನು ಒದಗಿಸಿಕೊಟ್ಟು ಅಲ್ಲಿರತಕ್ಕ ಕೃಷಿಕಾರ್ಮಿಕನಿಗೆ ಉದ್ಯೋಗ ಒದಗಿಸಿಕೊಡುವಂತಹ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಗೋವುಗಳ ಮೇವಿಗೆ ತೊಂದರೆ ಇದೆ, ಎಲ್ಲೆಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಗುರ್ತು ಮಾಡಿದ್ದೀರಾ ಆ ಪಟ್ಟಿಯನ್ನು ತಾವು ಕೊಡುವುದಕ್ಕೆ ಸಿದ್ಧರಿದ್ದೀರಾ? ಅಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಬೇಕು. ಬರುವಂತಹ 4–5 ತಿಂಗಳಲ್ಲಿ ಜಾನುವಾರುಗಳಿಗೆ ಮೇವು, ಕುಡಿಯಲು ನೀರು ಮತ್ತು ಕೃಷಿ

ಕಾರ್ಮಿಕನಿಗೆ ಉದ್ಯೋಗ ಮತ್ತು ಸಂಪೂರ್ಣ ಬೆಳೆ ನಾಶವಾಗಿರುವಂತಹ ಈ ಸಂದರ್ಭದಲ್ಲಿ ತಾವೇನಾದರೂ ಕೇಂದ್ರ ಸರ್ಕಾರಕ್ಕೆ ಅತಿವೃಷ್ಟಿಯಿಂದ ಬೆಳೆನಾಶವಾಗಿರುವವನಿಗೆ ಪರಿಹಾರ ಒದಗಿಸಿಕೊಡತಕ್ಕ ಕಾರ್ಯಕ್ರಮ ಏನಿದೆ ಆ ರೀತಿ ಕೇಂದ್ರ ಸರ್ಕಾರ ಅಥವಾ ನಿಮ್ಮ ಸರ್ಕಾರ ತೀರ್ಮಾನ ತೆಗೆದುಕೊಂಡು ಬರಗಾಲದಲ್ಲಿ ತುತ್ತಾದಂತಹ ಬೆಳೆ ನಾಶವಾಗುತ್ತಿದ್ದು ಅವನಿಗೆ ಪರಿಹಾರ ಒದಗಿಸಿಕೊಡುವ ಏನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ?

(ಉಪಾಧ್ಯಕ್ಷೆಯವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.)

ಇದರ ಬಗ್ಗೆ ನನಗೆ ಸರ್ಕಾರದಿಂದ ಸ್ಪಷ್ಟವಾಗಿ ಉತ್ತರ ಬೇಕು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಈ ಸಾರಿ ಒಂದು ಕೆಜಿ. ಬೆಳೆ ಕೂಡ ರೈತನಿಗೆ ಸಿಕ್ಕಿಲ್ಲ. ರೈತನಿಗೆ ಉದ್ಯೋಗ ಇಲ್ಲದೆ ಸಾಯುತ್ತಿದ್ದಾನೆ. ಇವನ ಬಗ್ಗೆ ಸರ್ಕಾರದ ನಿರ್ದಿಷ್ಟ ಕಾರ್ಯಕ್ರಮ ಏನಿದೆ? ಬರಗಾಲ ಕಾಮಗಾರಿಗಳನ್ನು ಎಷ್ಟು ತಾಲ್ಲೂಕುಗಳಲ್ಲಿ ಹಾಕಿಕೊಂಡಿದ್ದೀರಿ? ಎಷ್ಟು ತಾಲ್ಲೂಕುಗಳನ್ನು ಬರಗಾಲಕ್ಕೆ ತುತ್ತಾದ ಪ್ರದೇಶಗಳು ಎಂದು ಘೋಷಣೆ ಮಾಡಿದ್ದೀರಿ ಅಥವಾ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಸದನದಲ್ಲಿ ಹೇಳಬೇಕು.

ಇನ್ನು ಎರಡನೆಯದಾಗಿ ಕೃಷಿ ಕಾರ್ಮಿಕರಿಗೆ ಕೂಲಿ ಜಾಸ್ತಿ ಮಾಡತಕ್ಕ ಕಾರ್ಯಕ್ರಮ ಏನಾದರೂ ಇದೆಯೇ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :— ಒಂದೇ ಒಂದು ಮಾತಿನಲ್ಲಿ ಹೇಳತಕ್ಕದ್ದು ಗೊತ್ತಿಲ್ಲ. ನನಗೆ ಯಾವರೀತಿ ಮಾತನಾಡುವುದು ಅಭ್ಯಾಸವಾಗಿದೆಯೋ ಆ ರೀತಿ ಮಾತನಾಡುತ್ತಿದ್ದೇನೆ. ನಾನು ಸರ್ಕಾರದಿಂದ ನಿರ್ದಿಷ್ಟ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):— ಮಾನ್ಯ ಸಭಾಧ್ಯಕ್ಷರೆ, ಮೊಮೋರಾಂಡಂನ್ನು ಕೊಡತಕ್ಕ ಪದ್ಧತಿಯನ್ನು ಈಗ ನಿಲ್ಲಿಸಿದ್ದಾರೆ ಅದಕ್ಕೆ ಹೊಸ ಫಾರ್ಮುಲವನ್ನು ಅಡಾಪ್ಟ್ ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಕೇಂದ್ರದಲ್ಲಿ ಹೊಸ ಸರ್ಕಾರ ಬಂದಾಗ ಮಾನ್ಯ ವಿ.ಪಿ. ಸಿಂಗರು ಹೊಸ ಸ್ಕೀಂನ್ನು ಹಾಕಿದ್ದಾರೆ. ಆ ಸ್ಕೀಂನ ಪ್ರಕಾರ ನಮಗೆ 27 ಕೋಟಿ ರೂ. ನಿಗದಿ ಮಾಡಿದ್ದಾರೆ. ಅಷ್ಟು ಹಣವನ್ನು ನಾವು ಖರ್ಚು ಮಾಡಬೇಕು. ನಮ್ಮಲ್ಲಿರತಕ್ಕ ಪ್ಲಾನ್ಡ್ ಸ್ಕೀಂ ಮತ್ತು ನಾನ್ ಪ್ಲಾನ್ಡ್ ಸ್ಕೀಂನಲ್ಲಿ ಖರ್ಚು ಮಾಡಿ ಆ ಹಣವನ್ನು ಈ ಕಡೆ ಡೈವರ್ಟ್ ಮಾಡಿ ರಿಲೀಫ್ ಕೊಡಬೇಕೇ ಹೊರತು ಬೇರೆ ಮಾಡುವುದಕ್ಕೆ ಸಾಧ್ಯವಿಲ್ಲ. ಬೇರೆ ಕಡೆಯಿಂದ ಹಣವನ್ನು ತರುವುದಕ್ಕಾಗುವುದಿಲ್ಲ. ಮುಂದೆ ನಮಗೆ ಗಂಭೀರವಾದ ಪರಿಸ್ಥಿತಿ ಬರುತ್ತದೆ. ಫೆಬ್ರವರಿಯಿಂದ ಏಪ್ರಿಲ್ ತಿಂಗಳವರೆಗೆ ಅಥವಾ ಮೇ ತಿಂಗಳವರೆಗೆ ನಮಗೆ ಕಷ್ಟವಿದೆ. ಆ ಸಂದರ್ಭದಲ್ಲಿ ಹಣದ ಕೊರತೆ ಬಂದಾಗ ರೆಗ್ಯುಲರ್ ವರ್ಕ್ಸ್‌ನ್ನು ನಿಲ್ಲಿಸಿ ಸ್ಕೇರ್ಸಿಟಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ.

ಇನ್ನು ಮಿನಿಮಂ ವೇಜಸ್ ಆ್ಯಕ್ಟ್‌ನ ಕೆಳಗೆ ಕಳೆದಸಾರಿ ಸುಮಾರು 12 ರೂ. ಅಂತ ತಾವೇ 20ನೇ ಆಗಸ್ಟ್ 86ರಲ್ಲಿ ಅನುಮೋದನೆ ಮಾಡಿಕೊಟ್ಟಿದ್ದೀರಿ. ಆದರ ಪ್ರಕಾರ 12 ರೂ. ಕೂಲಿ ಎಂದು ಇದೆ. ಇದು ಕಡಿಮೆ ಆಯಿತು ಎಂಬುದನ್ನು ನಾನೂ ತಿಳಿದುಕೊಂಡಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಲೇಬರ್ ಮಂತ್ರಿಗಳ ಜೊತೆಯಲ್ಲಿ ಚರ್ಚೆಮಾಡಿ ಇದನ್ನು ರಿವೈಸ್ ಮಾಡಬೇಕೆಂದು ತಿಳಿಸುತ್ತೇನೆ.

ಇನ್ನು ಎರಡನೆಯದಾಗಿ ಯಾವ ಯಾವ ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶದಲ್ಲಿ ಬರುತ್ತವೆಂದು ನಾನು ಈಗಾಗಲೇ ಬ್ರೈಫ್‌ಕೇಟ್ ಮಾಡಿದ್ದೇನೆ. ಒಬ್ಬರು ಆಣೇವಾರಿ ಪ್ರಕಾರ ಮಾಡಬೇಕೆಂದು ಹೇಳಿತ್ತಿದ್ದಾರೆ, ಇನ್ನೊಬ್ಬರು ಸ್ಕೇರ್ಸಿಟಿ ಆಧಾರದಮೇಲೆ ಮಾಡಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಪುನ: ಪುನ: ಹೇಳುವುದಕ್ಕೆ ಹೋದರೆ ತಮಗೆ ಬೇಸರವಾಗಬಹುದು. ಈ ಕೆಳಕಂಡ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳನ್ನು ಬರಗಾಲಕ್ಕೆ ತುತ್ತಾದ ಪ್ರದೇಶಗಳೆಂದು ಘೋಷಣೆ ಮಾಡಿದ್ದೇನೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ :

ಬೆಂಗಳೂರು ಅರ್ಬನ್	:	ಆನೇಕಲ್, ಬೆಂಗಳೂರು ನಾರ್ತ್, ಬೆಂಗಳೂರು ಸೌತ್,
ಬೆಂಗಳೂರು ರೂರಲ್	:	ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ, ರಾಮನಗರ.

ಕೋಲಾರ	:	ಚಿಕ್ಕಬಳ್ಳಾಪುರ, ಗೌರಿಬಿದನೂರು, ಚಿಂತಾಮಣಿ, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟ ಶ್ರೀನಿವಾಸಪುರ.
ತುಮಕೂರು	:	ತುರುವೇಕೆರೆ, ಕುಣಿಗಲ್, ಪಾವಗಡ, ತಿಪಟೂರು, ತುಮಕೂರು, ಸಿರಾ, ಗುಬ್ಬಿ, ಚಿಕ್ಕನಾಯ್ಕನಹಳ್ಳಿ.
ಶಿವಮೊಗ್ಗ	:	ಚನ್ನಗಿರಿ, ಶಿಕಾರಿಪುರ, ಹೊನ್ನಾಳಿ, ಸೊರಬ.
ಚಿತ್ರದುರ್ಗ	:	ಚಳ್ಳಕೆರೆ, ಹರಿಹರ, ಮೊಳಕಾಲ್ಮೂರು, ದಾವಣಗೆರೆ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ.
ಮೈಸೂರು	:	ಮೈಸೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ಹುಣಸೂರು, ಹೆಗ್ಗಡದೇವನ ಕೋಟೆ,ಕೆ.ಆರ್.ನಗರ, ಯಳಂದೂರು, ನಂಜನಗೂಡು.
ಮಂಡ್ಯ	:	ಕೆ.ಆರ್.ಪೇಟೆ, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಮಂಡ್ಯ.
ಹಾಸನ	:	ಹೊಳೆನರಸೀಪುರ, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಅರಕಲಗೂಡು.
ಚಿಕ್ಕಮಗಳೂರು	:	ಕಡೂರು, ಚಿಕ್ಕಮಗಳೂರು, ತರೀಕೆರೆ, ನರಸಿಂಹರಾಜಪುರ.
ಬೆಳಗಾಂ	:	ಬೆಳಗಾಂ, ಗೋಕಾಕ್, ರಾಜಬಾಗ್, ಸವದತ್ತಿ, ಚಿಕ್ಕೋಡಿ, ಹುಕ್ಕೇರಿ, ರಾಮದುರ್ಗ.

ಧಾರವಾಡ ಜಿಲ್ಲೆಯಲ್ಲಿ—ಬ್ಯಾಡಗಿ, ಕುಂದಗೋಳ್ ಮುಂಡರಗಿ, ಸಾವನೂರ್, ಹಾನಗಲ್, ಹುಬ್ಬಳ್ಳಿ, ರಾಣಿಬೆನ್ನೂರ್, ಶಿರಹಟ್ಟಿ ಕಲಘಟಗಿ, ಹಿರೇಕೆರೂರು, ನರಗುಂದ, ಗದಗ್, ಹಾವೇರಿ ನವಲಗುಂದ್, ರೋಣ, ಬಿಜಾಪುರ ಜಿಲ್ಲೆಯಲ್ಲಿ, ಬಾದಾಮಿ, ಬಾಗೇವಾಡಿ, ಬೆಳಗಿ, ಜಮಖಂಡಿ, ಬಾಗಲಕೋಟೆ, ಬಿಜಾಪುರ, ಹುನುಗುಂದ್, ಮುಧೋಳ್, ರಾಯಚೂರಿನಲ್ಲಿ – ಕೊಪ್ಪಳ, ಯಲಬುರ್ಗ, ಕುಷ್ಟಗಿ, ಲಿಂಗಸುಗೂರ್, ಬಳ್ಳಾರಿ ಜಿಲ್ಲೆಯಲ್ಲಿ – ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಂಡೂರು, ಕೂಡ್ಲಗಿ, ಹರಪ್ಪನಹಳ್ಳಿ ಈ ರೀತಿಯಾಗಿ ಒಂದು ರೈನ್‌ಫಾಲ್ ಪ್ರಕಾರ ಮತ್ತು ಡಿ.ಸಿ. ರಿಪೋರ್ಟ್ ಪ್ರಕಾರ ಇಷ್ಟೊಂದು ಘೋಷಿಸಿದ್ದಾರೆ. ಅದರಮೇಲೆ ಕೂಡ ಇನ್ನು ಕೆಲವು ಕಡೆ ಎಫೆಕ್ಟ್ ಆಗಿದೆ ಎಂದು ಹೇಳಿ ವರದಿ ಬಂದಿದೆ. ಅದಕ್ಕೆ ಈಗಾಗಲೇ ಹೇಳಿದ್ದೇವೆ, ಅದಕ್ಕೆ ಡಿ.ಸಿ.ಗೆ ನಾವು ಆದೇಶವನ್ನೂ ಕೂಡ ಕೊಟ್ಟಿದ್ದೇವೆ, ಪುನ: ಎಲ್ಲಿ ಪರಿಸ್ಥಿತಿ ಕೆಟ್ಟಿದೆ ಆದರ ಬಗ್ಗೆ ರಿಪೋರ್ಟ್ ಕೊಡಿ ಎಂದು ಕೇಳಿದ್ದೇವೆ ಮತ್ತು ಅಂಥ ಕಡೆ ಪರಿಹಾರ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಕೂಡ ಸ್ಪಷ್ಟವಾಗಿ ಹೇಳಿದ್ದೇವೆ. ಅಂದೂ ಕೂಡ ಹೇಳಿದ್ದೇವೆ, ಇಂದೂ ಕೂಡ ಅದೇ ಮಾತನ್ನು ಹೇಳುತ್ತಿದ್ದೇನೆ, ಎಲ್ಲೆಲ್ಲಿ ಪರಿಸ್ಥಿತಿ ಹದಗೆಟ್ಟಿದೆ ಅಂಥ ಕಡೆ ಕ್ರಮತೆಗೆದುಕೊಳ್ಳಿ ಎಂದು.

ಶ್ರೀ ಹೆಚ್. ಏಕಾಂತಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ನಾನು ಮಾಡಿದಂಥ ಕೆಲವು ಪ್ರಸ್ತಾಪಗಳಿಗೆ ಉತ್ತರವನ್ನು ಕೊಟ್ಟಿಲ್ಲ. ನನ್ನ ಮುಖ್ಯವಾದ ಆರೋಪ ಸರ್ಕಾರದ ಮುಂದೆ ಇರುವುದೇನೆಂದರೆ ಅಭಾವ ಪರಿಹಾರನಿಧಿಯಿಂದ ಹಣವನ್ನು ಬಿಡುಗಡೆ ಮಾಡಬೇಕೆಂದು. ಅಭಾವದ ತೀವ್ರತೆಯ ಆಧಾರದಮೇಲೆ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದೆ. ಚಿತ್ರದುರ್ಗ ಪೂರ್ವಭಾಗದಲ್ಲಿ ಮುಖ್ಯವಾಗಿ ವಿಶೇಷವಾಗಿ ಅಭಾವ ಪರಿಸ್ಥಿತಿ ಇದೆ. ಜಿಲ್ಲಾಧಿಕಾರಿಗಳು ಈಗಾಗಲೇ 12 ಕೋಟಿ ರೂಪಾಯಿ ಹೆಚ್ಚಿಗೆ ಹಣವನ್ನು ನಮಗೇಬೇಕೆಂದು ಹೇಳಿದ್ದಾರೆ. ಆ ಹಣವನ್ನು ಬಿಡುಗಡೆ ಮಾಡಲಿಕ್ಕೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೆ? ಮತ್ತು ಚಿತ್ರದುರ್ಗದ ಉಪವಿಭಾಗದಲ್ಲಿ ಮುಖ್ಯವಾಗಿ ತೀವ್ರತೆಯ ಅಭಾವವಿದೆ. ಅಲ್ಲಿ ಇಷ್ಟು ಅಭಾವವಿದ್ದರೂ ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಲು ಸಾಧ್ಯವಾಗಲಿಲ್ಲ. ಇವತ್ತಿನ ದಿವಸ ಆದ್ಯತೆಯ ಆಧಾರದಮೇಲೆ ಸುಮಾರು 1–4–88ರಿಂದ ಇದ್ದಂಥ ಸುಮಾರು 2316 ಐ.ಪಿ. ಸೆಟ್‌ಗಳನ್ನು ಹೊಂದಿರುವವರಿಗೆ ವಿದ್ಯುತ್ತನ್ನು ಪೂರೈಕೆ ಮಾಡಲಾಗಲಿಲ್ಲ. ಜಿಲ್ಲೆಗೆ ಅಭಾವವಿರಬಹುದು, ಹಣದ ಅಭಾವವಿರಬಹುದು ಸರ್ಕಾರ ಈ ನಿಟ್ಟಿನಲ್ಲಿ ಬೇರೆ ಯಾವ ರೀತಿಯಲ್ಲಾದರೂ ವಿದ್ಯುತ್ತನ್ನು ಪೂರೈಕೆ ಮಾಡಲಾಗುತ್ತದೆಯೇ? ಸರ್ಕಾರದವರು ಕೆ.ಇ.ಬಿ.ಯೊಡನೆ ಏನಾದರೂ ಆಲೋಚನೆ ಮಾಡಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ಅನೇಕ ಮಾನ್ಯ ಸದಸ್ಯರು ಕೇಳಿರುತ್ತಾರೆ. ಮುಖ್ಯವಾಗಿ ಪ್ರೊಫೆಸರ್ ನಂಜುಂಡಸ್ವಾಮಿಯವರು ಕೇಳಿದರು, ಪಂಪ್‌ಸೆಟ್‌ಗಳ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ಮಾತನಾಡುವಾಗ ಹೇಳಿದರು. 66 ಸಾವಿರ ಪಂಪ್‌ಸೆಟ್ಟುಗಳನ್ನು ಎನರ್ಜೈಸ್ ಮಾಡುತ್ತೇವೆಂದು ಹೇಳಿದ್ದೀರಿ; ಇದು ಬಹಳ ಸಂತೋಷ ಎನ್ನುವ ಮಾತನ್ನು ಹೇಳಿದ್ದಾರೆ. ಆರ್ಡರ್ಸ್‌ನ್ನು ಇಷ್ಯೂ ಮಾಡಿದ್ದೇವೆನ್ನುವ ಮಾತನ್ನು ನಾನು ಕೂಡ ಹೇಳುತ್ತಿದ್ದೇನೆ. ಅದಕ್ಕೆ ಚೀಫ್ ಇಂಜಿನಿಯರ್ ಜನರಲ್‌ರವರು ಈಗಾಗಲೇ ಆದೇಶವನ್ನು ಹೊರಡಿಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

"With reference to the above cited subject, the Government of Karnatka has declared 60 taluks in the State as drought prone areas. Hence, you are requested to arrange for servcie of I.P. sets and drinking water supplies in 60 taluks on priority basis. The materials required may please be intimated to the Chief Engineer (Electoricity) immediately. Action taken in this regard may please be intimated to this office within a week and the progress in respect of energisation of I.P. sets and drinking water supply schemes during each month should be reported to this office within 5th of successful month. Any lapse would be viewed seriously"....

ಈ ರೀತಿಯಾಗಿ ನಾವು ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ. 60 ಆದಮೇಲೆ ಪುನ: 40 ಅಫ್‌ಕ್ಟೆಡ್ ಏರಿಯಾ ತಾಲ್ಲೂಕುಗಳು ಇವೆ. ಅಲ್ಲಿಯೂ ಕೂಡ ಇದೇ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಹೇಳಿದರಲ್ಲಿ ಸ್ವಲ್ಪ ಕಂಡಕ್ಟೀವ್ ಪ್ರಾಬ್ಲಮ್ ಇದೆ. ಹೆಚ್ಚಿನ ಆಸಕ್ತಿವಹಿಸಿ ಎಲ್ಲಿಂದಲ್ಲಾದರೂ ತರಿಸಿಕೊಂಡು ಈ ಕೆಲಸವನ್ನು ಮಾಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇನೆ. ಆದರ ಪ್ರಕಾರ ಅವರು ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರ :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದಿಂದ ಬರಬೇಕಾದ ಸಹಾಯಧನ ಡಿ.ಸಿ.ಯವರು ಕೈಯಲ್ಲಿದೆ. ಡೆಪ್ಯೂಟಿ ಕಮೀಷನರ್‌ರವರು ಏನೋ ಹಣವನ್ನು ತಮ್ಮ ಜೇಬಿನಿಂದ ಕೊಡಬೇಕೆಂದು ತಿಳಿದುಕೊಂಡು ಸ್ವಲ್ಪ ಸ್ವಲ್ಪ ಕೊಡುತ್ತಿದ್ದಾರೆ. ತಾಲ್ಲೂಕಿನ ಎಲ್ಲಾ ಕ್ಷೇತ್ರಗಳಲ್ಲಿ ಎಲ್ಲಾ ಹಳ್ಳಿಗಳಲ್ಲಿ ಕೆಲಸ ಪ್ರಾರಂಭವಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ಹುಬ್ಬಳ್ಳಿ ತಾಲ್ಲೂಕಿನಲ್ಲಿ ರಿಲೀಜ್ ಮಾಡಿದ ಹಣವನ್ನು ಮುಗಿಸಿರಿ, ಆಮೇಲೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಸರಿಯಲ್ಲ, ಎಲ್ಲೆಲ್ಲಿ ಬರಗಾಲ ಇದೆ, ಅಲ್ಲೆಲ್ಲ ಬರಗಾಲ ಕಾಮಗಾರಿಯನ್ನು ಪ್ರಾರಂಭ ಮಾಡಬೇಕು. ಹಣದ ರಿಸ್ಟ್ರಿಕ್ಷನ್ ಹಾಕಬಾರದೆಂದು ಡಿ.ಸಿ.ಯವರಿಗೆ ಹೇಳಬೇಕು. ಕೆಲವು ಅಧಿಕಾರಿಗಳು ಇಲ್ಲಿ ಬರಗಾಲ ಇಲ್ಲ, ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅವರಿಗೆ ಬುದ್ಧಿ ಹೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿಗೆ ಆದ್ಯತೆ ಕೊಡುತ್ತೇವೆಂದು ನಮ್ಮ ಸರ್ಕಾರದವರು ಅಧಿಕಾರಕ್ಕೆ ಬಂದಾಗಿನಿಂದಲೂ ಹೇಳುತ್ತಿದ್ದಾರೆ. ಹುಬ್ಬಳ್ಳಿ ತಾಲ್ಲೂಕ್ ಹೊಸ್ಸೂರು, ಕೆರೆಸುತ್ತುಗಳಲ್ಲಿ ಕುಡಿಯುವ ನೀರಿಗೆ ಅಭಾವವಿದೆ. ಅಲ್ಲಿ ನೀರಿನ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ ಮಂಜೂರು ಮಾಡಿಸಿದರೂ ಕೂಡ ಅದು ಕಾರ್ಯಗತವಾಗಿಲ್ಲ. ಇನ್ನು 2—3 ತಿಂಗಳಲ್ಲಿ ಸಂಪೂರ್ಣ ಕಾರ್ಯಗತ ಆಗದೆ ಇದ್ದರೆ ಅಲ್ಲಿ ಜನ ನೀರು ನೀರೆಂದು ಬಾಯಿ ಬಡಿದುಕೊಳ್ಳಬೇಕಾಗುತ್ತದೆ. ಹೊಸ್ಸೂರು ಮತ್ತು ಕೆರೆಸುತ್ತು ಯೋಜನೆಗಳನ್ನು ಕೂಡಲೆ ಪ್ರಾರಂಭ ಮಾಡಬೇಕೆಂದು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕೆ ಸರ್ಕಾರದಿಂದ ಮಂಜೂರಾಗಿದ್ದರೂ ಕೆಲಸ ಮಾಡುತ್ತಿಲ್ಲ. ಅದರ ಕಡೆಗೆ ಹೆಚ್ಚು ಗಮನಕೊಟ್ಟು ಅದನ್ನು ಮಾಡಬೇಕು. ಎಲ್ಲಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :— ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ಅವರು ಅವರವರ ತಾಲ್ಲೂಕಿನಲ್ಲಿ ಎಷ್ಟು ಬೇಕಾದರೂ ಬೋರ್‌ವೆಲ್‌ಗಳನ್ನು ತೆಗೆಸಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದರು. ಈಗಿರುವ ಸಚಿವರು ಜಿಲ್ಲಾಧಿಕಾರಿಗಳಿಗೆ ಸೂಚನ್ದೇ ರೀತಿಯ ಕೊಡಬೇಕು. ಏಕೆಂದರೆ ಹಿಂದಿನ ಕಂದಾಯ ಸಚಿವರು ಆ ತಾಲ್ಲೂಕಿನಲ್ಲಿ ಅಭಾವವಿರುವ ಕಡೆ ನೀವು ಎಷ್ಟು

ಬೇಕಾದರೂ ಬೋರ್‌ವೆಲ್‌ಗಳನ್ನು ತೆಗೆಸಿ ಎಂದು ಸ್ಪಷ್ಟವಾಗಿ ಶಾಸಕರ ಮುಂದೆ ಹೇಳಿದ್ದರು. ಮಾನ್ಯ ಸಚಿವರು ಅದರ ಬಗ್ಗೆ ಗಮನಹರಿಸಬೇಕು. ಜಿಲ್ಲೆಯಲ್ಲಿ ಅಭಾವ ಪರಿಹಾರದ ಬಗ್ಗೆ ಕೆಲಸ ಆಗಿಲ್ಲವೆಂದು ಹೇಳುತ್ತಾರೆ. ಕೃಷಿ ಕಾರ್ಮಿಕನಿಗೆ 12 ರೂಪಾಯಿಯನ್ನು ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಜಿಲ್ಲಾಪರಿಷತ್ತಿನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ 12 ರೂಪಾಯಿ ಕೂಲಿಯನ್ನು ಕೊಡಬೇಕಾದರೆ ಇಷ್ಟು ಕೆಲಸ ಮಾಡಿಕೊಡಬೇಕೆಂದು ಅವರು ನಿಗದಿ ಮಾಡುತ್ತಾರೆ. ಈ ಬರಗಾಲದಲ್ಲಿ ಮಣ್ಣು ಗಟ್ಟಿ ಇದ್ದು ಅಗೆಯುವುದಕ್ಕೆ ಕಷ್ಟವಾಗುತ್ತದೆ. ಮಣ್ಣು ಮೆತ್ತಗಿದ್ದಂತಹ ಕಾಲದಲ್ಲಿ ಅಗೆಯುವುದಕ್ಕೆ 1986ರಲ್ಲಿ 12 ರೂಪಾಯಿಯನ್ನು ನಿಗದಿ ಮಾಡಿದ್ದರು. ಈ ಬರಗಾಲದಲ್ಲಿ ಮಳೆ ಇಲ್ಲವಾದಾಗ ನೆಲಗಟ್ಟಿ ಇದ್ದು ಅಗೆಯುವುದಕ್ಕೆ ಕಷ್ಟವಾಗಿದೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅವನಿಗೆ 12 ರೂಪಾಯಿಯನ್ನು ಕೊಟ್ಟರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ತಿನ ಇಂಜಿನಿಯರ್ ನಿಮಗೆ 12 ರೂಪಾಯಿಗಿಂತ ಹೆಚ್ಚು ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾನೆ. ಅವನು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕೆಲಸಮಾಡಿದರೂ ಅವನಿಗೆ 12 ರೂಪಾಯಿಗಿಂತ ಹೆಚ್ಚು ಇಂಜಿನಿಯರ್ ಕೊಡುವುದಿಲ್ಲ. ಅವನಿಗೆ ಪುನ: ಕೆಲಸ ಮಾಡಬೇಕೆಂದು ಹೇಳುತ್ತಾನೆ. ನೀವು ಮಾಡುವ ಕೆಲಸ ಕಡಿಮೆ ಇದೆ ಎಂದು ಇಂಜಿನಿಯರ್ ಹೇಳುತ್ತಾನೆ. ಯಾರಾದರೂ ಎನ್‌ಕ್ವೈರಿಗೆ ಬಂದಾಗ ನನಗೆ ತೊಂದರೆ ಆಗುತ್ತದೆ. ನಾನು ದುಡ್ಡು ಕೊಡುವುದಿಲ್ಲ ಅಂತ ಹೇಳುತ್ತಾನೆ. ಅವನು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೆಲಸ ಮಾಡಿದರೆ ಕೂಲಿ ಕೊಡಲಿ ಇಲ್ಲದಿದ್ದರೆ ನಿಗದಿ ಮಾಡಿದುದ್ದಕ್ಕೆ ಶೇಕಡ 25ರಷ್ಟು ಕೆಲಸ ಕಡಿಮೆ ಮಾಡಿದರೆ ಆಗ ಪೂರ್ತಿಯಾಗುತ್ತದೆ.

ಶ್ರೀ ಷಫಿ ಅಹಮದ್ :– ತುಮಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿರುವುದರಿಂದ ನಮ್ಮ ಜಿಲ್ಲಾಧಿಕಾರಿಗಳು ನಿಮ್ಮಿಂದ ನೇರವಾಗಿ ಆದೇಶವನ್ನು ಕೇಳುತ್ತಿದ್ದಾರೆ. ತುಮಕೂರು ಟೌನ್ ಮುನಿಸಿಪಾಲಿಟಿ ಏರಿಯಾದಲ್ಲಿ ಎರಡೂವರೆ ಲಕ್ಷ ಜನಸಂಖ್ಯೆ ಇದೆ. ಅಲ್ಲಿನ ಬೋರ್‌ವೆಲ್‌ಗಳೆಲ್ಲ ಒಣಗಿಹೋಗಿವೆ. ಆದ್ದರಿಂದ, ಅಲ್ಲಿನ ಜನರಿಗೆ ನೀರು ಸರಬರಾಜು ಮಾಡುವ ಸಲುವಾಗಿ ಹೆಚ್ಚಿನ ಹಣವನ್ನು ಟೌನ್ ಮುನಿಸಿಪಾಲಿಟಿಗೆ ಕೊಡುವುದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ನಮ್ಮ ತಾಲ್ಲೂಕನ್ನು ಬರಗಾಲದ ಪಟ್ಟಿಗೆ ಸೇರಿಸಬೇಕೆಂದು ನಾನು ಬಹಳ ಪ್ರಯತ್ನ ಮಾಡಿದೆ. ಈ ರೀತಿ ರಾಜಕೀಯ ಮಾಡುವುದು ಬೇಡ. ಬರಗಾಲಕ್ಕೆ ಸೇರಿಸುವುದರಲ್ಲಿ ರಾಜಕೀಯ ಬೇಡ. ಪ್ರಾಮಾಣಿಕವಾಗಿ ಹೇಳುತ್ತೇನೆ, ನಮ್ಮ ತಾಲ್ಲೂಕಿನಲ್ಲಿ ಬರಗಾಲ ಇದೆ. ಮೈಸೂರಿನ ಜಿಲ್ಲಾಧಿಕಾರಿಗಳು ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಹಣ ಬಿಡುಗಡೆ ಮಾಡುತ್ತಿದ್ದಾರೆ. ಆದರೆ ತಾವು ತಮ್ಮ ವರದಿಯಲ್ಲಿ ನಮ್ಮ ತಾಲ್ಲೂಕನ್ನು ಮರೆತಿದ್ದೀರಿ. ಕೊಳವೆಬಾವಿ, ಕುಡಿಯುವ ನೀರು ಮತ್ತು ಮೇವಿಗಾಗಿ ಮೈಸೂರು ಜಿಲ್ಲೆಗೆ ಹಣ ಬೇಕೆಂದು ಕೇಳಿದ್ದೆ. ಒಂದಕ್ಕೂ ತಾವು ಉತ್ತರಿಸಿಲ್ಲ. ಇದರಿಂದ ನನಗೆ ವ್ಯಥೆಯಾಗುತ್ತದೆ. ಈಗಲಾದರೂ ತಾವು ಯಾವುದೇ ತಾರತಮ್ಯ ಮಾಡದೆ ನಮ್ಮ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಸೇರಿಸಿ ಅನುಕೂಲ ಮಾಡಿಕೊಡುತ್ತೇವೆಂದರೆ ಸಂತೋಷ. ಇಲ್ಲದಿದ್ದರೆ ನಾನು ತಮ್ಮ ಮುಂದೆ ಬಂದು ಕೂರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ವಾಟಾಳ್ ನಾಗರಾಜ್ ಅವರಿಗೆ ಹೇಳುವ ಜನ ಜಾಸ್ತಿ ಎಂದು ಕಾಣುತ್ತದೆ. ನಿಮ್ಮ ತಾಲ್ಲೂಕನ್ನು ಸೇರಿಸಿದೆಯಲ್ಲ, ಬೇಕಾದರೆ ಓದಿ ಹೇಳುತ್ತೇನೆ ಕೇಳಿ ಗುಂಡ್ಲುಪೇಟೆ, ಚಾಮರಾಜಪೇಟೆ, ಹುಣಸೂರು ತಾಲ್ಲೂಕುಗಳನ್ನು ಸೇರಿಸಿದೆ ಕುಳಿತುಕೊಳ್ಳಿ. ಬರೀ ಆಪಾದನೆ ಮಾಡುವುದೇ ಹೊರತು ಕೇಳುವ ಸೌಜನ್ಯ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡು :– ಅವಸರದಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ :– ಮಾನ್ಯ ಕಂದಾಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆ ಬರಗಾಲ ಜಿಲ್ಲೆ ಅಲ್ಲವೆಂದು ಹೇಳಿರುವುದರಿಂದ ಮಾತನಾಡುವುದಕ್ಕೆ ಅವಕಾಶವಾಗಿಲ್ಲ. ನಮ್ಮಲ್ಲಿ ಕುಡಿಯುವ ನೀರಿನ ಬರಗಾಲ ಎಂದರೆ ಜನವರಿಯಿಂದ ಏಪ್ರಿಲ್‌ವರೆಗೆ ಹೇಳತೀರದು. 4 ಮೈಲಿ ದೂರ ಹೋಗಿ ಕುಡಿಯುವ ನೀರನ್ನು ತರಬೇಕಾಗುತ್ತದೆ. ಕೊಳವೆ ಬಾವಿ ಇದ್ದರೆ ಒಂದು ಫರ್ಲಾಂಗ್ ಕೊಡಪಾನ ಇಟ್ಟು ಕಾಯುವ ಪರಿಸ್ಥಿತಿ ಇದೆ. ದಕ್ಷಿಣ ಕನ್ನಡ ಜಿಲ್ಲೆಗೆ ಬೇರೆ ಯಾವ ಬಾಬಿಗೆ ಹಣ ಕೊಡದಿದ್ದರೂ ಕುಡಿಯುವ ನೀರಿನ ಪೂರೈಕೆಗಾಗಿ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ :— ನಮ್ಮ ಬೇಲೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬರ ತುಂಬಾ ಇದೆ. 53 ಬಾವಿಗಳನ್ನು ಸರ್ಕಾರ ಮಂಜೂರು ಮಾಡಿದ್ದರೂ ಬಾವಿಗಳನ್ನು ಕೊರೆಯುವುದಕ್ಕೆ ಬಹಳ ಕಷ್ಟವಾಗಿದೆ. ನೀರು ಬರತಕ್ಕ ಬಾವಿಗಳಲ್ಲಿ ಕೂಡ ನೀರಿನ ಸಮಸ್ಯೆ ಉದ್ಭವವಾಗಿದೆ. ಇರತಕ್ಕ ಬಾವಿಗಳಲ್ಲಿ ನೀರು ಬತ್ತಿ ಹೋಗಿದೆ. ಪಕ್ಕದಲ್ಲಿ ತೆಗೆದ ಬಾವಿಯಲ್ಲಿ ನೀರು ಬಂದಿದೆ. ಕೊಳವೆ ಬಾವಿಗೆ ಬೇಕಾದ ಪೈಪನ್ನು ಒದಗಿಸುವುದಕ್ಕೆ ನಮಗೆ ಅವಕಾಶ ಇಲ್ಲವೆಂದು ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ, ಜಿಲ್ಲಾಧಿಕಾರಿಗಳು ಅದೇ ಮಾತನ್ನು ಹೇಳುತ್ತಾರೆ. ಕೆಲವು ಕಡೆ ಬಾವಿ ತೆಗೆದಿದ್ದಾರೆ. ನೀರು ಇದೆ. ಆದರೆ ಪವರ್ ಇಲ್ಲದೆ ಜನರಿಗೆ ನೀರು ಕುಡಿಯುವುದಕ್ಕೆ ಸಿಗುತ್ತಿಲ್ಲ. ಇಂಥ ಸಮಸ್ಯೆಗಳನ್ನು ಪರಿಹರಿಸುವಂತೆ ಕಂದಾಯ ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಂಡ್ಯ ಜಿಲ್ಲೆಗೆ ಒಂದು ಕೋಟಿ 75 ಲಕ್ಷ ರೂಪಾಯಿ ಬರ ಪರಿಹಾರಕ್ಕೆ ಬೇಕೆಂದು ಜಿಲ್ಲಾಧಿಕಾರಿಗಳು ಕೇಳಿದ್ದರು. ಅದರಲ್ಲಿ 99 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಉಳಿದ 76 ಲಕ್ಷ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳುತ್ತೇನೆ. ನಮ್ಮಲ್ಲಿರತಕ್ಕ ಸಮಸ್ಯಾತ್ಮಕ ಹಳ್ಳಿಗಳನ್ನು ಈ ಒಂದು ಬರ ಪರಿಹಾರ ಯೋಜನೆಯಲ್ಲಿ ಸೇರಿಸಿಕೊಂಡು ಕೆಲಸ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೀರಾ? ಕಂದಾಯ ಮಂತ್ರಿಗಳು ಬರಗಾಲ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಮಾಡಬೇಕೆಂದು ಆಗಲೇ ಒತ್ತಾಯಿಸಿದ್ದೇನೆ. ಇಡೀ ರಾಜ್ಯದಲ್ಲಿ ಭೀಕರ ಬರಗಾಲವನ್ನು ಎದುರಿಸುವ ನಾಗಮಂಗಲ ತಾಲ್ಲೂಕಿಗೆ ಭೇಟಿ ನೀಡಲು ಒಂದು ದಿನವನ್ನು ಗೊತ್ತು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲಾ ಶಾಸಕರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್ತಿನ ನಡುವಣ ವ್ಯತ್ಯಾಸಗಳು ಏನು ಬರಗಾಲ ಪೀಡಿತ ಪ್ರದೇಶಗಳಲ್ಲಿ ಇದೆ ಅಂಥ ಪ್ರದೇಶಗಳಿಗೆ ಕಂದಾಯ ಮಂತ್ರಿಗಳು ಭೇಟಿ ನೀಡಿ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಬಿ.ಜಕನೂರ್ :— ಬೆಳಗಾಂ ಜಿಲ್ಲೆ ಅಥಣಿ ತಾಲ್ಲೂಕನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ :— ನಮ್ಮ ತಾಲ್ಲೂಕು ಭೀಕರ ಬರಗಾಲದ ತಾಲ್ಲೂಕು. ದಯವಿಟ್ಟು ಶಾಸಕರನ್ನು ಕೇಳಿ ಬರಗಾಲ ಕಾಮಗಾರಿ ತೆಗೆದುಕೊಳ್ಳುವಂತೆ ಡೈರೆಕ್ಷನ್ ಕೊಡಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಗ್ರಾಮಕ್ಕೂ ಇನ್ನೊಂದು ಗ್ರಾಮಕ್ಕೂ ಐದಾರು ಕಿಲೋಮೀಟರ್ ದೂರ ಇದೆ. ನಡುವೆ ನೀರು ಸಿಗುವುದಿಲ್ಲ. ಆದ್ದರಿಂದ ಅಂಥ ಸ್ಥಳಗಳಲ್ಲಿ ಶಾಸಕರನ್ನು ಕನ್‌ಸಲ್ಟ್ ಮಾಡಿ ಬೋರ್‌ವೆಲ್ ಹಾಕಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಕಾಗೋಡು ತಿಮ್ಮಪ್ಪನವರಿಗೆ ಏನು ತೊಂದರೆಯಾಗಿದೆಯೋ ಅದೇ ತೊಂದರೆ ನಮಗೂ ಆಗಿದೆ. ಎಲ್ಲಿ ಮಳೆ ಜಾಸ್ತಿಯಾಗಿದೆ ಅಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಎಷ್ಟು ಕೊಡುತ್ತಾರೆಂದು ಹೇಳಿಲ್ಲ. ಎಲ್ಲಿ ಐ.ಪಿ.ಸೆಟ್ಸ್ ಇಲ್ಲ, ಎಲ್ಲಿ ರಸ್ತೆಗಳಿಲ್ಲ, ಎಲ್ಲಿ ಭಾರಿ ತೊಂದರೆಯಾಗಿದೆ ಅಂಥ ಕಡೆ ದಾರಿ ತೋರಿಸಬೇಕು. ಇನ್ನೊಂದು ಪ್ರಶ್ನೆ ಏನೆಂದರೆ ಆಣೇವಾರು ಎಂದು ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ ಗೊತ್ತಿದೆ ಹನುಮಾನ್ ಪಹಣಿ ಎಂದು. ಆ ಹನುಮಾನ್ ಪಹಣಿ ಕೊಡುವುದನ್ನು ನಿಲ್ಲಿಸುತ್ತೀರಾ? ಹನುಮಂತನ ಕಟ್ಟೆ ಮೇಲೆ ಕುಳಿತು ಬರೆಯುವುದು ಹನುಮಾನ್ ಪಹಣಿ ಎಂದರೆ ಎಲ್ಲಾ ಕಡೆ ಅದಿದೆ. ಹನಮಂತನ ಕಟ್ಟೆ ಮೇಲೆ ಕುಳಿತು ಜೋಳ, ಗೋಧಿ, ಅದು ಇದು ಇದನ್ನೆಲ್ಲಾ ಪಟ್ಟಿ ಮಾಡಿ ಬರೆಯುತ್ತಾರೆ. ಅದಕ್ಕೆ ಹನುಮಾನ್ ಪಹಣಿ ಎಂದು ಹೆಸರು. ಪಹಣಿ ಪತ್ರದಲ್ಲಿ ಒಂದಿದ್ದರೆ ಆಣೇವಾರಿಯಲ್ಲಿ ಬೇರೆ ಇರುತ್ತದೆ. ಅದಕ್ಕೂ ಇದಕ್ಕೂ ಸಂಬಂಧ ಇರುವುದಿಲ್ಲ. ಆದ್ದಿರಿಂದ ಈ ಹನುಮಾನ್ ಪಹಣಿಯನ್ನು ನಿಲ್ಲಿಸುತ್ತೀರಾ? ಇದರ ಬಗ್ಗೆ ತಾವು ಹೇಳಬೇಕು. ಆಮೇಲೆ ತಾಲ್ಲೂಕು ಮಟ್ಟದಲ್ಲಿ ಬರಗಾಲ ಪರಿಹಾರ ಸಮಿತಿಗೆ ಎ.ಸಿ.ಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದರ ಬದಲು ಎಂ..ಎಲ್,ಎ.ಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :— ಕುಣಿಗಲ್ ತಾಲ್ಲೂಕಿನಲ್ಲಿ ಒಂದು ವಿಶೇಷ ಪರಿಸ್ಥಿತಿ ಕಾಣುತ್ತಿದೆ. ಕೆಲಸಗಳ ಮೇಲ್ವಿಚಾರಣೆಯನ್ನು ಜಿಲ್ಲಾ ಪರಿಷತ್ತಿನ ಇಂಜಿನಿಯರ್‌ಗಳು ನೋಡುತ್ತಾರೆ, ಕೆಲಸ ಆದಮೇಲೆ ದುಡ್ಡು

ಬಂದಾಗ ಶೇಕಡ 20ರಷ್ಟು ಹಿಡಿದುಕೊಂಡು ಕೆಲಸ ಮಾಡಿದವರಿಗೆ ದುಡ್ಡು ಕೊಡುತ್ತಿದ್ದಾರೆ. ಈ ವಿಶೇಷ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಾದರೆ ದಯವಿಟ್ಟು ತಕ್ಷಣ ಮಾಡಿ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ನಾನು ಮಾತನಾಡುವ ಕಾಲಕ್ಕೆ ಒಂದು ವಿಷಯ ಹೇಳಿದ್ದೆ. ಸದನದ ಸಮಿತಿ ಮಾಡಬೇಕು ಎಂದು. ಮಂತ್ರಿಗಳನ್ನು ಕೇಳುತ್ತಿದ್ದೇನೆ, ಕರ್ನಾಟಕದಲ್ಲಿ ಏನು ಬರಗಾಲ ಇದೆ ಇದಕ್ಕೆ ವಿಶೇಷವಾದ ಸದನದ ಸಮಿತಿಯನ್ನು ತಾವೇನಾದರೂ ಮಾಡುತ್ತೀರಾ ಎಂದು.

ಶ್ರೀ ಎಸ್.ಹೆಚ್.ಕೌಜಲಗಿ :– ನಮ್ಮ ಬೈಲಹೊಂಗಲ ತಾಲ್ಲೂಕು ಬರಗಾಲಪೀಡಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ. ನಾನು ಬಾಬಾಗೌಡ ಪಾಟೀಲರು ವಿರೋಧಪಕ್ಷದಿಂದ ಬಂದಿದ್ದೇವೆ. ದಯಮಾಡಿ ಬೈಲಹೊಂಗಲ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಫ್ಲಡ್ ರಿಲೀಫ್ ಸಲುವಾಗಿ 10 ಲಕ್ಷ ರೂಪಾಯಿಗಳನ್ನು ಬೆಳಗಾಂ ಜಿಲ್ಲೆಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ನಿನ್ನೆ ದಿವಸ ಪ್ರಶ್ನೆ ಕೇಳಿ ಫ್ಲಡ್ ರಿಲೀಫ್ ಸಲುವಾಗಿ ಎಸ್ಟಿಮೇಟ್ ಆಗಿದ್ದರೂ ಏತಕ್ಕೆ ಹಣ ಖರ್ಚು ಮಾಡಿಲ್ಲ ಎಂದರೆ ಇಂಥದಕ್ಕೆ ಖರ್ಚು ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಬಿಡುಗಡೆ ಮಾಡಿದಂಥ ಹಣವನ್ನು ಖರ್ಚು ಮಾಡುವುದಕ್ಕೆ ಹಣ ಇದೆಯೋ ಇಲ್ಲವೋ ಹೇಳಬೇಕು. ಎರಡೇ ಎರಡು ಕಂಬ ಇದ್ದು ಎಲೆಕ್ಟ್ರಿಸಿಟಿ ಕೊಡುತ್ತಿರುವ ಕಡೆ ಪ್ರಿಯಾರಿಟಿ ಮೇಲೆ ಐ.ಪಿ. ಸೆಟ್ಸ್‌ಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ :– ಸನ್ಮಾನ್ಯ ಅಧ್ಯಕ್ಷರೆ, ನೀರಾವರಿ ಪ್ರದೇಶದಲ್ಲಿ ಯಾವುದೇ ಒಂದು ಕಾಮಗಾರಿಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇರುವುದಿಲ್ಲ. ಅಲ್ಲಿ ಕೂಡ ಕುಡಿಯುವ ನೀರಿನ ಅಭಾವ ಇರುತ್ತದೆ. ಜಿಲ್ಲಾಧಿಕಾರಿಗಳನ್ನು ಕುಡಿಯುವ ನೀರಿನ ಬಾವಿ ಕೇಳಿದರೆ ಆದ್ಯತೆ ಕೊಡುವುದಿಲ್ಲ. ಆದ್ದರಿಂದ ನೀರಾವರಿ ಪ್ರದೇಶದಲ್ಲಿ ಕೂಡ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಾ ಬರಗಾಲದ ಅಭಾವ ಇದ್ದಾಗ ಕಳೆದ ಎರಡು ಮೂರು ತಿಂಗಳಲ್ಲಿ ಮೇವು ಸಾಗಾಣಿಕೆಗೆ ವಾಹನ ಇಲ್ಲದೆ ರೈತರು ತೊಂದರೆಪಟ್ಟಿದ್ದಾರೆ. ಆದ್ದರಿಂದ ಅದಕ್ಕೆ ವಾಹನ ಒದಗಿಸಬೇಕೆಂದು ಕೇಳಿಕೊಂಡು ಮಂಡ್ಯ ಜಿಲ್ಲೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದೂ ಕೇಳಿಕೊಳ್ಳುತ್ತೇನೆ. ಮಂಡ್ಯ ಜಿಲ್ಲೆಗೆ ಇನ್ನೂ ಕೂಡಾ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ :– ಅಧ್ಯಕ್ಷರೇ, ಈ ವರ್ಷ ಅತೀ ಮಳೆಯಿಂದಾಗಿ ಅಡಿಕೆ ತೋಟಗಳು ಸಂಪೂರ್ಣವಾಗಿ ನಾಶವಾಗಿವೆ. ಈ ಬಗ್ಗೆ ಪರಿಹಾರ ಒದಗಿಸುವ ಬಗ್ಗೆ ವ್ಯವಸ್ಥೆ ಮಾಡಬೇಕು. ಮತ್ತೆ ಸಮುದ್ರ ಕೊರತೆಯಿಂದ ಭೂಮಿ ಸಮುದ್ರ ಸೇರುತ್ತಿದೆ. ಆ ಬಗ್ಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಐ.ಎಂ. ಶೆಡ್‌ಶ್ಯಾಳ್ :– ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕನ್ನು ಸರ್ಕಾರದವರು ಬರಗಾಲ ಪ್ರದೇಶ ಎಂದು ತೋರಿಸಿರುವುದಿಲ್ಲ. ಅಥಣಿ ತಾಲ್ಲೂಕಿನಲ್ಲಿ ತೀವ್ರವಾದ ಬರಗಾಲ ಬಂದಿದ್ದು ದನಕರುಗಳಿಗೆ ಮೇವಿಲ್ಲ. ಜನರು ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಅಥಣಿ ತಾಲ್ಲೂಕನ್ನು ಬರಗಾಲಕ್ಕೆ ತುತ್ತಾಗಿರುವ ಪ್ರದೇಶವೆಂದು ಸಾರಿ ಬರಗಾಲ ಕಾಮಗಾರಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್ :– ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಆಣೇವಾರಿ ಪದ್ಧತಿ ಸರಿಯಿಲ್ಲ, ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿದಾಗ ಇದರ ಬಗ್ಗೆ ಸೂಕ್ತ ಬದಲಾವಣೆಗೆ ಸಲಹೆಗಳನ್ನು ಕೊಡಿ ಎಂದು ಸಚಿವರು ಹೇಳಿದರು. ಈಗಿನ ಆಣೇವಾರಿ ಪದ್ಧತಿ ಶಿಲಾಯುಗದಷ್ಟು ಹಳೆಯ ಕಾಲದ್ದು. ಈ ಮಾಪನದಿಂದ ರೈತರಿಗೆ ಸಾಲ ದೊರೆಯುವುದಕ್ಕೆ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರ ಒಂದು ಸದನ ಸಮಿತಿ ಮಾಡಬೇಕು. ಈ ವಿಚಾರವನ್ನು ಸಮಿತಿ ಪರಿಪೂರ್ಣವಾಗಿ ವಿಚಾರ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವುದು ಸೂಕ್ತ. ರಾಜ್ಯದಲ್ಲಿ ಬರಗಾಲ ಇರುವುದನ್ನು ಸರ್ಕಾರ ಕೂಡಾ ಒಪ್ಪಿದೆ. ಯಾರಾದರೂ ಇವತ್ತು ರೈತರ ಮನೆಗಳಲ್ಲಿ ಚೆಕ್ ಮಾಡುವ ರೀತಿಯಲ್ಲಿ ಸಾಲ ವಸೂಲಿ ಬಗ್ಗೆ ಬ್ಯಾಂಕ್ ಮತ್ತು ಸಹಕಾರ ಸಂಘಗಳು ನೋಟೀಸ್‌ಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ಕೂಡಲೇ ಸಾಲ ವಸೂಲಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಸಿದ್ಧಯ್ಯ :— ಮಾನ್ಯ ಅಧ್ಯಕ್ಷರೇ, ಸರ್ಕಾರ ಕುಡಿಯುವ ನೀರನ್ನು ನಲ್ಲಿ ಮೂಲಕ ಒದಗಿಸುವ ಒಂದು ವ್ಯವಸ್ಥೆಯನ್ನು ಜಾರಿಗೆ ತಂದಿದೆ, ಈ ನೀತಿಗೆ ವಿರುದ್ಧವಾಗಿ ಕೆಲಸಗಳಾಗುತ್ತಿರವುದರಿಂದ ಬಡವರಿಗೆ ಅತಿ ಹೆಚ್ಚಿನ ತೊಂದರೆಯಾಗಿದೆ. ಇವತ್ತು ನಲ್ಲಿ ಮೂಲಕ ಪ್ರೈವೇಟ್ ಜನರು ಜಾಸ್ತಿ ಸಂಪರ್ಕಗಳನ್ನು ತೆಗೆದುಕೊಳ್ಳುತ್ತಿರುವುದರಿಂದ, ಪಬ್ಲಿಕ್ ಟ್ಯಾಪ್ ಮೂಲಕ ನೀರು ಸಪ್ಲೈ ಆಗುವುದಕ್ಕೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನು ಧಾನ್ಯದ ವಿತರಣೆ ಬಗ್ಗೆ ಹೇಳುವುದಾದರೆ ಸಾರ್ವಜನಿಕ ವ್ಯವಸ್ಥೆ ಮೂಲಕ ಎಷ್ಟು ಪ್ರಮಾಣದಲ್ಲಿ ಪ್ರತಿ ಕಾರ್ಡಿಗೆ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತದೆ ಎನ್ನುವ ವಿವರಪಟ್ಟಿಯನ್ನು ನ್ಯಾಯಬೆಲೆ ಅಂಗಡಿಗಳ ಮುಂದೆ, ಸೊಸೈಟಿಗಳ ಮುಂದೆ ಪ್ರಕಟ ಮಾಡುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೆ ತಂದರೆ ಜನರೂ ಕೂಡಾ ಒತ್ತಾಯ ಮಾಡಿ ತಮಗೆ ಬರಬೇಕಾದ ಆಹಾರಧಾನ್ಯವನ್ನು ಕೇಳಿ ಪಡೆಯುವುದಕ್ಕೆ ಅವಕಾಶವಾಗುತ್ತದೆ ಹಾಗೂ ಈ ಮಟ್ಟದಲ್ಲಿ ನಡೆಯುವ ಭ್ರಷ್ಟಾಚಾರ ಹೊರಬರುತ್ತದೆ. ಈ ಎರಡೂ ವಿಷಯಗಳ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ :— ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ 'ದಶಲಕ್ಷ ಬಾವಿ ಯೋಜನೆ' ಮುಖಾಂತರ ಪ್ರತಿ ಜಿಲ್ಲೆಗೆ 2 ಕೋಟಿ ರೂಪಾಯಿ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಹಣ ಕಳೆದ 6 ತಿಂಗಳಿಂದ ಖರ್ಚಾಗುತ್ತಿಲ್ಲ. ಇದು ಖರ್ಚಾದರೆ ಇದು ಉದ್ಯೋಗ ನಿರ್ಮಾಣ ಮಾಡುವ ಯೋಜನೆಯಾಗುತ್ತದೆ. ಕೂಡಲೇ ಸಚಿವರು ಜಿಲ್ಲಾ ಪರಿಷತ್ ಮೂಲಕ ಈ ಕೆಲಸ ಪ್ರಾರಂಭ ಮಾಡಿದರೆ ಬಡವರಿಗೆ, ಕೂಲಿಕಾರರಿಗೆ ಕೆಲಸ ಕೊಡತಕ್ಕದ್ದು ಆಗುತ್ತದೆ. ಎರಡನೆದಾಗಿ ಹಿಂದೆ ಸುಬಾಬುಲ್ ಫಾರ್ಮ್ ಎಂದು ಮಾಡಿದ್ದಾರೆ. ಇದರ ಅಡಿಯಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಆಗಿದ್ದು ಇವತ್ತಿನ ದಿವಸ ಏನೂ ಕೆಲಸ ನಡೆಯುತ್ತಿಲ್ಲ. ಅಲ್ಲಿ ಬಾವಿ ಇದೆ, ಪಂಪ್‌ಸೆಟ್ ಇದೆ. ದನಗಳಿಗೆ ಬೇಕಾಗುವ ಮೇವಿನ ಉತ್ಪಾದನೆ ಬಗ್ಗೆ ಈ ಮೂಲಕ ಇವತ್ತಿನಿಂದಲೇ ಕೆಲಸ ಪ್ರಾರಂಭ ಮಾಡಿದರೆ ಬಹುಶಃ ಫೆಬ್ರವರಿ ತಿಂಗಳಲ್ಲಿ ಪ್ರತಿಯೊಂದು ಫಾರ್ಮ್‌ನಲ್ಲಿ ಕೂಡಾ ಮೇವು ತಯಾರಾಗುತ್ತದೆನ್ನುವ ಆಸೆ ನನಗಿದೆ. ದಯಮಾಡಿ ಮಂತ್ರಿಗಳು ಸುಬಾಬುಲ್ ಫಾರಂಗಳಲ್ಲಿ ಹುಲ್ಲನ್ನು ಬೆಳಸತಕ್ಕ ಏರ್ಪಾಟನ್ನು ತಕ್ಷಣ ಮಾಡಬೇಕೆಂದು ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಶಿರವಾಳ :— ಮಾನ್ಯ ಉಪಾಧ್ಯಕ್ಷಿಣೀಯವರೆ, ಒಂದು ಕಡೆ ಬರಗಾಲ ಇನ್ನೊಂದು ಕಡೆ ಅತಿವೃಷ್ಠಿ. ಅತಿವೃಷ್ಠಿಯಿಂದ ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿಬೇಳೆ ಸಂಪೂರ್ಣವಾಗಿ ನಾಶವಾಗಿದ್ದು ಈಗಾಗಲೇ ಅದು ಸರ್ಕಾರಕ್ಕೆ ಮನಗಂಡಿದೆ. ಉಳಿದಂತಹ ಬೆಳೆಗೆ ಎಷ್ಟೇ ಕ್ರಿಮಿನಾಶಕಗಳನ್ನು ಸಿಂಪಡಿಸಿದರೂ ಸಂಪೂರ್ಣವಾಗಿ ತೊಗರಿಬೇಳೆ ನಾಶವಾಗಿದೆ. ಆದ್ದರಿಂದ ನಮ್ಮ ಗುಲ್ಬರ್ಗ ಜಿಲ್ಲೆಯ ರೈತರು ಕಂಗಾಲಾಗಿದ್ದಾರೆ, ಅವರು ಕಣ್ಣೀರು ಸುರಿಸತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕಾಗಿ ಸರ್ಕಾರದವರು ಕೂಡಲೇ ಸರ್ವೆ ಮಾಡಿಸಿ ಪರಿಹಾರ ಸಿಗತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI. K. LAKKAPPA :- I had suggested one thing. ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಲಿಲ್ಲ. ಅದಕ್ಕೋಸ್ಕರ ಒಂದು ಪರ್ಮನೆಂಟ್ ಬೋರ್ಡ್ ಮಾಡಬೇಕೆಂದು ವಿಚಾರವನ್ನು ತಿಳಿಸಿದ್ದೆ ಎಲ್ಲ ರಿವಾಲ್ವಿಂಗ್ ಫಂಡ್‌ಗೆ ಹಾಕಿ ಅದನ್ನು ಪರ್ಮನೆಂಟ್ ಕ್ಷಾಮ ಪರಿಹಾರ ಸಮಿತಿ ಅಥವಾ ಸಂಸ್ಥೆಯನ್ನು ಮಾಡಿ ಅದು ಯಾವಾಗಲೂ ಯಾವ ಭಾಗದಲ್ಲಿ ಬರ ಬರುತ್ತದೆ ಅಲ್ಲಿಗೆ ಹಣ ಒದಸುರುವುದಕ್ಕೆ ಅಲ್ಲಿ ಎಲ್ಲ ಸೌಕರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಮೇಲೆ ಶತ ಲಕ್ಷ ಬಾವಿಗಳನ್ನು ಮಾಡಿದರೆ, ಓಪನ್ ವೆಲ್‌ಗಳಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೋರ್‌ವೆಲ್‌ಗಳನ್ನು ಹಾಕಬೇಕು. ಓಪನ್ ವೆಲ್‌ಗಳನ್ನು ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ಸಜೆಷನ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :— ಮಾನ್ಯ ಉಪಾಧ್ಯಕ್ಷಿಣೀಯವರೆ, ಈ ವಿಷಯದಲ್ಲಿ ಸುಮಾರು 18 ಜನ ಶಾಸಕರು ಮಾತನಾಡಿದ್ದಾರೆ. 21 ಜನ ಮಾನ್ಯ ಸದಸ್ಯರು ಕ್ಲಾರಿಫಿಕೇಶನ್ ಕೇಳಿದ್ದಾರೆ. ಅದರಲ್ಲಿ ಎಲ್ಲರೂ ಕೂಡ ಕೇಳತಕ್ಕದ್ದು ಇಷ್ಟೆ ಬೋರ್‌ವೆಲ್‌ನ ವಿಷಯವನ್ನು ಕಾಮನ್ ಆಗಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ, ಎಲ್ಲೆಲ್ಲಿ ಬೋರ್‌ವೆಲ್‌ನ ಅವಶ್ಯಕತೆಯಿದೆ ಅಲ್ಲೆಲ್ಲ ಬೋರ್‌ವೆಲ್‌ಗಳನ್ನು ಜಿಲ್ಲಾಧಿಕಾರಿಗಳ

ಮುಖಾಂತರ ಜಿಲ್ಲಾ ಪರಿಷತ್‌ನವರು ಪಿ.ಹೆಚ್.ಇ. ಏಜೆನ್ಸಿ ಮುಖಾಂತರ ಪಬ್ಲಿಕ್ ರೆಪ್ರಸೆಂಟೇಟೀವ್ ಕನ್ಸಲ್ಟ್ ಮಾಡಿ ಎಲ್ಲಿ ಅವಶ್ಯಕತೆಯಿದೆ ಎಲ್ಲಿ ಮಾಡಬೇಕೆಂದು ಅವರು ಸೂಚಿಸುತ್ತಾರೆ ಅಂತಹ ಕಡೆ ಪಿ.ಹೆಚ್.ಇ.ಯವರು ಮಾಡಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಈವೊಂದು ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ. ಅವರು ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡುತ್ತಾರೆ. ಪಟ್ಟಣಪ್ರದೇಶಗಳಿಗೂ ಸಹ ಕುಡಿಯುವ ನೀರಿನ ಸಲುವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಹುಬ್ಬಳ್ಳಿ ಧಾರವಾಡಕ್ಕೆ ಹಣ ಬಿಡುಗಡೆ ಮಾಡಿದ್ದೇವೆ. ಅರ್ಬನ್ ಏರಿಯಾಗಳಿಗೆ ಕುಡಿಯುವ ನೀರಿನ ಸಮಸ್ಯೆ ಎಲ್ಲಿದೆ ಅಲ್ಲಿಗೂ ಕೂಡ 2 ಲಕ್ಷ ಮತ್ತು 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ರಿಪೋರ್ಟ್ ಪ್ರಕಾರ ಹಣವನ್ನು ಬಿಡುಗಡೆ ಮಾಡಿದ್ದೇವೆ. ತಾಲ್ಲೂಕು ರಿಲೀಫ್ ಕಮಿಟಿಗಳನ್ನು ಕಾನ್‌ಸ್ಟ್ಯುಟ್ ಮಾಡಬೇಕೆಂದು ಮೊದಲಿನಿಂದಲೂ ಇದೆ. ತಾಲ್ಲೂಕು ರೀಲೀಫ್ ಕಮಿಟಿಗಳು ವರ್ಕ್ ಮಾಡಬೇಕು. ಅದರಲ್ಲಿ ಶಾಸಕರು ಇರಬೇಕು ಆವರನ್ನು ಕನ್ಸಲ್ಟ್ ಮಾಡಿ ಕೆಲಸ ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೆವು. ಬರಗಾಲ ಕಾಮಗಾರಿ ಕೆಲಸಗಳನ್ನು ಮಾಡುವಾಗ ಶಾಸಕರು ಏನು ಹೇಳುತ್ತಾರೆ ಆವೊಂದು ರಿಲೀಫ್ ವರ್ಕ್‌ನ್ನು ತೆಗೆದುಕೊಳ್ಳಬೇಕೆಂದು ನಾವು ಸ್ಪಷ್ಟವಾಗಿ ಆದೇಶ ನೀಡಿದ್ದೇವೆ. ಪ್ರತಿಯೊಂದು ಸಬ್ ಡಿವಿಜನ್‌ನಲ್ಲೂ ಆಫೀಸರ್‌ಗಳು ಇರುವುದರಿಂದ ಪ್ರತಿಯೊಂದು ಕಡೆಗೂ ಅಸಿಸ್ಟೆಂಟ್ ಕಮೀಷನರ್‌ರವರು ಸೆಕ್ರೆಟರಿಯಾಗಿ ಆಕ್ಟ್ ಮಾಡುವುದಕ್ಕಾಗುವುದಿಲ್ಲ. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ತಹಶೀಲ್ದಾರ್‌ರವರ ಹಿಡಿತಬೇಕು. ಆಫೀಸರ್‌ಗಳಿಂದ ಕೆಲಸ ತೆಗೆದುಕೊಳ್ಳಬೇಕಾದರೆ ಒಬ್ಬ ಅಧಿಕಾರಿ ಇರಬೇಕು. ಆದ್ದರಿಂದ ಅವರುಗಳಿಗೆ ರೆಸ್ಪಾನ್ಸಿಬಲಿಟಿ ಫಿಕ್ಸ್ ಮಾಡಿ ಕೆಲಸಗಳನ್ನು ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಕಾರ್ಯದರ್ಶಿಯಾಗಿ ತಹಶೀಲ್ದಾರ್‌ರವರನ್ನು ಸಹ ಮಾಡಿದ್ದೇವೆ. ಅದರಲ್ಲಿ ಶಾಸಕರನ್ನು ಇನ್‌ವಾಲ್ವ್ ಮಾಡಬೇಕು. ಶಾಸಕರು ಏನು ಕಾಮಗಾರಿಗಳನ್ನು ಹೇಳುತ್ತಾರೆ ಅವಶ್ಯಕತೆಯನ್ನು ನೋಡಿಕೊಂಡು ಜೊತೆಗೆ ಹಣಕಾಸಿನ ವ್ಯವಸ್ಥೆಯನ್ನು ನೋಡಿ ಕೆಲಸ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಶಿವನಂಜಪ್ಪನವರು ಮತ್ತು ಲಕ್ಕಪ್ಪನವರು ಈಗಾಗಲೇ ಹೇಳಿದರು 1 ಲಕ್ಷ ಓಪನ್ ಬಾವಿಗಳ ಪ್ರಶ್ನೆ ಹೇಳಿದ್ದಾರೆ. ಸಂಬಂಧಪಟ್ಟವರಿಗೆ ಮತ್ತು ಎಲ್ಲ ಜಿಲ್ಲಾ ಪರಿಷತ್‌ನವರಿಗೆ ಇವತ್ತೆ ಪತ್ರ ಬರೆದು ಎಲ್ಲಿ ಕಾಮಗಾರಿಗಳು ನಿಂತಿವೆ ಏತಕ್ಕೆ ನಿಂತಿವೆ ಆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಈ ಬಗ್ಗೆ ಆದೇಶವನ್ನು ನೀಡುತ್ತೇನೆ. ಅಥಣಿ ಬಗ್ಗೆ ಮಾನ್ಯ ಜಕನೂರುರವರು ಮತ್ತು ಮತ್ತೊಬ್ಬರು ಹೇಳಿದರು. ಬರಗಾಲ ಕಾಮಗಾರಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಅಥಣಿ ಇನ್‌ಕ್ಲುಡ್ ಆಗಿಲ್ಲವೆಂದು ಹೇಳಿದರು. ನಮ್ಮಲ್ಲಿ ಜಿಲ್ಲಾಧಿಕಾರಿಗಳ ರಿಪೋರ್ಟ್ ಇದೆ ಎಲ್ಲೆಲ್ಲಿ ಬರಗಾಲವಿದೆ ಆ ತಾಲ್ಲೂಕುಗಳ ರಿಪೋರ್ಟ್ ಅದು ಮಾತ್ರ ಬಂದಿದೆ. ಅಥಣಿದ್ದು ಬಂದಿಲ್ಲ. ನಾವು ಟೆಲೆಕ್ಸ್ ಮೆಸೇಜ್ ಕೊಟ್ಟಿದ್ದೇವೆ. ಪುನ: ಅದನ್ನು ಓದಿ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಸ್ಪಷ್ಟವಾಗಿ ಬೆಳಗಾಮ್ ಡಿವಿಜನಲ್ ಕಮೀಷನರ್ ಅವರಿಗೆ 14–11–90ರಲ್ಲಿ ಒಂದು ಟೆಲಿಗ್ರಾಂ ಕೊಟ್ಟಿದ್ದೇವೆ. ಯಾವ್ಯಾವ ಪ್ರದೇಶಗಳು ಈ ಸ್ಕೇರ್‌ಸಿಟಿ ಅಫೆಕ್ಟಡ್ ಆಗಿರುವ ತಾಲ್ಲೂಕುಗಳಾಗಿವೆ ಎಂದು ವಿವರ ಇದೆ, ಅದರಲ್ಲಿ ಇದು ಸೇರಿಲ್ಲ. ಈಗ ನಾನು ಸುಮ್ಮನೆ ಅದನ್ನು ಡಿಕ್ಲೇರ್ ಮಾಡುತ್ತೇನೆ. ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಲ್ಲಿಂದ ರಿಪೋರ್ಟ್ ಬಂದಮೇಲೆ ಅವಶ್ಯಕತೆ ಇದೆಯೆಂದು ಕಂಡುಬಂದಮೇಲೆ ಅದನ್ನು ಸೇರಿಸೋಣ. ಇನ್ನು ಅನೇಕ ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕೆ ಆಗದಿದ್ದರೂ ಕೂಡ ಶ್ರೀ ಶಿವರಾಮೇಗೌಡರು ಮಂಡ್ಯ ಜಿಲ್ಲೆಗೆ ಇನ್ನೂ 70 ಲಕ್ಷ ಬಿಡಗಡೆ ಮಾಡಿ ಎಂದು ಕೇಳಿಕೊಂಡಿದ್ದೇವೆ ಎಂದು ಹೇಳಿದರು. ನಾನು ಈಗಾಗಲೇ ಹೇಳಿದ್ದೇನೆ. ಕೊಟ್ಟ ಹಣ ಖರ್ಚಾದಮೇಲೆ ಇನ್ನೂ ಅವಶ್ಯಕತೆ ಇದ್ದರೆ, ಎಲ್ಲಿ ಅವಶ್ಯಕತೆ ಇದೆ, ಮೈಸೂರು ಆಗಲಿ, ಮಂಡ್ಯವಾಗಲೀ, ಎಲ್ಲ ಜಿಲ್ಲೆಗಳಿಗೆ ಕೊಡೋಣ. ಏಕೆಂದರೆ ನಮ್ಮ ಹತ್ತಿರ ಇನ್ನೂ 12 ಕೋಟಿ ಹಣ ಇದೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಹಂತಹಂತವಾಗಿ ನಾವು ಹಣ ಬಿಡುಗಡೆ ಮಾಡುತ್ತೇವೆ, ಕುಡಿಯುವ ನೀರಿಗೆ ಆದ್ಯತೆ ಕೊಡುತ್ತೇವೆ ಮತ್ತು ಫ್ಲಡ್ ರೀಲೀಫ್‌ಗೆ ಕೂಡ ಎಲ್ಲೆಲ್ಲಿ ಅವಶ್ಯಕತೆ ಇದೆ, ಶಿವಮೊಗ್ಗವಾಗಲೀ, ಬೀದರ್ ಆಗಲಿ, ಎಲ್ಲ ಕಡೆ ಕೂಡ ಆಧಾರದಮೇಲೆ ಹಣ ಬಿಡುಗಡೆ ಮಾಡುತ್ತೇವೆ. ಇದರಲ್ಲಿ ಯಾವ ತಾರತಮ್ಯವನ್ನೂ ಮಾಡುವುದಿಲ್ಲ. ಜನರಿಗೆ ಸಹಾಯ ಮಾಡತಕ್ಕಂಥ ಜವಾಬ್ದಾರಿ ನಮಗೆ ಇದೆ. ಇದರಲ್ಲಿ ಯಾರೂ ಕೂಡ ತಪ್ಪು ಭಾವಿಸಬಾರದು, ಎಲ್ಲರನ್ನೂ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಂಡಿದೆ ಮತ್ತು ಅದನ್ನು ನಾವೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಸುಧಾರಣೆ ಮಾಡುವಂಥ ಯಾವುದೇ ನಿರ್ಧಿಷ್ಟವಾದ ಕಾರ್ಯಕ್ರಮದ ಘೋಷಣೆಯನ್ನು ಸರ್ಕಾರ ಮಾಡಿಲ್ಲ. ಸರ್ಕಾರಕ್ಕೆ ಯಾವ ಕಳಕಳಿಯೂ ಇಲ್ಲ......

ಉಪಾಧ್ಯಕ್ಷರು :– ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎಲ್ಲರಿಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ಅಧಿಕಾರಿಗಳು ಹೋಗಿ ಪ್ರವಾಸ ಮಾಡಿಲ್ಲ, ಮಂತ್ರಿಗಳು ಪ್ರವಾಸ ಮಾಡಿಲ್ಲ. ಈ ಸರ್ಕಾರಕ್ಕೆ ಜನರಿಗೆ ಸಹಾಯ ಮಾಡಬೇಕು ಎಂಬ ಕಳಕಳಿ ಇಲ್ಲ, ಈ ಬಗ್ಗೆ ಯಾವ ಕಾರ್ಯಕ್ರಮವೂ ಇಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:– ನಾವು ಈಗಾಗಲೇ ರಿವ್ಯೂಸ್ ಮಾಡಿ ಕಳಿಸುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿರ್ಧಿಷ್ಟವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದಕ್ಕೆ ಯಾವ ಉತ್ತರವೂ ಇಲ್ಲ. ಕಳೆದ ಆರು ವರ್ಷಗಳಿಂದ ಇರುವ ಬರಗಾಲದ ಸಂದರ್ಭದಲ್ಲಿ ಇಷ್ಟು ಹಗುರವಾಗಿ ಸರ್ಕಾರ ತೆಗೆದುಕೊಂಡಿರುವುದು ಇದು ಮೊದಲನೇ ಸಲ. ರಾಜ್ಯದ ಬರಗಾಲ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ಕಳಕಳಿ ಇಲ್ಲ. ಈ ಸರ್ಕಾರಕ್ಕೆ....

ಉಪಾಧ್ಯಕ್ಷರು :– ನಾನು ನಿಮ್ಮನ್ನು ಕರೆದಿಲ್ಲ. ನೀವು ಹೇಳಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ. ಈಗ ಸಮಯ 2 ಗಂಟೆ 45 ನಿಮಿಷ ಆಗುತ್ತಾ ಬಂದಿದೆ...

(ಗೊಂದಲ)

(ಶ್ರೀ ಬಿ.ಎಸ್ ಯಡಿಯೂರಪ್ಪ ಅವರು ಪ್ರತಿಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:– ಈಗ ನಿಯಮ 68ರ ಮೇರೆಗೆ ಮತ್ತೊಂದು ಚರ್ಚೆ ಇದೆ. ಇನ್ನು ಎಷ್ಟು ಹೊತ್ತು ಸಭೆ ಕುಳಿತುಕೊಳ್ಳಬೇಕು? ಖಾಸಗಿ ಕಾರ್ಯಕಲಾಪಗಳು ಬೇರೆ ಎರಡೂವರೆ ಗಂಟೆ ಇದೆ. ಈಗ ಸಭೆ ಎಷ್ಟು ಹೊತ್ತು ಕುಳಿತುಕೊಳ್ಳಬೇಕೆಂಬ ಬಗ್ಗೆ ಸಭೆಯ ಅಭಿಪ್ರಾಯಬೇಕು.

ಶ್ರೀ ವಾಟಾಳ್ ನಾಗರಾಜ್:– ಆರು ಗಂಟೆವರೆಗೆ ಕುಳಿತುಕೊಳ್ಳೋಣ.

ಉಪಾಧ್ಯಕ್ಷರು:– ಎರಡೂವರೆ ಗಂಟೆ ಖಾಸಗಿ ಕಾರ್ಯಕಲಾಪಗಳಿಗೆ ಬೇಕು. ಪೆಟ್ರೋಲ್, ಡೀಸಲ್ ಅಭಾವದ ಬಗ್ಗೆ ಮುಕ್ಕಾಲು ಗಂಟೆ ಹೊತ್ತು ಚರ್ಚೆಮಾಡಿ ನಂತರ ಖಾಸಗಿ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್:– ಸಭೆಯನ್ನು ಈಗ ಅರ್ಧಗಂಟೆ ಮುಂದಕ್ಕೆ ಹಾಕಬಹುದಲ್ಲ?

ಉಪಾಧ್ಯಕ್ಷರು : ಅಡ್ಜರ್ನ್ ಮಾಡಿದರೆ ತಿರುಗಿ ಜನ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾವಂತೂ ಇದ್ದೇ ಇರುತ್ತೇವೆ.

ಉಪಾಧ್ಯಕ್ಷರು:– ಈಗ ಖಾಸಗಿ ಕಾರ್ಯಕಲಾಪಗಳ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ:– ಮೊದಲು ಡೀಸೆಲ್ ಮತ್ತು ಪೆಟ್ರೋಲ್ ಅಭಾವದ ಚರ್ಚೆ ತೆಗೆದುಕೊಳ್ಳಿ. ನಿಮ್ಮದು ಪೆಟ್ರೋಲ್ ಕಾರು, ನಿಮಗೆ ಬೇಕಾಗುವುದಿಲ್ಲ. ಆದರೆ, ನಮ್ಮದು ಡೀಸಲ್ ಕಾರು, ದಯಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :— ಪೆಟ್ರೋಲ್ ಹಾಗೂ ಡೀಸೆಲ್ ಅಭಾವದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಒಂದು ರೀತಿಯ ತುರ್ತು ಪರಿಸ್ಥಿತಿ ರೀತಿಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ :— ಇವತ್ತು ಶುಕ್ರವಾರ, ನಾವು ಏನಾದರೂ ಊಟಕ್ಕೆ ಹೊರಗಡೆ ಹೋದರೆ, ಮತ್ತೆ ಯಾರೂ ಬರುವುದಿಲ್ಲ. ದಯಮಾಡಿ ಮುಗಿಸಿ ಹೊರಗಡೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ :— ತಮ್ಮದು ಊಟ ಆಗಿರುವ ಹಾಗೆ ಕಾಣುತ್ತದೆ. ತಾವು ಬಾಯಿ ಆಡಿಸುವುದನ್ನು ನೋಡಿದರೆ, ಎಲ್ಲಾ ಮುಗಿಸಿಕೊಂಡು ಬಂದಿರುವ ಹಾಗೆ ಕಾಣುತ್ತದೆ. ಕಾಲಕಾಲಕ್ಕೆ ಊಟ, ಕಾಲಕಾಲಕ್ಕೆ ನಿದ್ರೆ, ಕಾಲಕಾಲಕ್ಕೆ ಎಲ್ಲಾ ವ್ಯವಸ್ಥೆಗಳೂ ತಮಗೆ ಆಗುತ್ತವೆ.

ಉಪಾಧ್ಯಕ್ಷರು :— 10—10 ನಿಮಿಷ ಮಾತನಾಡಿದರೆ ಸಾಕು.

(2) ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಅಭಾವದ ಬಗ್ಗೆ ಚರ್ಚೆ

†ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) :— ಮಾನ್ಯ ಉಪಾಧ್ಯಕ್ಷರೇ, ತಡಿಬೇಡಿಯಾದರೂ ಸಹಿತ, ಕೊನೆಗೂ ಈ ರಾಜ್ಯದಲ್ಲಿ ಅಭಾವಕ್ಕೆ ಈಡಾಗಿರತಕ್ಕ ಡೀಸೆಲ್ ಮತ್ತು ಪೆಟ್ರೋಲ್ ವಿಷಯದ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಆದ್ದರಿಂದ ಈ ಸದನದ ಮೂಲಕ ಈ ರಾಜ್ಯದ ಜನತೆಯ ಮೂಲಕ ತಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿ, ಕಳೆದ ಒಂದೂವರೆ ತಿಂಗಳಿಂದ ರಾಜ್ಯದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಅಭಾವ ಜಾಸ್ತಿಯಾಗಿರುವುದಕ್ಕೆ ಕಳೆದ ವಾರ ಸದನದಲ್ಲಿ ಚರ್ಚೆ ಮಾಡಿದ್ದೆವು. ಚರ್ಚೆ ಮಾಡಿದ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾಗರೀಕ ಪೂರೈಕೆ ಸಚಿವರು ಸದನದಲ್ಲಿ ಒಂದು ಹೇಳಿಕೆ ಕೊಟ್ಟು, ನಾಳೆ ಪ್ರಧಾನ ಮಂತ್ರಿಗಳು ಬರುವವರಿದ್ದಾರೆ, ಅವರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಈ ರಾಜ್ಯಕ್ಕೆ ಏನು ಡೀಸೆಲ್ ಬರಬೇಕು, ಅದನ್ನು ನೇರವಾಗಿ ತರಿಸಿಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆನ್ನುವ ವಿಚಾರವನ್ನು ಈ ಸದನದಲ್ಲಿ ಹೇಳಿದ್ದರು. ಇದಾದಮೇಲೆ ಡೀಸೆಲ್ ಪೂರೈಕೆ ಖೋತಾ ರದ್ದು ಎಂದು ಹೇಳಿ, ನವೆಂಬರ್ 24 ರಂದು ಭಾರತದ ಪೆಟ್ರೋಲ್ ಮತ್ತು ರಾಸಾಯನಿಕ ಖಾತೆ ಸಚಿವರಾದ ಸತ್ಯಪ್ರಕಾಶ ಮಾಳವೀಯ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ದೇಶದಲ್ಲಿ ಡೀಸೆಲ್ ಮೇಲೆ 10 ಪರ್ಸೆಂಟ್ ಖೋತಾ ಇದ್ದು, ಈ ಕಡಿತವನ್ನು ರದ್ದು ಮಾಡಿದ್ದೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರವೂ ಸಹಿತ ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಿದೆ, ರಾಜ್ಯಸರ್ಕಾರವು ಸಹ ಪ್ರಯತ್ನಪಡುತ್ತೇನೆಂದು ಹೇಳಿದ್ದರೂ ಸಹ ಇದುವರೆಗೆ ಡೀಸೆಲ್ ನಗರದಲ್ಲಿರತಕ್ಕ, ರಾಜ್ಯದಲ್ಲಿರತಕ್ಕ ಪೆಟ್ರೋಲ್ ಬಂಕುಗಳ ಮುಂದೆ ಮೈಲಿಗಟ್ಟಲೆ ಕ್ಯೂ ನಿಂತ ವಾಹನಗಳ ಸಂಖ್ಯೆ ಕಡಿಮೆಯಾಗಿಲ್ಲ; ಡೀಸೆಲ್ ಬರ ಇಂಗಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಸರ್ಕಾರ ಇದುವರೆಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ. ಕಳೆದಸಾರಿ ಮಾತನಾಡುತ್ತಿರತಕ್ಕ ಸಂದರ್ಭದಲ್ಲಿ, ವಿರೋಧಪಕ್ಷದವರು ಹೇಳಿದರು. ಕೇಂದ್ರ ಸಚಿವರಾದ ಗುರುಪಾದಸ್ವಾಮಿಯವರನ್ನು ನಾವು ಕೇಳಿದ್ದೇವೆ. ಈ ಸರ್ಕಾರದಿಂದ ಯಾವುದೇ ಮನವಿ ಹೋಗಿಲ್ಲ ಎನ್ನತಕ್ಕ ವಿಚಾರ ಪ್ರಸ್ತಾಪವಾಯಿತು. ದಯಮಾಡಿ, ಸರ್ಕಾರ ಡಿಸೆಲ್ ಕೊರತೆ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ ಎಂಬುದನ್ನು ಸಂಕ್ಷಿಪ್ತವಾಗಿ ಈ ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರಮಂತ್ರಿಗಳು ಹೇಳಿರತಕ್ಕ 10 ಪರ್ಸೆಂಟ್ ಕಡಿಮೆಯಾಗಿದ್ದರೆ, ಇನ್ನೂ ಏತಕ್ಕೆ ಕೊರತೆ ಆಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಡೀಸೆಲ್ ಕೊರತೆ ಒಂದುಕಡೆಯಾದರೆ, ಇಡೀ ರಾಜ್ಯದಲ್ಲಿರತಕ್ಕ ಕೈಗಾರಿಕಾ ಚಟುವಟಿಕೆಗಳು ಸ್ಥಗಿತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಗ್ರಾಮಾಭಿವೃದ್ಧಿ ಕೆಲಸಗಳೂ ಕುಂಠಿತವಾಗಿವೆ. ಈಗತಾನೆ ಮಾನ್ಯ ಕಂದಾಯ ಸಚಿವರು ಹೇಳಿದರು. ಬರಪರಿಹಾರದ ಹಣ ಬಿಡುಗಡೆ ಮಾಡಿದರೂ ಸಹಿತ, ಈ ಹಣವನ್ನು ಖರ್ಚು ಮಾಡುವುದಕ್ಕೆ ಏನು ತೊಂದರೆಯಾಗಿದೆ ಎಂದು. ಇವತ್ತು ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ, ಕುಡಿಯುವ ನೀರು ಕೊಡುವುದಕ್ಕೆ ಈ ಡೀಸೆಲ್ ಅಭಾವದಿಂದ ಅಸ್ತವ್ಯಸ್ತವಾಗಿದೆ. ಈ ಡೀಸೆಲ್ ಕೊರತೆಯಿಂದ ಹೀನಾಯಸ್ಥಿತಿಗೆ ತಲುಪಿರುವುದು ಒಂದುಕಡೆಯಾದರೆ, ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಕಾಳಸಂತೆಯಲ್ಲಿ ಮಾರಾಟ ಮಾಡುವವರು ಜಾಸ್ತಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಕಳೆದ ಸಭೆಯಲ್ಲಿ ನಾವು ಹೇಳಿದೆವು. ರಾಷ್ಟ್ರ ಹಾಗೂ ರಾಜ್ಯದ ಹೆದ್ದಾರಿಯಲ್ಲಿರತಕ್ಕ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲೂ, ಸೋಪು,